ಕರ್ಮವೀರ

ಸಂಪುಟ ೨೦]

ಸಂಚಿಕೆ ೯]

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಪ. ರಾ. ಪುರೋಹಿತ
ಎಂ. ಎ.

ಸಂಸ್ಥಾಪಕರು— ನಿರ್ದೇಶಕರು
ರಂ. ರಾ. ದಿವಾಕರ
ಘಟನಾ ಸಮಿತಿ ಸದಸ್ಯರು.

ರಾಜನೀತಿ

೧

ಸರಕಾರವನು ಮೊದಲು,
ಸಹಧರ್ಮಿಣಿಯು ಬಳಿಕ,
ಧನವನಾ ಮೇಲೆ ಪಡೆ ನಾಗರಿಕನೇ
ಸರಕಾರವಿರದಲ್ಲಿ
ಉಳಿವರೇ ನಿನ್ನಲ್ಲಿ
ಸತಿಸುತರು? ಧನಕನಕ ನಿಲ್ಲಬಹುದೇ?

೨

ಧಾರ್ಮಿಕ ಗುಣೋಪೇತ,
ರಿಪುಕುಲಕುಠಾರ, ಜನ
ಪಾಲನಾಸಕ್ತ ಸರಕಾರ ಬೇಕು:
ಮಾರ್ಮಿಕದ ಮಾತಿದೆಲೆ
ಬುವಿಗೆ ಮಳೆಯಿದ್ದಂತೆ
ಸರಕಾರ ಜನಕೆ ಜಗದೊಡೆಯನಂತೆ!

೩

ಪಾತ್ರರಿಗೆ ಕೊಡುವ, ಗುಣಿ-
ಗಳಿಗೊಲಿವ, ಸಂಪದವ
ಸರ್ವರಲಿ ಹಂಚುವ ಸುಶೀಲ ಬೇಕು!
ಶತ್ರು-ಮಿತ್ರರ ಭಾವ-
ವರಿವ ಕಲೆ ಬೇಕು, ಮೇಣ್
ಸಮರ ಪರಿಣತಿ ಬೇಕು ಸರಕಾರಕೆ!

(ಸಂಸ್ಕೃತದಿಂದ)

★



ರಂಗೂನಿನ ಪಗೋಡಾಗಳು

ಜಗತ್ತಿನ ಅತಿ ಸುಂದರ ಶಿಲ್ಪಕೃತಿಗಳಲ್ಲಿ ಬ್ರಹ್ಮದೇಶದ "ಪಗೋಡಾ" ಬೌದ್ಧ ಮಂದಿರಗಳೂ ಸೇರುತ್ತವೆ. ರಂಗೂನಿನ ಪ್ರಸಿದ್ಧ ಪಂಚ ಪಗೋಡಾಗಳಲ್ಲಿ ಇದೂ ಒಂದು. ಇಲ್ಲಿ ಬಂದು ನಿತ್ಯವೂ ಬ್ರಹ್ಮೀ ಬೌದ್ಧರು ಬುದ್ಧನನ್ನು ಆರಾಧಿಸುವರು.

ಹುಬ್ಬಳ್ಳಿ

೭ - ೬ - ೧೯೪೮



KARMAVEER Kannada Illustrated Weekly HUBLI

ಲೇ:- ಬಾಗಲೋಡಿ ದೇವರಾಯ, ಬಿ. ಎ. (ಆನರ್ಸ)

ಚಿಕ್ಕಕತೆ

ಕರಪಲ್ಲವದ ಮೋಡಿ

ಮಧುರವಾದ ಎಷ್ಟೋ ಹಾಲೆನಂಥ ದಾಂಪತ್ಯ ಜೀವನಕ್ಕೇ ಮೀಸಲಾಗಿ ಸೃಷ್ಟಿಸಲ್ಪಟ್ಟಂತೆ ಇದ್ದಾನೆ, ನಮ್ಮ ಮಧುಸೂದನ ಆಸಿದ ಎಷ್ಟು ಹಾಲಿನಂಥ ಮಂದ-ಮಧುರಸ್ವಭಾವ. ಅತಿರೇಕ ಚಾಣಾಕ್ಷತೆಯಾಗಲೀ ಮೈದಾನದ ಬಾಹುಳ್ಯವಾಗಲೀ ಇಲ್ಲ; ಹದವಿಳೆರದಷ್ಟು ದಪ್ಪ ವಾದ ಜವಾರ್; ಒಂದು ತುಸು ಜಿಡ್ಡು. ಇವೆಲ್ಲಾ ದಾಂಪತ್ಯ ಜೀವನದ ಸುಪ್ರವೃತ್ತಿಗೆಯು ಮೆರೆ ಒದಗಿ, ಅಲ್ಪ ಮೆಚ್ಚುಗೆಯಿಟ್ಟ ಹಸನಾದ ಸಂಸಾರ ನ್ನು ಅಚ್ಚೊತ್ತಾಗಿ ಮಾಡಿ, ಕೆಲಸಾಟಗಳ ಸೌರಂಭ, ಸಂಸಾರ ಜೀವನದ ಸವಿಬೇನು ಇತ್ಯಾದಿಗಳನ್ನು ಆಸ್ವಾದಿಸಲು ಅತಿ ಉತ್ತಮವಾದ ಪ್ರವೃತ್ತಿಗಳು.

ಹೀಗಿದ್ದರೂ ನಮ್ಮ ಮಧುಸೂದನನ ದಾಂಪತ್ಯದ ಕನಸಾಲಿಗೆ ಹುಳಬಿದ್ದು. ತುಸು ದೆಪ್ಪ ಗಟ್ಟಬೇಕೆಂದು ವಿಧಿಯ ಮನಿತ್ತೆಂದು ತೋರುತ್ತದೆ. ಹೆಚ್ಚಾಗದೆ ಬೆಚ್ಚೆ ಬಾಂದಷ್ಟೆ.

ಮಧುಸೂದನನಿಗೆ ಮದುವೆಯಾದಾಗ ನನ ಗೋದಿಷ್ಟು ಉಭಯಸ್ಥ ಕಟವಾಯಿತು. ಮದುಮಗನಿಗೆ ಏನನ್ನು ಕಾಣಿಕೆಯಾಗಿ ಕೊಡಲಿ ಎಂದು ಪೇಚಿನಲ್ಲಿ ಬಿದ್ದೆ. ಉಂಡಾಡಿಯಾದ ನನಗೆ ನನ್ನ ಗೆಳೆಯರಲ್ಲಿಂದ ಕಡ್ಡೋ ಕಾಡಿಯೋ ಕಾಡಿದೋ ತಂದ ಪುಸ್ತಕಗಳಲ್ಲದೆ ಬೇರೆ ಸಂಪತ್ತು ನಾಸ್ತಿ. ಗೆಳೆಯರಷ್ಟು ಕುಲಿದು, ಕಾಫಿ-ಸಿನೇಮಾಗಳನ್ನು ಸಂಪಾದಿಸಿ, ಲೇವ ಸ್ಕಾಲರಶಿಪ್‌ನಲ್ಲೇ ನವಾಬರಂತೆ ಮೆರೆಯುವ ನನ್ನಂಥ ಲಕ್ಷಾಧೀಶ - ಈ ಸಂಪತ್ತು ಆಧಾರವಾಗಿ ದಟ್ಟ, ಈಗ ಲಕ್ಷ್ಮೀಪತಿಯಾಗುವ ಈ ಮಹಾರಾಯನಿಗ ಏನರ್ಪಿಸಬೇಕು ಎಂದು ತಿಳಿಯದಾಯಿತು. ಕೊನೆಗೊಂದು ವಿಚಾರ ಹೊಳೆದು, ನನ್ನ ಚೌರ್ಯವೃತ್ತಿಯ ಫಲವಾದ ಪುಸ್ತಕ ಭಾಂಡಾರಕ್ಕೆ ಕೈಹಾಕಿದೆ. ಬೇಂದ್ರೆಯವರ "ಗರಿ" ಯಿಂದ 'ನನ ಕೈ ಹಿಡಿ ದಾಕಿ' ಮೊದಲಾದ ಸವಿಹಾಡುಗಳನ್ನು, ರತ್ನನ 'ಸಂಜೆ' ಪ್ರಣಯಗೀತಗಳಿದ್ದ ಪುಟಗಳನ್ನೂ 'ಮೈಸೂರು ಮಲ್ಲಿಗೆ'ಯ ನಲ್ಲಾಡುಗಳನ್ನೂ, ಹರಿದು ಕೆಗೆದೆ. ಸನ್ಮೊಬ್ಬ ಪಠಭಾಗ್ಯ ಮಿತ್ರನ ಹೊಸ ಡೈರಿಯೊಂದನ್ನು ಬಲಾತ್ಕಾರವಾಗಿ ಕಿತ್ತುಕೊಂಡು ಅದರ ಹೊಳೆಯುವ ಮುಖಾಗೆ ಮಿರಗೆದ್ದ, ನಯವಾಗಿ ಕೋಭೆಯಕ್ಕ, ವೇಲೊಕನ್ನು ಆವರಣವನ್ನು ಕುಲಿದು, ಈ ಕವಿತೆಗಳ ಪುಟಗಳಿಗೆ ಓರಣವಾಗಿ ಹೊದಿಸಿ ಹೊಲಿದೆ. ಆ ಮೇಲೆ ನನ್ನ ನೆರೆಯವನಾದ ಹಾಥೀ ಸಾಹೇಬನ ಫೆಲ್ಟ್ ಟೋಪಿಯನ್ನು ಇಸಕೊಂಡು, ಚೆನ್ನಾಗಿ ಹಿಂಡಿ, ಅದರಿಂದ ಒಂದಿಷ್ಟು ಅತ್ತರನ್ನು ಗಿಟ್ಟಿಸಿಕೊಂಡು, ಆ ಕಾಗದಗಳಿಗೆ ಘಮ ಘಮಿಸುವಂತೆ ಮೆತಿದೆ. ನಂತರ, ನನ್ನ ತಂಗಿಯಿಂದಿರಿಂದ ಕೊಂಡ 'ಅನನ ಪೌಡರ' (ಫೇಸ್ ಪೌಡರ) ವನ್ನೂ ಕದ್ದುಕೊಂಡು, ಕೆಂಪುಮಸಿ ಮಿಶ್ರಿಸಿ, ಒಂದು ವಿಧವಾದ ಬಣ್ಣವನ್ನು ಉತ್ಪನ್ನ ಮಾಡಿ, ಈ ಪ್ರೇಮ ಕವಿತೆಗಳ ಹೊತ್ತಿಗೆಗೆ ಬಳಿದು, ಕಲ್ಯಾಣೋತ್ಸವಕ್ಕೆ ಯೋಗ್ಯವಾದ, ಸುಂದರ, ಸುಗಂಧಿತ ಉಡುಗೊರೆಯಾಗಿ ಸಮರ್ಪಿಸಿದೆ. ಮೇಲೆ, ನೆಪೋಲಿಯನ್ ಹಾಥಾರ್ನ್‌ನ ಮನೋಹರ ಸ್ನಿಗ್ಧ ದಾಂಪತ್ಯ ಜೀವನದ ಸೌರಂಭದ ಚರಿತ್ರೆಯೊಂದನ್ನು ಸ್ಥಳೀಯ ಲೈಬ್ರರಿಯಿಂದ ಹಾರಿಸಿ, ಚೌರ್ಯದ ಚಿನ್ಹೆಗಳನ್ನೆಲ್ಲ ಸಂಪೂರ್ಣವಾಗಿ ಅಳಿಸಿ ಮದುವೆ ದಿನ, ಹಸ್ತಾಂತರಿಸಿದೊಡನೆ, ಚತುರ್ಭುಜನಾಗಿ ಮಂಟಪದಲ್ಲಿ ವಿರಾಜಮಾನನಾಗಿದ್ದ ರಮಣೀರಮಣ ಮಧುಸೂದನನಿಗೆ ಅರ್ಪಿಸಿದೆ.

ಕೆಲವು ದಿನಗಳ ನಂತರ, ವಿವಾಹ-ಮಧುವಿನ ಆಸ್ವಾದನಕ್ಕೆ ಬೇಕಷ್ಟು ಅವಕಾಶ ಕೊಟ್ಟ ತರುವಾಯ, ಅವನ ಮನೆಗೆ ದಾಳಿಯಿಟ್ಟ ತಿಂಡಿ ತೀರ್ಥಗಳ ಪೂರೈಯಾದ ನಂತರ, ವಿಚಾರಿಸಿದೆ— ನನ್ನ ಕಾಣಿಕೆ ಪುಸ್ತಕವನ್ನು ಓದಿದೆಯೋ ಎಂದು, ದಾಂಪತ್ಯದ ಮಧುವಿನ ಸವಿಯು ಕುರಿತು ಪುಹಾಜನರ ಅನುಭವ ಸಾರ್ಥವಾಗಿ ಪ್ರಕಟನೆ ಹೊರಡಿಸಿ ದೆನೇ ಎಂದು. ಲೀಲಾವಿಹಾರಗಳ ಕುರಿತಾಗಿ ಕಣ್ಣು ಮಿಟುಕಿಸಿ, ಹಲ್ಲು ಕಿರಿದು, ಹುಡುಗಾಟಿಕೆಯ ಪ್ರಶ್ನೆಗಳನ್ನೆಲ್ಲಾ ಅವನ ಮೇಲೆ ಮಳೆಗರೆದೆ ಆಧಿಕಪ್ರಸಂಗವಾದ ಸಂತಸ ವಿಚಾರಿಸಿದೆ.

"ಏನಪ್ಪಾ, ಬೇಗನೆ ಸಾಹೇಬರವರನ್ನು ಇಷ್ಟು ಬೇಗನೆ ಅಂತಃಪುರಕ್ಕೆ ಕಳಿಸಿದಂತಿದೆ ? ನಿನ್ನ ಅಚ್ಚುಮೆಚ್ಚಿನ ರಾಜಸಭೆಗಳಿಗೂ ದೇವೀ ದರ್ಶನವಾಗಬೇಡವೇ ? " ಎಂದೆ.

ಮಧುಸೂದನ ಗಂಭೀರವಾಗಿ, ಎದುರು ನಿಂತಿದ್ದ ಅಡಿಗೇ ಲಕ್ಷಮ್ಮ (ನನಗೆ ಮಧುವಿನ ನನ ವ.ನರಿ.ಲ್ಲಾ ಗೊತ್ತು ಗೆಳೆಯರ ಎನೆ ಯಲ್ಲೆಲ್ಲಾ ನಾನು ಸಂಚರಿಸುತ್ತೇನೆ) ನವರಿಗೆ ತೀವಿಯ ಬದ, ಕುಲದಿಂದ ಅವರನ್ನು ಬರ ಹೇಳಲು 'ಹುಕುಂ' ಜಾರಿ ಮಾಡಿದ.

ಸ್ವಲ್ಪ ಹೊತ್ತಿನಲ್ಲಿ ದೇವಿಯವರ ಸಾಕ್ಷಾತ್ಕಾರವಾಯಿತು. ಆದರೆ ಅವರ ದರ್ಶನವನ್ನು ಕಂಡು ನನಗೆ ಆಶ್ಚರ್ಯವಾಯಿತು. ಹೊಸ ಗೃಹಲಕ್ಷ್ಮಿಗೆ ಒಪ್ಪುವ, ಲಜ್ಜೆ ಕೂಡಿದ ಗರ್ವ, ಸೊಕ್ಕು ಹೆಮ್ಮೆ, ವ್ಯಯಾರದೊಡನೆ ಬೇಕಾದ ನಲಿವ ನಾಚುಗೆಯ ನಸುಗೆಂಪು ಇಲ್ಲವೇ ಇಲ್ಲ. ಬದಲು ತಟ ನಡುಗುತ್ತಿತ್ತು. ಹೆದರಿದ ಹುಲ್ಲೆ ಮರಿ, ಅಂಜಿದ ದೀನವಾದ ಕಣ್ಣನೋಟ, ಅಳುಕು, ನಡುಗು, ಮತ್ತು ಭಯ ಇದ್ದಂತೆ ತೋರಿತು.

ನನ್ನ ಬರುವಿಕೆಯ ನೋಡಿಸುವ ಇಚ್ಛೆಯಿದ್ದಂತೆ ಪತಿಗೆ ಪ್ರಭುಗಳಿಗೆ ತೋರಲಿಲ್ಲ. ದೇವಿಯವರಿಗೆ ಕುಳಿತುಕೊಳ್ಳುವಷ್ಟು ಧೈರ್ಯವಾಗಲೀ, ಮಹಾರಾಯನಿಗೆ ಅವರನ್ನು ಕೂರಿಸುವಷ್ಟು ಪ್ರೇಮ ಪ್ರೋ, ಗೌರವವೂ ಇದ್ದಂತೆ ತೋರಲಿಲ್ಲ. ಪ್ರಾಣ, ಹೆದರಿಕೊಂಡು, ದೀನವಾಗಿ ಪತಿಚಕ್ರವರ್ತಿಯ ಕಡೆ ದಿಟ್ಟಿಸುತ್ತಿತ್ತು.

ನನ್ನ ಕಡೆಗೆ ಠೀವಿಯಿಂದ ಮಧುಸೂದನ ಕಟಾಕ್ಷವೆಸೆದು "ಹೇಗೆ ? " ಎಂದ ಮೂರ್ತಿ. ಸವಾಲೀ ಮರ್ಜಿಯಿಂದ ಅಡಿಗೇ ಲಕ್ಷಮ್ಮನವರ ಕಡೆಗೆ ತಿರುಗಿ ಉಗ್ರಾಣದ ಬೀಗದ ಕೈಯನ್ನು ಬಿಸಾಕಿದ. ಕಾಯಿ ಪಲ್ಯಕ್ಕೆ ಬೇಕಾದ ಹಣವನ್ನು ಎಸೆದ. ಮತ್ತೆ ದೇವಿಯವರು ಅಡಿಗೇ ಅಮ್ಮನ ಸೆರಗಿನ ಮರೆಯಲ್ಲಿ ನಿರ್ವಿಣ್ಣರಾಗಿ ಅಂತರ್ಧಾನರಾದರು.

ನಾನು ಕಣ್ಣು ಅಗಲವಾಗಿ ತೆರೆದು ವಿಚಾರಿಸಿದೆ- "ಏನಪ್ಪಾ, ಇನ್ನೂ ಅಡಿಗೇ ಅಮ್ಮನವರನ್ನೇ ಪಿತ್ರಾರ್ಜಿತವಾಗಿ ಇರಿಸಿಕೊಂಡಿದ್ದೀಯೆ.? ಹೊಸ ರಾಜ್ಯಭಾರ ಇನ್ನೂ ಪ್ರಾರಂಭವಾಗಲಿಲ್ಲವೇ ? ಏನೋ ಬಹಳ ನಿರಂಕುಶ ಪ್ರಭುತ್ವ ನಡೆಸಿದಂತೆ ಕಾಣುತ್ತಲ್ಲೋ ? ಹುಡುಗಿ ಬಹಳ ಅಂಜಿಕೊಂಡು ಇದ್ದಹಾಗೆ ಕಾಣಿಸ್ತಾಳಲ್ಲೋ ?

ಗಂಭೀರವಾಗಿ ಉತ್ತರ ಬಂತು: "ಅದೇ ನನ್ನ ಕ್ರಮ ನಿನ್ನ ದೇಂಡೆ, ರತ್ನ, ಕವಿಮಹಾಶಯರ ಮದುವೆ ಚಿತ್ರಕ್ಕೂ, ನನ್ನ ಕ್ರಮಕ್ಕೂ ಏನೂ ತಾಳ-ಮೇಳವೇ ಇಲ್ಲ. ನಾನು ಇಂಗ್ಲಿಷ ನಾವೆಲುಗಳನ್ನು ಧಾರಾಳವಾಗಿ ಓದಿದ್ದೇನೆ. ಪ್ರೇಮ, ಹೃದಯ—ಮಿಲನ, ಚಕೋರಗಳಹಾಗೆ ಕಳೆದ ಜೀವನ, ಒಂದು ರಥದ ಎರಡು ಗಾಲಿಗಳು, ಅರ್ಧಾಂಗವಾಗಿರುವುದು, ಜೀವನದ ಭಾರವನ್ನು ಹೊರುವ ಎರಡು ಭುಜ— ಇದೆಲ್ಲಾ ಶುದ್ಧ ಸುಳ್ಳು; ಅಂಥ ವಿಶ್ವಾಸ. ಹೆಂಗಸು ಅನ್ನೋದು, ಜೀವನದಲ್ಲಿ ಅತ್ಯಾವಶ್ಯಕವಾದ ಒಂದು ವಸ್ತು; ಸುಖದ ಸಾಧನ ಈ ವ್ಯಂಗ, ನಮ್ಮ ಉಪಭೋಗಕ್ಕೆ ಬೇಕಾಗಿದೆ ಅಡಿಗೆಗೆ ಲಕ್ಷಮ್ಮ ನವರಿದ್ದಾರೆ, ಬಾಗಿಲು ಕಾಯೋಕೆ ಗಫೂರಸಾಬಿ, ನಮ್ಮ ಪ್ರೇಮದ ಮಟ್ಟಿಗೆ ಹೆಂಡತಿ ಎಂದು ನನ ಸ್ಪಷ್ಟ ವಿಚಾರ. ನನ್ನ ಮನೆಯಾಗ, ಜೀವನ, ಸುಖ—ದುಃಖಗಳಲ್ಲೆಲ್ಲಾ ಸಮಭಾಗಿ ಎಂಬುದೆಲ್ಲಾ ಕತೆಕಾದಂಬರಿಗಳ ಹಿಂದಿನ ಸುಳ್ಳುಕಂತೆ.

"ಮಹಾರಾಯಾ ! ಇದೆಲ್ಲಾ ಎಲ್ಲಿ ಓದಿದೆಯೋ ? ಮನುವಿನ,— ದೇಹವನ್ನು ಕ್ರಯ ಜೀತ ಬರೆಸಿಕೊಳ್ಳುವುದೆಂದು ತಿಳಿದ ಹಾಗೆ ಇದೆಯಲ್ಲಾ ! ಎಲ್ಲಿ ಕಲಿತೆ ಮಹಾರಾಯಾ ಈ ಅದ್ಭುತ ತತ್ವ ?

ನವ ಏಂ ಗಸೂದನನಿಗೆ ಹೊಸ ಇಂಗ್ಲಿಷ ಪುಸ್ತಕಗಳೆಂದರೆ ಜ್ಞಾನಾಗಾರಗಳು; ಜ್ಞಾನದ ಘಟ್ಟ ಹೊಗೆದ ಕತ್ತ ಎಂಬ ದೃಢ ವಿಶ್ವಾಸ. ಮುಸಿ ಗೋಗರೆದೆ:

"ನಿನ್ನ ಪುಸ್ತಕದ ನೀತಿ ಬಾದಶಾಹರ ಕಾಲದ್ದು; ಜನಾನಾಗಳ ಯುಗದ್ದು. ಸುಮ್ಮನೆ ಏನೇನೋ ಓದಿ, ಜೀರ್ಣಿಸದೆ, ಬದುಕು ಹುಗಿದ ಮೇಲೆ ಬಲ ಪ್ರಯೋಗಿಸಿ, ನಿನ ಜೀವನ ನೀನೇ ಕೆಡಿಸಿಕೊಂಡು, ಹಾಳಾಗುತ್ತೀಯ, ಮುಂಕೆ !" ಎಂದು ಎಚ್ಚರಿಸಿದ 'ಹೂಂ' ಎಂದು ... ಯಿಂದ ತಿರಸ್ಕರಿಸಿದ, ಮಧು. "ಹಾಳಾಗಿ ಹೋಗು" ಎಂದೂ ಕೊಂಡು ಬಂದೆ.

ಅವನ ಮನೆಗೆ ಹೋದಾಗಲೆಲ್ಲಾ— ನಾನು ನಿಶ್ಚದ ಅತಿಥಿಯೆಂದು ಮೊದಲೇ ಅರಿಕೆ ಮಾಡಿಕೊಂಡಿದ್ದೇನೆ— ಇದೊಂದು ವಿಷಮ ಪರಿಸ್ಥಿತಿ ಕಣ್ಣು ಮುಂದೆ ಕಟ್ಟನಿಂತಿತು ಮಧು, ಹೆಂಡತಿಯನ್ನು ಸಾಕಿದ ಆಳಳಂತೆ ಕಾಣಬೇಕೆಂದು ನಿಶ್ಚಯಿಸಿದ ಹಾಗೆ ಕಾಣುತ್ತದೆ. ಹೆಂಡತಿ, ಕೆಲವೇ ದಿನಗಳ ಹುಚ್ಚಾಟ ವಿರಬೇಕೆಂದು, ಮೊದಲಿಗೆನೇ ಸಂಕೋಚದಿಂದ ಸುಮ್ಮನಿದ್ದಳು. ಕೊನೆಗೆ ಅಸಹ್ಯವಾದಂತೆ ತೋರುತ್ತದೆ. ಕಣ್ಣೀರು ಸುರಿಸಿದಳು ಬಂಡಾಯ ವೆದ್ದಳು. ಗರ್ಜನೆ—ತರ್ಜನೆ, ಅಶ್ರುಗಂಗೆ, ನರಳಾಟ— ಹೊರಳಾಟ, ಕಾಲಿಗೆ ಬೀಳುವುದು, ದಮ್ಮಯ್ಯ, ಎಲ್ಲಾ ಯಥಾಸಂಗವಾಗಿ ನಡೆಸಿದಂತೆ ತೋರುತ್ತದೆ. ಆದರೆ, ಮಹಾರಾಯ ತನ್ನ ಸ್ವಪ್ನರಾಜ್ಯದಲ್ಲಿ ಅಂತಃಪುರದ ಶಹಾನಶಹಾ ಖಲೀಫನೆಂದು ಕೊಂಡು ಮೆರೆಯುತ್ತಿದ್ದ, ಹುಡುಗಿಯನ್ನು ಕೊತ್ತಿನಂತೆ ಕಾಣುತ್ತಿದ್ದ. ಕೆಲಸದವರ ಎದುರಿಗೂ, ಗೌರವವನ್ನಾಗಲೀ, ಪ್ರೇಮವನ್ನಾಗಲೀ ನಟಿಸುವ ಪ್ರಯತ್ನ ಕೂಡ ಮಾಡುತ್ತಿರಲಿಲ್ಲ ಮನೆಯ ರಾಜ್ಯಭಾರ ಅಡಿಗೇ ಅಮ್ಮನವರ ವಶ ಹಸ್ತದಲ್ಲೇ ಇರು ಯಿತು. ಒಂದು ವಿಚಿತ್ರ ಕೃತ್ರಿಮ ಕಠೋರ ವರ್ತನೆಯನ್ನು ಬಹಳ ನಾಟಕೀಯವಾಗಿ ಕಲಿತು ಬಳಸಿಕೊಂಡಿದ್ದ. ಒಮ್ಮೆ ನಾನಿರುವಾಗಲೇ, ಅಡಿಗೆ ಅಮ್ಮನೋರು ಬಹಳ ಕನಿಕರದಿಂದ ಸುಲತಾನರ ಸನ್ನಿಧಿಯಲ್ಲಿ, ಯಜಮಾನರ ಹೆಂಡತಿ ದಿನವಿಡೀ ಉಣಲಿಲ್ಲ ಎಂದು ದಯಾಪೂರ್ವಕವಾಗಿ ವರದಿ ಮಾಡಿದಾಗ ಮಹಾರಾಯ, "ನಾಳೆನಿಂದ ಒಂದು ಪಾವು ಅಕ್ಕಿ ಕಡಿಮೆ ಬೇಯಿಸಬಹುದು" ಎಂದು ಫರ್ಮಾನ್ ಹೊರಡಿಸಿದ.

ನನಗೆ ಈ ಶುದ್ಧ ಮೊಂಡು, ಅನಾಗರಿಕ ವರ್ತನೆ ಕಂಡು ತಡೆಯಲಾಗಲಿಲ್ಲ. ಬೇಕಷ್ಟು ಉಪದೇಶಿಸಿದೆ. ಮಹಾರಾಯ, ಗುರುವಿಗೆ ತಿರುಮಂತ್ರ ಹೇಳಬೇಕ ? ನಾನು ಅವನಿಗಾಗಿ ಮೊದಲು ಸವಿಯಿಸಿ, ಕಂಡ ಹುಡುಗಿಯರಿಗೆಲ್ಲ ಪ್ರಣಯ ಕವಿತೆ....ಪತ್ರಗಳನ್ನು ಬರೆದು ಕೊಟ್ಟುದನ್ನೇ ನೆನಪಿಸಿದೆ ಅತಿ ಗಾಂಭೀರ್ಯದಿಂದ, ಜ್ಞಾನ ಪಡೆದ ಬುದ್ಧನಂತೆ ಅದೆಲ್ಲಾ ಹುಡುಗಾಟಿಕೆ. ಪ್ರೇಮ ಅನುರಾಗ ಎಲ್ಲ ಅಜ್ಜೀ ಕತೆಗಳು ಈಗ ನಾನು ಅನುಭವಿ ಈ ಡೊಂಬರಾಟ ನನಗೆ ಮೆಚ್ಚುವುದಿಲ್ಲ ಎಂದು ಅಪ್ಪಣೆ ಕೊಡಿಸಿದ ಇದೆಲ್ಲಾ ನಾಟಕೀಯವೆಂದು ಏನೋ ಓದಿದ ಹುಚ್ಚುಬಟ್ಟ ಇಂಗ್ಲೀಷ್ ಕಾದಂಬರಿಗಳ ನಾಯಕರನ್ನು ಅನುಕರಿಸುವುದೆಂದು ನನಗೇನೋ ಗೊತ್ತಾಯಿತು. ಆದರೆ ಕಾದಂಬರಿಗಳ ಮಂಕು ಹಿಡಿದ ಪ್ರಾಣಿಗೆ ಜ್ಞಾನೋದಯ ಮಾಡಿಸೋದು ಹೇಗೆ ? ಎಂದು ಸಮಸ್ಯೆಯಾಯಿತು.

ಒಂದು ದಿನ, ಅವನ ಹೆಂಡತಿಯೇ ಸ್ವತಃ, ನನ್ನನ್ನು ಕಂಡು ಒಣ್ಣಿದು ಕರೆದಳು. "ತಾನು ಅನ್ನ ತಿಂದು ಬಿದ್ದಿರುವ ಪಶುವೇ ? ಹಟ್ಟಿಯಲ್ಲಿ ಕಟ್ಟಿರುವ ದನವೇ ? ಅವನ ಸಂತೋಷ-ದುಃಖಗಳಲ್ಲಿ ಪಾಲಿಲ್ಲವೇ ? ಮನೆಯ ಆಳಿಕೆಯಲ್ಲಿ ಹಕ್ಕಿಲ್ಲವೇ " ಎಂದು ಅಳುತ್ತಳುತ್ತ ಅಂದಳು.

ನನ್ನ ನಾರದ ಸ್ವಭಾವಕ್ಕೆ ಒಳ್ಳೇ ಅನುವಾಯಿತು. ಮಂತ್ರಾಲೋಚನೆಯಿತ್ತೆ. "ಸುಮ್ಮನೇ ಮೋರೆ ಮುಚ್ಚಿ ಕಣ್ಣೀರು ಗಂಗಾ-ಭಾಗೀರಥೀ ಇಳಿಸಿ, ಕಾಲಿಗೆ ಹೊರಳಿದರೆ ಈ ಮೂರ್ಖರಾಯನ ಮಂಕು ಬಿಡದು. ಒಂದಿಷ್ಟು ತಲೆ ಎತ್ತಿ ಎದೆ ಮುಂದೆ ಮಾಡಿ, ಹಲ್ಲು ಕಚ್ಚಿ ಎದುರಿಸಬೇಕು. ಅವನು ಗಂಡನಾಗಿ ಗಂಡನ ದರ್ಪ ತೋರಿದರೆ, ಹೆಂಡತಿಗೂ ಹೆಂಡತಿಯ ದರ್ಪವಿದೆ, ಅಧಿಕಾರವಿದೆ ಎಂದು ತೋರಿಸಬೇಕು. ಪಾದ ಪೂಜೆ ಮಾಡಿ ಚರಣ ದೂಳಿಯಲ್ಲಿ ಹೊರಳಾಡುತ್ತಿರೋದನಕ ಮೋಕ್ಷವಿಲ್ಲ; ಗುಲಾಮಗಿರಿಯೇ ಗತಿ ದಂಗೆ ಏಳಬೇಕು. ಹಕ್ಕು ಸಾಧಿಸಬೇಕು. ಎಂದು ಸಲಹೆಯಿತ್ತು, ಹುಡುಗಿಯ ದೀನ ಮುಖವನ್ನು ನೋಡಲಾರದೆ ಪಲಾಯನ ಮಾಡಿದೆ.

ಮರುದಿನ ಉತ್ಸುಕತೆಯಿಂದ ಬಂದೆ. ಹೇಗೋ ಮಧುಸೂದನನ ದರ್ಶನದ ಶಾಸ್ತ್ರ ಮುಗಿಸಿ, ಲಗುಬಗೆಯಿಂದ ಬಡ ಬೇಗಮ ಸಾಹೇಬರನ್ನು ಕಾದು ನಿಂತೆ ದರ್ಶನ ಸಿದ್ಧಿಸಿತು. ಆದರೆ, ಮೋರೆ ಎಂದಿಗಿಂತ ಪೆಚ್ಚಾಗಿದಿತು ಗಲ್ಲದಲ್ಲಿ ಕಣ್ಣೀರ ಕೋಡಿ ಹರಿದ ಚಿನ್ಹೆಗಳಿದ್ದುವು. ಬಡಪಾಯಿಯನ್ನು ವಿಚಾರಿಸಿದೆ, ಕನಿಕರದಿಂದ "ಏನಾಯಿತಮ್ಮ ?" ಎಂದು.

"ನೀವು ಹೇಳಿದಂತೆ ಮಾಡಿದೆ." ನಿರಾಶೆಯಿಂದ ಹುಡುಗಿ ಅಂದಳು.

"ಏನಾಯಿತು.?

ಹುಡುಗಿ ನಿರ್ವೀರ್ಯಳಂತೆ, ಗಲ್ಲತಿರುವಿದಳು. ... ಐದು, ಐರ್ಬರ ಬೆರಳುಗಳು ಮೂಡಿದ್ದುವು.

ಓ ಹೋ! ಸುಲತಾನರ ದಬ್ಬಾಳಿಕೆಗೂ ಸ್ಪರ್ಶವಾಯಿತೆ ಎಂದು ಹಲ್ಲುಕಡಿದೆ. ನನ್ನ ಮಂತ್ರಾಲೋಚನೆಯ ಸೋಲಿನಿಂದ ಒಮ್ಮೆಗೆ ಅಸ್ವಸ್ಥನಾದೆ. ಒಮ್ಮೆಲೇ ಮಿಂಚಿನಂತೆ, ಸ್ಫೂರ್ತಿ ಹೊಳೆಯಿತು. ಅವಳ ಕಡೆಗೆ ತೀಕ್ಷ್ಣವಾಗಿ ದಿಟ್ಟಿಸಿದೆ.

"ದಂಗೆ ಎಂದರೆ ಇಷ್ಟೇನೆಯೋ!" ಎಂದೆ.

ಹುಡುಗಿ ಕಣ್ಣಿಂದಲೇ ಪ್ರಶ್ನಿಸಿದಳು. "ಒಂದೇ ಏಟಿಗೆ ಶರಣು ಬೀಳುವ, ಎದೆಗೆಡುವ, ಸೋಲು ಒಪ್ಪುವ ದಂಗೆ ಎಂತಹದಮ್ಮ! ಗಂಡಸಿಗೆ ಮಾತ್ರ ಕೈಯಲ್ಲಿ ಐದು ಬೆರಳೆಂದೂ, ಗಂಡಸಿಗೆ ಕೆನ್ನೆ ಇಲ್ಲೆಂದೂ ತಿಳಿದರೆ ಇದೇಗತಿ." ಎಂದೆ ಅರ್ಥಗರ್ಭಿತವಾಗಿ.

ಹುಡುಗಿ, ನಿರಾಶೆ...ಸಾಹಸ, ಎದೆ ನಡುಕ ಅಳಿಗಳ ನಡುವೆ, ಮುಣುಗುವವನು ಹುಲ್ಲುಕಡ್ಡಿ ಹಿಡಿದುಕೊಂಡಂತೆ, ಕೇಳಿದಳು: "ಮಾಡಲೇ ಹಾಗೆ?"

ನಾನು ನೋಟದಲ್ಲೇ ಪ್ರತಿಭಟನೆಯನ್ನು ತಿಳಿಸಿ, ಮಧುಸೂದನನ ಕೋಣೆಗೆ ಹೋದೆ. ವ್ಯಂಗವಾಗಿ: "ಏನಯ್ಯ, ಸುಲ್ತಾನರ ಶಾಸನಕ್ಕೆ ಆರಂಭವಾದಂತೆ ಕಾಣುತ್ತದೆ ನಾಚಿಕೆಯಿಲ್ಲವೇನಯ್ಯ, ಸಣ್ಣ ಹುಡುಗಿಯ ಮೇಲೆ ನಿನ್ನ ನವಾಬಗಿರಿಯ ದಬ್ಬಾಳಿಕೆ ತೋರಿಸುವುದಕ್ಕೆ?" ಎಂದೆ.

ಆತ, ಇನ್ನೂ ವ್ಯಂಗವಾಗಿ, ನಂಜಿನಿಂದ: "ಹೆಂಡಂದಿರೂ.ಗೆಳೆಯರೂ ತಮ್ಮ ತಮ್ಮ ಸ್ಥಾನ ತಿಳಕೊಂಡು ನಡೆದರೆ ಬಹಳ ಚೆನ್ನಾಗಿರುತ್ತೆ" ಎಂದು ಕಚ್ಚಿ,ಕೊಂಕು ಮಾತಾಡಿದ: "ಅಯ್ಯೋ, ನನಗೂ ಬಾದಶಾಹೀ ತೋರುತ್ತೀಯಲ್ಲೋ" ಎಂದು ಬೆರಳು ಕಚ್ಚಿ, ಹಲ್ಲುಕಡಿಯುತ್ತ ನಡೆದು ಬಿಟ್ಟೆ.

ಮೂರನೆಯ ದಿನ ಅವನ ಮನೆಯತ್ತ ಸವಾರಿ ಬೆಳಸಲು, ತುಂಬಾ ಶಂಕೆಯಾಯಿತು ನಾನು ಎಸೆದ ಬೀಜ, ಮರನಾಗಿ ಏನು ಫಲಕೊಟ್ಟಿತೋ ಎಂಬ ಭಯ. ನನಗೆ ಏಕೆ ಬೇಕಿತ್ತಪ್ಪ, ಈ ಗೃಹ ಕುರುಕ್ಷೇತ್ರದಲ್ಲಿ ಕೃಷ್ಣಸಂಧಾನದ ಕೆಲಸ ಎಂದು ವಿಚಾರವೂ ಹೊಳೆಯುತ್ತಿತ್ತು. ಅವನ ಮನೆಯ ಮೆಟ್ಟಲ ಹತ್ತಿರ ನಿಂತು, ಇನ್ನು ಈ ಮನೆಯ ಕಡೆಗೆ ಕಾಲಿಡುವುದಿಲ್ಲೆಂದು ಪ್ರತಿಜ್ಞೆ ಮಾಡಿ, ಹಿಂದಿರುಗಲೇ ಎಂದು ವಿಚಾರ ಹೊಳೆಯಿತು. ಕೆಲವು ಹೆಜ್ಜೆ ಹಿಂದೆ ಸರಿದೆ ಕೊನೆಗೆ ನನ್ನ ಮಂತ್ರಾಲೋಚನೆಯಿಂದ ಬಡಹುಡುಗಿಯ ಅವಸ್ಥೆ ಏನಾಗಿದೆಯೊ, ಎಂಬ ಲವಲವಿಕೆಯೂ ಒಂದಿಷ್ಟು ನಾರದಸಹಜ ಉತ್ಸುಕತೆಯೂ ನನ್ನನ್ನು ಒಳಗೆ ಎಳೆದುವು.

ಮಧುಸೂದನನ ಕೋಣೆಯೊಳಗೆ ಹೊಕ್ಕು, ಅವಾಕ್ಕಾದೆ. ಅಲ್ಲಾ ಆಂದ್ರೆ! ರಾಜರಾಣಿಯರಿಬ್ಬರೂ ಪಲ್ಲಂಗದಲ್ಲಿ ವಿರಾಜಮಾನರಾಗಿದ್ದರು. ಅವಳು ಪಕ್ಕದಲ್ಲೇ ಕೂತು, ತಿಂಡಿ ಬಡಿಸುತ್ತಿದ್ದಳು. ಅಡಿಗೇ ಅಮ್ಮನವರ ನೆರಳು ಸಹ ಅಲ್ಲಿಲ್ಲ. ದರ್ಪದ ಬದಲು ಬಹಳ ವಿನೀತನಾಗಿ, ಮೃದುವಾಗಿ ಗೌರವದಿಂದ ಅವಳ ಕಡೆಗೇ ನೋಡುತ್ತ ಅವಳ ಮೊಗಸಿರಿಯನ್ನು ಕಾಫೀ ಸಮೇತ ಆಸ್ವಾದಿಸುತ್ತ ಇದ್ದ. ಹುಡುಗಿಯ ಮುಖದಲ್ಲೂ ಹೆಮ್ಮೆ, ಪ್ರಸನ್ನತೆ, ಗೆಲುವು, ಪ್ರೇಮಗಳು ಕುಣಿಯುತ್ತ ಇದ್ದುವು. ನಗೆ ನವಿಲು ಮೊಗದಲ್ಲಿ ಕುಣಿದು ಕೇಕೆ ಹಾಕುತ್ತಿತ್ತು.

"ಏನಯ್ಯಾ! ಲಕ್ಷ್ಮೀನಾರಾಯಣ! ಭಕ್ತನಾದ ನಾರದನು ಬಿಜಯಂಗೈದಿದ್ದಾನೆ. ಆಸನಾದಿ, ಕಾಫೀ-ಪ್ರಧಾನ, ಷೋಡಶೋಪಚಾರಗಳು ಎಲ್ಲಿ?' ಎಂದೆ ಮಹೋತ್ಸವದಿಂದ.

ಲಕ್ಷ್ಮೀನಾರಾಯಣರು ಇಬ್ಬರೂ ನನ್ನೆಡೆಗೆ ಮೊಗತಿರುಗಿಸಿದರು. ನಾರಾಯಣನ ಬಲ ಕೆನ್ನೆ ನನಗೆ ಕಂಡಿತು. ಥಕ್ಕನೇ ನನ್ನ ಕಣ್ಣಿಗೆ ಬಿತ್ತು ನಮ್ಮ ಮಧುಸೂದನನ, ಹಾಲು ಕುಡಿದು ತಿಂದು ಕೊಬ್ಬಿ ತುಂಬಿದ, ಬೆಳ್ಳಂಬೆಳ್ಳಗಿನ ಕೆನ್ನೆಯ ಮೇಲೆ ಕಿರಿದಾದ, ಮುದ್ದಾದ, ಕೆಂಪಗಿನ, ಐದು ಬೆರಳುಗಳು ಸ್ಫುಟವಾಗಿ, ಪರಿಷ್ಕಾರವಾಗಿ ಮೂಡಿದ್ದವು

ನೋಡಿ, ಅಗಲವಾಗಿ ಕಣ್ಣು ತೆರೆದೆ. ಲಕ್ಷ್ಮೀದೇವಿಯ ಹೂ ಮೊಗ್ಗಿನಂತೆ ನೀಳವಾದ ತಿರಿದಾಗಿ ಮುದ್ದಾದ ಕೈಗಳ ಐದು ಬೆರಳುಗಳೆಡೆಗೆ ಒಂದು ಕಳ್ಳ ನೋಟ ಹಾಯಿಸಿದೆ. ಮಧುಸೂದನ ಏನೂ ಕಾಣದಂತೆ ಇದ್ದ. ಕಿವಿ ಮಾತ್ರ ಕೆಂಡ ಕೆಂಪಗೆ. ಲಕ್ಷ್ಮೀದೇವಿಯ ಕತ್ತು, ಮೋರೆ, ಕಿವಿಗಳೆಲ್ಲಾ ಕೆಂಡ ಸಂಪಿಗೆಯ ಬಣ್ಣ ತಾಳಿದುವು. ಕಣ್ಣೊಳಗೆ ಲಜ್ಜಾಭಂಗ ನಗೆಯೊಂದು.


ಆ ದಿನ ಎಷ್ಟು ತಿಂಡಿ ಹೋಮ ಮಾಡಿದೆನೋ ಎಷ್ಟು ಕಾಫೀ ಆಪೋಷಣ ಮಾಡಿದೆನೋ ಹೇಳಲಾರೆ.

ದೇಶಾಂತರಗಳಿಂದ

ಪಾಲಿಸ್ತಾನದ ರಕ್ತಪೂರ

ಭದ್ರತಾ ಮಂಡಲ ನಿಯೋಜಿಸಿದ ಮಧ್ಯಸ್ಥರಾದ ಬರ್ನದೊತ್ತೆಯವರು ಯುದ್ಧ ನಿಲ್ಲಿಸಬೇಕೆಂಬ ಆದೇಶವನ್ನು ಮುಟ್ಟಿಸಲು ಪಾಲಿಸ್ತಾನದತ್ತ ತೆರಳಿ ಅರಬ ಮುಖಂಡರೊಡನೆ ಮಾತಾಡಿ ನಿರಾಶೆ ಹೊಂದುವ ಸ್ಥಿತಿಗೆ ಬಂದಿರುವುದಾಗಿ ಸುದ್ದಿ.

ಬ್ರಿಟನ್ ಮತ್ತು ಅಮೇರಿಕೆಗಳ ನಡುವೆ ಪಾಲಿಸ್ತಾನದ ಪ್ರಶ್ನೆಯ ಬಗ್ಗೆ ಭಿನ್ನಾಭಿಪ್ರಾಯವಿದೆಯೆಂಬುದನ್ನು ಆಟ್ಲೀಯವರು ಅಲ್ಲಗಳೆದರು. ಇಲ್ಲಿಯ ವರೆಗೆ ಬ್ರಿಟಿಶರು ಪೂರಯಿಸಿದ ಶಸ್ತ್ರಾಸ್ತ್ರಗಳನ್ನೇ ಅರಬರು ಉಪಯೋಗಿಸುತ್ತಿರುವರೆಂಬ ಮಾತಿಗೆ ಅವರು ಒಪ್ಪಿಗೆಯಿತ್ತರು.



ಇಸ್ರೇಲಿನ ಮುಖ್ಯ ಮಂತ್ರಿ ಬೆನ್ ಗುರಿಯನ್ "ವಿಭಜನೆಗೆ ಆರಬರು ಒಪ್ಪದಿದ್ದರೆ ಇಡೀ ಪಾಲಿಸ್ತಾನವನ್ನೇ ಆಕ್ರಮಿಸುವೆವು."

ಪಾಲಿಸ್ತಾನದ ಕ್ರಿಶ್ಚಿಯನ್ ಸಂಘದವರು ಯೆಹೂದಿ ಸೈನಿಕರು ತಮ್ಮ ಧಾರ್ಮಿಕ ಕಟ್ಟಡಗಳನ್ನು ಸೈನಿಕ ಚಟುವಟಿಕೆಗಳಿಗಾಗಿ ಬಳಸುವರೆಂದು ಆರೋಪಿಸಿ ಜಾಗತಿಕ ಕ್ರೈಸ್ತ ಮುಖಂಡರಿಗೆ ಪರಿಪತ್ರ ಕಳಿಸಿದ್ದಾರೆ.

ತಾತ್ಕಾಲಿಕ ಶಾಂತಿಗೆ ಒಪ್ಪದಿದ್ದಲ್ಲಿ ಆರಬ ರಾಷ್ಟ್ರಗಳು ಜಗತ್ತಿನ ನಿಂದೆಗೆ ಗುರಿಯಾದಾವೆಂದು ಮಧ್ಯ ಪ್ರಾಚ್ಯದ ಕೆಲ ಮುಖಂಡರು ಹೇಳತೊಡಗಿದ್ದಾರೆ.

ಹೈಫಾದಲ್ಲಿಯ ಬ್ರಿಟಿಶ ಸೈನ್ಯದವರ ಪ್ರಕಾರ ವಶಪಡಿಸಿಕೊಂಡ ಹಳೆ ಜೆರೂಸಲೇಂ ನಗರವನ್ನು ಶುಧ್ಯರ್ಥವಾಗಿ ಅರಬರು ಸುಡಲಾರಂಭಿಸಿದ್ದಾರೆ. ಅಲ್ಲಿಂದ ೩೫೦ ಯೆಹೂದಿಗಳನ್ನು ಅವರು ಸೆರೆಹಿಡಿದರೆಂದೂ ೧ ಸಾವಿರ ನಿಃಶಸ್ತ್ರ ಯೆಹೂದಿಗಳನ್ನು ಅಲ್ಲಿಂದ ಖಾಲಿ ಮಾಡಿ ಅರಬ ಪ್ರದೇಶದಲ್ಲಿಯ ಕಾಟವಾನಕ್ಕೆ ಒಗ್ಗಿದ್ದರೆಂದೂ ಹೇಳಿಕೆಯಿದೆ.

ಭದ್ರತಾ ಮಂಡಲ ಕೊಟ್ಟ ಶಾಂತಿಯ ಆದೇಶವನ್ನು ಪಾಲಿಸಬೇಕೆಂಬಲ್ಲಿ ಐದು ಅರಬ ರಾಷ್ಟ್ರಗಳಲ್ಲಿ ಭಿನ್ನಾಭಿಪ್ರಾಯ ತಲೆದೋರಿದೆಯೆಂದು ತಿಳಿಯುತ್ತದೆ. ಈ ಬಗ್ಗೆ ಬ್ರಿಟನ್ನು ಅವುಗಳ ಮೇಲೆ ಒತ್ತಾಯವನ್ನು ತಂದಿದೆಯೆಂದೂ ಗೊತ್ತಾಗಿದೆ. ಸಂ. ರಾ. ಸಂಘವು ಆದೇಶವನ್ನು ಪಾಲಿಸದಿದ್ದರೆ ದಿಗ್ಬಂಧ ಹಾಕುವುದೆಂದೂ ಅವರನ್ನು ಎಚ್ಚರಿಸಿದ್ದಾಗಿ ಸುದ್ದಿ.

ಅರಬರ ಐಕಮತ್ಯ ಭದ್ರವಾದ ತಳಹದಿಯ ಮೇಲೆ ನಿಂತಿಲ್ಲವೆಂದು ಹಲವರ ಅಭಿಪ್ರಾಯವಿದೆ. ಅರಬ ಪ್ರಪಂಚದ ಕಲೀಫಗಿರಿಗಾಗಿ ಸೌದಿ ಅರೇಬಿಯದ ಅರಸ ಇಬನ್ ಸೌದ್, ಈಜಿಪ್ತಿನ ಅರಸ, ಟ್ರಾನ್ಸ್‌ಜೋರ್ಡನ್ನಿನ ಸುಲ್ತಾನನಾದ ಅಬ್ದುಲ್ಲ, ಇರಾಕಿನ ರಾಜಪ್ರತಿನಿಧಿ, ಪಾಲಿಸ್ತಾನದ ಮುಫ್ತಿ ಇವರು ತಮ್ಮ ತಮ್ಮಲ್ಲೇ ಬಡಿದಾಡುವ ಸಂಭವವಿದೆಯೆಂದು ಲಾರ್ಡ ಸ್ಯಾಮೋಲ್ಲಿಯವರ ಅಭಿಪ್ರಾಯ. ಇದರ ಮೇಲೆ ಅರಬ ಸೈನಿಕರ ಶಿಕ್ಷಣ ಶಿಸ್ತುಗಳು ಚೆನ್ನಾಗಿದ್ದಿದ್ದರೆ ಈಗಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ಅವರು ಯೆಹೂದಿಗಳನ್ನು ಪರಾಭವಗೊಳಿಸುತ್ತಿದ್ದರೆಂದೂ ಅವರ ಈ ಒಡಕುಗಳನ್ನರಿತ ಶಿಸ್ತುಗಾರ ಯೆಹೂದಿಗಳು ಅತ್ಯಾಧುನಿಕ ಸಿದ್ಧತೆಯಿಂದ ಸದ್ಯಃ ಒಂದೆರಡೆಡೆ ಸೋತರೂ ವೀರಾವೇಶದಿಂದ ಕಾದಿ ಜಯ ಪಡೆವ ನಂಬಿಗೆಯಿಂದ ಮುಂಬರಿಯುತ್ತಿರುವರೆಂದೂ ತಿಳಿಯಲಾಗಿದೆ.

ಪಾಲಿಸ್ತಾನದ ವಿಭಜನೆಗೆ ರಶಿಯ ಒಪ್ಪಿಗೆ ಕೊಟ್ಟು ಅಮೇರಿಕದ ರಾಜತಂತ್ರನೈಪುಣ್ಯವನ್ನು ಒರೆಗೆ ಹಚ್ಚಿರುವಂತೆ ಯುದ್ಧ ನಿಲ್ಲಿಸಲು ಅರಬರನ್ನು ಬಿನ್ನವಿಸಿಕೊಂಡು ಅಮೇರಿಕವು ಬ್ರಿಟನ್ನಿನ ರಾಜನೀತಿಯ ದೂರದೃಷ್ಟಿಗೆ ನಿಕಷವನ್ನೊಡ್ಡಿದೆಯೆನ್ನಬಹುದು.

ಭದ್ರತಾ ಮಂಡಲದ ಸಭೆಯಲ್ಲಿ ಚರ್ಚೆಗಳ ಗುಡುಗು ನಿಂತು ಸಿಡಿಲಿನಂತೆ ಆ ದೇಶವನ್ನು ಆಚರಣೆಗೆ ತರುವ ಕಾರ್ಯವನ್ನು ಅದು ಕೂಡಲೆ ಗೈಕೊಳ್ಳದಿದ್ದರೆ ಅದರ ಅಸ್ತಿತ್ವಕ್ಕೆ ಅರ್ಥವಿಲ್ಲವಾಗುವ ಪ್ರಸಂಗ ಉಂಟಾದ್ದರಿಂದ ಅದು ಆ ಪ್ರಕಾರ ಕಾರ್ಯಗತಿಯನ್ನು ವೇಳೆಗಳೆಯದೆ ಸಾಗಿಸಬಹುದೆಂದು ವಿಶ್ವಾಸವಿಡಬಹುದು. ಇಲ್ಲದೆ ಹೋದರೆ ಪಾಲಿಸ್ತಾನದ ರಕ್ತಪೂರವು ಮಧ್ಯಪ್ರಾಚ್ಯದಲ್ಲಿ ಮಾತ್ರ ಉಳಿಯದೆ ಅಮೇರಿಕ ಮತ್ತು ಯುರೋಪ ಖಂಡಗಳನ್ನು ರಕ್ತಪಿಪಾಸೆಗೆ ಗುರಿಪಡಿಸಬಹುದಾದ ದುರಂತ ಪರಿಸ್ಥಿತಿಯುಂಟಾಗುವ ಭಯವಿದೆ. ರಶಿಯದೊಡನೆ ಕೆಲವಾದರೂ ವಿಷಯಗಳ ಮೇಲೆ ಮಾತುಕತೆಗೆ ಮುಂದೆ ಬಂದ ಅಮೇರಿಕವು ಇಂಥ ಪರಿಸ್ಥಿತಿ ಬರಲು ಅವಕಾಶ ಕೊಡಲಾರದೆಂದು ಧಾರಾಳವಾಗಿ ಹೇಳಬಹುದು.

ಇಂಡೊನೇಶಿಯದ ಮಾತುಕತೆ

ಇಂಡೋನೇಶಿಯದ ಪ್ರಜಾರಾಜ್ಯ ಮತ್ತು ಡಚ್ಚರ ನಡುವೆ ಪ್ರಾರಂಭವಾದ ಮಾತುಕತೆ ನಯವಾಗಿ ಸಾಗುತ್ತಿದೆ ಎಂದು ತಿಳಿದುಬಂದಿದೆ ಮತ್ತು ಆಗಲೆ ಎಷ್ಟೋ ಸೈನಿಕ ಮತ್ತು ಆರ್ಥಿಕ ವಿಷಯಗಳ ಬಗ್ಗೆ ಒಮ್ಮತ ಉಂಟಾಗಿದೆಯೆಂದು ಸುದ್ದಿ. ರಾಜಕೀಯ ಕ್ಷೇತ್ರದಲ್ಲಿ ಉಭಯ ಪಕ್ಷಗಳಲ್ಲಿ ಈ ಅಂಶಗಳ ಮೇಲೆ ಒಪ್ಪಂದವಾಗಿದೆ.

೧. ಇಂಡೊನೇಶಿಯದ ಸಂಯುಕ್ತ ಸಂಸ್ಥಾನದ ಸಾರ್ವಭೌಮತ್ವ, ಸ್ವಾತಂತ್ರ್ಯ, ಆದರ ಪ್ರಜಾಸತ್ತಾತ್ಮಕ ಮತ್ತು ಮಾಂಡಲಿಕ (Federal) ಲಕ್ಷಣಗಳು.

೨. ಇಂಡೋನೇಶಿಯದ ಸಂ. ಸಂಸ್ಥಾನದಲ್ಲಿ ಕ್ರಾಂತಿಕಾರರಿಗೆ ಸದಸ್ಯತ್ವಕ್ಕಿರುವ ಅರ್ಹತೆ.

೩. ಅಲ್ಲಿಯ ಸದಸ್ಯ ಸರಕಾರಗಳ ಸ್ವರೂಪ ಮತ್ತು ಪರಸ್ಪರ ಘಟನೆಗಳ ನಡುವಣ ಸಂಬಂಧ.

೪. ಆ ಹೊಸ ಕೇಂದ್ರದ ಸಾಮಾನ್ಯ ಅಧಿಕಾರವ್ಯಾಪ್ತಿ, ಗುರಿ, ಅಲ್ಪ ಸಂಖ್ಯಾಕರ ಹಿತಸಂರಕ್ಷಣೆ, ತಾವು ಪಡೆದ ಮೂಲಭೂತ ಹಕ್ಕುಗಳ ಪಾಲನೆ.

ಇನ್ನೂ ನಿರ್ಣಯಿಸಲ್ಪಡುವ ಸಂಗತಿಗಳು ಇಂತಿವೆ.

೧. ಮಧ್ಯಕಾಲದಲ್ಲಿ ಸಾರ್ವಭೌಮವಾಗಿ ಡಚ್ ಸರಕಾರವು ಆಚರಿಸತಕ್ಕ ಸರಕಾರೀ ಕರ್ತವ್ಯಗಳನ್ನು ಪ್ರಜಾರಾಜ್ಯಕ್ಕೆ ಒಪ್ಪಿಸುವದು.

೨. ಇಡಿ ಡಚ್ ಇಂಡೀಸಿಗೆ ಈಗ ಇರುವ ಹಕ್ಕುಗಳನ್ನು ಪುನರ್ದಾನ ಮಾಡುವದು ಇಲ್ಲವೆ ಅವುಗಳನ್ನು ಯಾವುದಾದರೊಂದು ೩ ನೆಯ ಪಕ್ಷಕ್ಕೆ ವಹಿಸುವದು.

೩. ಸದ್ಯದಲ್ಲಿ ಸದಸ್ಯ ಸರಕಾರಗಳಿಗೆ ಇಲ್ಲದ ಸರಕಾರೀ ಹೊಣೆಗಳನ್ನು ವರ್ಗಾಯಿಸುವದು.

೪. ಸಾರ್ವತ್ರಿಕ ಮತಗಣನೆಯ ತಾರೀಕು; ಅದರಲ್ಲಿ ಸಿಕ್ಕ ಕ್ರಾಂತಿಕಾರರ ಮತ್ತು ಡಚ್ ನ್ಯಾಗಿಸಿಯ ಸ್ಥಾನ.

ಆರ್ಥಿಕ ಪ್ರಶ್ನೆಯ ಇತ್ಯರ್ಥದಂತೆ ಇಡಿ ಸಂಸ್ಥಾನದಲ್ಲಿ ಕೇಂದ್ರ ಬ್ಯಾಂಕೊಂದಿರಬೇಕು ಮತ್ತು ಎಲ್ಲೆಡೆ ಒಂದೇ ವಿಧದ ನಾಣ್ಯದ ಚಲಾವಣೆ ಇರಬೇಕು ಎಂದು ಒಪ್ಪಲಾಗಿದೆ. ವ್ಯಾಪಾರ ಧೋರಣ ಕೂಡ ಎಲ್ಲ ಸದಸ್ಯ ಸರಕಾರಗಳಿಗೂ ಒಂದೇ ಇರಬೇಕೆಂದು ನಿರ್ಣಯವಾಗಿದೆ.

✲ ಪಕ್ಷಗಳಲ್ಲಿ ಒಪ್ಪಂದವಾದುದರಿಂದ ಮಂತ್ರಿಮಂಡಲವನ್ನು ಪುನಾರಚಿಸಬೇಕೆಂದು ಇಂಡೊನೇಶಿಯದ ಪ್ರಜಾರಾಜ್ಯದ ಉಪಾಧ್ಯಕ್ಷರೂ ಮುಖ್ಯ ಮಂತ್ರಿಗಳೂ ಆದ ಡಾ. ಮುಹಮ್ಮದ್ ಹಟ್ಟಾ ಅವರು ಹೇಳಿದರೆಂದು ತಿಳಿಯುತ್ತದೆ. ಡಚ್ಚರೊಡನೆ ಮಾತುಕತೆ ಯಶಸ್ವಿಯಾಗಿ ಸಾಗುತ್ತಿರುವದರಿಂದ ರಶಿಯದೊಡನೆ ರಾಜತಾಂತ್ರಿಕ ಸಂಬಂಧವನ್ನು ಬೆಳೆಸಲು ಕಳಿಸಿದ ಪ್ರಜಾರಾಜ್ಯದ ರಾಯಭಾರಿಯಾದ ಡಾ. ಸೂರ್ಸಿಪ್ನೋ ಅವರನ್ನು ಸದ್ಯದ ಪರಿಸ್ಥಿತಿಯ ಬಗ್ಗೆ ವರದಿಯನ್ನು ತಯಾರಿಸಲೆಂದು ತಿರುಗಿ ಕರೆಯಲಾಗಿದೆ.

✲ ಇಂಡೊನೇಶಿಯದ ಪ್ರಜಾ ಸರಕಾರವನ್ನು ಉರುಳಿಸಲು ಪ್ರಯತ್ನಿಸಿದರೆಂಬ ಆರೋಪದ ಮೇಲೆ ೭ ಜನರನ್ನು ಜೈಲಿಗೆ ಕಳಿಸಲಾಯಿತೆಂದು ರಾಯ್ಟರ ಸುದ್ದಿ ಬಂದಿದೆ.

ದಕ್ಷಿಣ ಆಫ್ರಿಕದ ಚುನಾವಣೆ

ದ. ಆಫ್ರಿಕದ ಚುನಾವಣೆಯಲ್ಲಿ ಮುಖ್ಯ ಮಂತ್ರಿಗಳಾಗಿದ್ದ ಜನರಲ್ ಸ್ಮಟ್ಸರಿಗೆ ಸೋಲಾಗಿ ಡಾ. ಮಾಲನ್ ಎಂಬವರಿಗೆ ಜಯ ಸಂಭವಿಸಿತು. ಡಾ. ಮಾಲನ್ನರ ಚುನಾವಣೆಯ ಘೋಷಣೆ ವರ್ಣದ್ವೇಷಮಯವಾಗಿದ್ದು ಅವರ ಜಯ ಹಿಂದೀಯರಿಗೆ ಅಷ್ಟು ಸಂತೋಷವನ್ನುಂಟುಮಾಡಿಲ್ಲ. ಆದರೆ ಇಷ್ಟು ಬೇಗ ಈ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಮಾಡುವದು ಅಸಾಧ್ಯವೆಂದು ತಿಳಿದು ಹಿಂದೀ ಸರಕಾರವು ಎಚ್ಚರಿಕೆಯಿಂದ ಹೊಸ ದ. ಆಫ್ರಿಕ ಸರಕಾರದ ಕಾರ್ಯಗತಿಯನ್ನು ಲಕ್ಷಿಸುತ್ತಿದೆಯೆಂದು ವರದಿಯಿದೆ.

ಡಾ. ಮಾಲನ್ನರ ರಾಷ್ಟ್ರೀಯ ಪಕ್ಷದ ಚುನಾವಣೆಯ ಘೋಷಣೆಯಲ್ಲಿ ಭಾರತೀಯರನ್ನು ಶರೀರ ಸಹಿತ ಹಡಗುಹತ್ತಿಸಿ ದ. ಆಫ್ರಿಕದಿಂದ ಹೊರಗಟ್ಟುವ ವರೆಗಿನ ಅಂಶಗಳಿರುವದು ನಿಜ. ಇಷ್ಟು ಮಾತ್ರದಿಂದ ಅಧಿಕಾರಕ್ಕೆ ಬಂದ ನಂತರ ಹೊಣೆಯನ್ನರಿಯದೆ ಮಾಲನ್ನರು ತಮ್ಮ ಘೋಷಣೆಯನ್ನು ಅಮಲಿನಲ್ಲಿ ತರುವರೆಂದು ಹೇಳಲಾಗದು. ಸ್ಮಟ್ಸರ ಕಾಲದಲ್ಲಾದರೂ ಹಿಂದೀಯರು ಬಹಳ ಸಂತೋಷದಿಂದ ಇದ್ದರೆನ್ನಬರದು. ಅವರ ಕಾಲದಲ್ಲಾದರೂ ಹಿಂದೀಯರನ್ನು ಎಲ್ಲರೊಡನೆ ಸರಿಸಮಾನತೆಯಿಂದ ನಡೆಸಿಕೊಂಡದ್ದು ಕಡಿಮೆ. ಇದರ ಮೇಲೆ ಮಾಲನ್ನರು ಗೆದ್ದುದಾದರೂ ಕೇವಲ ೬ ಹೆಚ್ಚು ಮತಗಳಿಂದ. ಆದ ಕಾರಣ ಅವರ ಪಕ್ಷವು ತನ್ನ ಸಾರಿಕೆಯಂತೆ ಹಿಂದೀಯರೇ ಮೊದಲಾದ ಏಶಿಯನ್ನರ ವಿರುದ್ಧ ಮತ್ತಷ್ಟು ದಿಗ್ಬಂಧನಗಳನ್ನು ಹಾಕಿ ಐರೋಪ್ಯ ಪತಾಕೆಯನ್ನು ಗಗನಕ್ಕೇರಿಸುವ ಹವ್ಯಾಸಕ್ಕೆ ಒಮ್ಮಿಂದೊಮ್ಮೆ ಬೀಳಲಾರರೆಂದು ಹೊಸದಿಲ್ಲಿಯಲ್ಲಿ ಹೇಳಲಾಗುತ್ತಿದೆ.

✲ ಡಾ. ಮಾಲನ್ನರ ಪಕ್ಷವು ಬ್ರಿಟಿಶ ಕಾಮನ್‌ವೆಲ್ತದಿಂದ ದ. ಆಫ್ರಿಕವನ್ನು ಮುಕ್ತಗೊಳಿಸುವ ಇಚ್ಛೆಯುಳ್ಳದ್ದಾಗಿದೆ ಎಂದು ಒಂದೆಡೆ ಸುದ್ದಿ ಹಬ್ಬಿದ್ದಕ್ಕೆ ಸಾಕಷ್ಟು ಆಧಾರ ದೊರೆತಿಲ್ಲ. ವರ್ಣದ್ವೇಷದ ಕಾರ್ಯಕ್ರಮವನ್ನು ಜಾರಿಯಲ್ಲಿ ತರುವುದಾದರೆ ಕಾಮನ್‌ವೆಲ್ತಿನ ಸದಸ್ಯ ರಾಷ್ಟ್ರಗಳಲ್ಲಿ ಘರ್ಷಣೆ ಸಂಭವಿಸಬಹುದೆಂದು ಬ್ರಿಟನ್ನು ಭಯಪಡುವುದೆಂದು ಹೇಳಲಾಗುತ್ತಿದೆ. ಅರಬರಿಗೆ ಭದ್ರತಾ ಮಂಡಲದಲ್ಲಿ ಭಾರತ ಬೆಂಬಲವಿತ್ತಿದ್ದಕ್ಕೆ ವಿರುದ್ಧವಾಗಿ ಯೆಹೂದಿಗಳ ಇಸ್ರೇಲ್ ರಾಜ್ಯಕ್ಕೆ ದ. ಆಫ್ರಿಕ ಸರಕಾರ ಮನ್ನಣೆ ಯಿತ್ತದ್ದು ಸುವೇದ್ಯವಿದೆ. ಇದರಿಂದ ದ. ಆಫ್ರಿಕ ಮತ್ತು ಭಾರತಗಳಲ್ಲಿ ವೈಮನಸ್ಸು ಉಳಿದಂತಾಯಿತಲ್ಲದೆ ಅಳಿದಂತಾಗಲಿಲ್ಲ. ದಿಲ್ಲಿ ಸರಕಾರವು ಈ ಪರಿಸ್ಥಿತಿಯನ್ನು ಚೆನ್ನಾಗಿ ಪರೀಕ್ಷಿಸಿ ತನ್ನ ಧೋರಣವನ್ನು ರೂಪಿಸಿಕೊಳ್ಳಬೇಕಾಗಿದೆ. ಈ ವರ್ಣದ್ವೇಷಕ್ಕೆ ಬ್ರಿಟನ್ನಿನ ಬೆಂಬಲ ಸಿಗಲಾರದೆಂದು ನಂಬಬಹುದಾಗಿದೆ. ಏಕೆಂದರೆ ಅಂತಾರಾಷ್ಟ್ರೀಯ ಸ್ಥಾನವನ್ನು ಭದ್ರಪಡಿಸಿಕೊಳ್ಳಬೇಕೆಂದಿರುವ ಬ್ರಿಟನ್ನಿಂದು ಭಾರತ ಮೊದಲಾದ ಏಶಿಯದ ರಾಷ್ಟ್ರಗಳನ್ನು ಅಸಂತೋಷಕ್ಕೀಡು ಮಾಡಬಾರದು.

✲ ಮತದಾನದ ವಿವರ: ಡಾ. ಮಾಲನ್ನರ ರಾಷ್ಟ್ರೀಯ ಪಕ್ಷವು ತನ್ನ ೭೦ ಸ್ಥಳಗಳ ಜೊತೆಗೆ ಆಫ್ರಿಕನರ ೯ ಸ್ಥಳಗಳ ಬೆಂಬಲ ಪಡೆಯಬಹುದು. ಸಂಯುಕ್ತ ಪಕ್ಷದ ೬೫ ಸ್ಥಳಗಳಿಗೆ ಕಾರ್ಮಿಕರ ೬ ಸ್ಥಳಗಳ ಬೆಂಬಲ ಸಿಗಲಿದೆ; ಅಲ್ಲದೆ ಅವಕ್ಕೆ ಆಫ್ರಿಕನರ ೩ ಸ್ಥಳಗಳ ಬೆಂಬಲವೂ ಇದೆ.

ಒಟ್ಟು ೧೦,೬೭,೪೯ ಜನರು ಮತದಾನ ಮಾಡಿದರು. ೫,೨೪,೨೩೦ ಮತಗಳು ಸಂಯುಕ್ತಕ್ಕೂ (ಸ್ಮಟ್ಸ)— ೪,೧೧೫೩೪ ರಾಷ್ಟ್ರೀಯ ಪಕ್ಷಕ್ಕೂ ೪೧,೮೮೫ ಮತಗಳು ಆಫ್ರಿಕನ್ನರ ಪಕ್ಷಕ್ಕೂ ೨೭,೩೬೦ ಕಾರ್ಮಿಕ ಪಕ್ಷಕ್ಕೂ ಉಳಿದವರಿಗೆ ೭೧,೪೮೦ ಮತಗಳೂ ಬಿದ್ದವು.

ವಿಚಿತ್ರವಿಶ್ವ

ಟಿಬೆಟ್ಟಿನ ಲ್ಹಾಸಾ ನಗರದಲ್ಲಿ ಒಬ್ಬ ಕೊಂಬುಳ್ಳವ ನಿದ್ದನಂತೆ. ಅವನ ಕೊಂಬು ೧೪ ಅಂಗುಲ ಉದ್ದವಿತ್ತು. ಗೌರೀಶಂಕರದ ಸನಿಹದಲ್ಲಿದ್ದ ಬೌದ್ಧ ಧರ್ಮಚಕ್ರ ತಿರುಗುವಾಗ ಪ್ರತಿದಿನ ಬೆಳಗ್ಗೆ ಅವನು ಅದಕ್ಕೆ ನಮಸ್ಕರಿಸುತ್ತಿದ್ದುದೊಂದು ವೈಭವವೆನಿಸಿಕೊಂಡಿತ್ತು.

\+ + +

ಮೆಕ್ಸಿಕೋದಲ್ಲಿ ಗುಯಲಾ ವಾಕ ನೇಗಾಲ ಎಂಬ ಒಬ್ಬ ಅಗ್ನಿ ಭಕ್ಷಕ ನಿದ್ದನು. ಅವನು "ಬೆಂಕಿಯಲ್ಲಿ ಮಿಂಯುತ್ತೇನೆ, ಬೆಂಕಿಯನ್ನು ತಿನ್ನುತ್ತೇನೆ, ಬೆಂಕಿಯಲ್ಲಿ ಆಟವಾಡುತ್ತೇನೆ" ಎಂದು. ಹಾಗೇ ಮಾಡಿ ತೋರಿಸುತ್ತಿದ್ದನು. ಕೆಂಡದಲ್ಲಿ ಮುಳುಗಿರಬಲ್ಲನವನು. ಅಂಥವನು ಅದ್ವಿತೀಯನೇ. ಅವನ ನರಗಳಲ್ಲಿ ಬೆಂಕಿಯ ಉತ್ತೇಜನಕ್ಕೆ, ಉತ್ತರ ರೂಪವಾದ ಸ್ವಾಭಾವಿಕ ಪ್ರತಿಸಂವೇದನೆಯೇ ಉಂಟಾಗುತ್ತಿರಲಿಲ್ಲ. ಅದು ಅವನಿಗೆ ದೈವದತ್ತವಾದ ಒಂದು ಅಪೂರ್ವ ಜಡತೆ. ಬೆಂಕಿಯನ್ನು ಮುಟ್ಟಿದರೆ ಅವನಿಗೆ ಹಿಮದ ಗಡ್ಡೆಯನ್ನು ಮುಟ್ಟಿದಂತಾಗುತ್ತಿತ್ತಂತೆ!

* * *

ಸುಮಾರು ಐನೂರು ವರ್ಷಗಳ ಹಿಂದೆ ಸ್ಪೈಯಿನಿನವರು ಚಿನ್ನದ ಆಸೆಯಿಂದ ದಕ್ಷಿಣ ಅಮೇರಿಕದ ಪೆರು ದೇಶಕ್ಕೆ ಹಡಗು ಹತ್ತಿ ಹೋದರು. ಆ ಮೂಢರು ಅವರ ಧರ್ಮದ ಹೇಳಿಕೆಯ ಪ್ರಕಾರ ಯುಕ್ತಾವಧಿಯಲ್ಲಿ ಅತಿಮಾನವರು ಕಾಣಿಸಿಕೊಂಡರೆಂದು, ಕುದುರೆಯನ್ನು ಕಾಣದ ಅವರು ಕುದರೆ ಸವಾರ ಇಬ್ಬರೂ ಕೂಡಿ ಒಂದು ದೇವತೆ ಎಂದು ತಿಳಿದು, ಸ್ಪಾನಿಷ್ ಕಳ್ಳರಿಗೆ ಸ್ವಾಗತವಿತ್ತರು. ಈ ಕಳ್ಳರ ಮುಖಂಡನಾನ ಪಿಜಾರೋ ಎಂಬವನು ಆ ನಾಡಿನ ಅರಸಾದ ಅತಾಹುವಲ್ಪನನ್ನು ಸೆರೆಹಿಡಿದನು. ಅವನು ತನ್ನನ್ನು ಬಿಡಿಸಿಕೊಳ್ಳಲು ಪಿಜಾರೋ ನಿಂತು ಕೈಚಾಚಿದಷ್ಟೆತ್ತರ ಆ ಕೊಣೆಯಲ್ಲಿ ಚಿನ್ನ ತುಂಬಿ ಕೊಡುವೆನೆಂದು ಹೇಳಿದನು. ಪಿಜಾರೋ ಅವೇ ಪ್ರಕಾರ ವಿಶ್ವಾಮಿತ್ರ ದಕ್ಷಿಣೆ ಬೇಡಿದನು. ಆ ಕೂಡಲೆ ೧ ತಿಂಗಳ ಅವಧಿಯೊಳಗೆ ೧೭ ಅಡಿ ಅಗಲ, ೨೨ ಅಡಿ ಉದ್ದವಿರುವ ಆ ಕೋಣೆಯಲ್ಲಿ ಪಿಜಾರೋ ಮುಟ್ಟಿದ ೯ ಅಡಿ ಎತ್ತರದ ವರೆಗೆ ಚಿನ್ನ ತುಂಬಿಸಲಾಯಿತು! ಆದರೆ ಅದಕ್ಕೆ ಪ್ರತಿ ಫಲವಾಗಿ ಪಿಜಾರೋ ೧೫ ಅಂಗುಲ ಉದ್ದ ಕಿವಿಗಳುಳ್ಳ ಆ ಅರಸನ್ನು ಜೀವಂತ ಸುಡಿಸಿದನು!



ಕೋಡು ಹೊತ್ತ ಕಾಫರ

ಅನೇಕ ವರ್ಷಗಳಿಂದ ಪಿಶಾಚ ರೂಪದ, ಕೊಂಬುಗಳುಳ್ಳ ಮನುಷ್ಯ ಜಂತುಗಳನ್ನು ದೆವ್ವಗಳೆಂದು ಜನರು ತಿಳಿಯುತ್ತ ಬಂದಿದ್ದಾರೆ.

ಮೆಜೀರೆಸ್ಸಿನ ಫ್ರಾನ್ಸಿಸ್ ಟ್ರೊವಿಲೋ ಎಂಬವನಿಗೆ ಹಣೆಯಲ್ಲಿ ಕೋಡು ಮೂಡಿದ್ದವು. ೧೬೯೮ ರಲ್ಲಿ ಅವನು ಮೃತನಾದನು.

ಮೇಲಿನ ಚಿತ್ರದಲ್ಲಿರುವವನು ಇನ್ನೂ ಬದುಕಿರುವ ಆಫ್ರಿಕದ ಕೋಡು ಹೊತ್ತ ಕಾಫರ.

* * *

ಕ್ರಿಸ್ತ ಶಕ ೧೫೧—೧೯೨ ರಲ್ಲಿ ಕಮೋಡಸ್ ಆರೀಯಸ್ ಎಂಬವನು ರೋಂ ಸಾಮ್ರಾಜ್ಯದ ಒಡೆಯನಾಗಿದ್ದನು. ಅವನು ಸೆರೆಯಾಳುಗಳೊಡನೆ ಕುಸ್ತಿಯಾಡುವದರಲ್ಲಿ ನಿಪುಣನಿದ್ದು ಅಂಥ ೧೦೩೫ ಕುಸ್ತಿಗಳಲ್ಲಿ ಗೆದ್ದು ಹರ್ಕ್ಯುಲೀಸನನ್ನು ಬಿಟ್ಟು (ಪಾಶ್ಚಾತ್ಯ ಭೀಮಸೇನ) ತನ್ನನ್ನು ಪೂಜಿಸಿರೆಂದು ಜನರಿಗೆನ್ನುತ್ತಿದ್ದನು! ಅವನ ಮರಣ ಕದೆಯ ಕುಸ್ತಿಯಲ್ಲಿ ನಾರ್ಸಿಸಸ್ ಎಂಬವನ ಹಿಡಿತದಿಂದ ಸಂಭವಿಸಿತು.

ಮಹಿಳಾ-ಲೋಕ

ಸಂಗ್ರಹಕಾರ್ತಿ
"ಹಿರಿಯಕ್ಕ"

ಸುಶಿಕ್ಷಿತ ಸ್ತ್ರೀಯ ಆತ್ಮ ಸಮರ್ಥನ

ಲೇಖಿಕೆ:- ಕೃಷ್ಣಾ ಬಿ. ಎ.

ನಮ್ಮ ಸಮಾಜದಲ್ಲಿ ಸುಶಿಕ್ಷಿತ ಸ್ತ್ರೀಯ ಬಗ್ಗೆ ಹೆಚ್ಚಾಗಿ ಟೀಕೆ ಕೇಳಿಬರುತ್ತಿದೆ. ಅವರಲ್ಲಿ ಅನೇಕ ಕುಂದುಕೊರತೆಗಳನ್ನು ತೋರಿಸಿ ಕೊಡಲಾಗುತ್ತಿದೆ. ಅವಳಲ್ಲಿ ಕುಂದು ಕೊರತೆಗಳು ಇಲ್ಲೆಂದು ನನ್ನ ಅಭಿಪ್ರಾಯವಲ್ಲ. ಹಲವು ಇವೆ. ಆದರೆ ಅದಕ್ಕೂ ಕಾರಣವಿದೆ. ಅದು ಅವಳ ತಪ್ಪಲ್ಲ. ಅವಳಿಗೆ ಯಾವ ಕಾರಣಕ್ಕಾಗಿ ಶಿಕ್ಷಣ ಕೊಡಲಾಗುತ್ತಿದೆ, ಎಂಥ ವಾತಾವರಣದಲ್ಲಿ ಬೆಳೆಸಲಾಗುತ್ತಿದೆ ಎಂಬುವನ್ನು ಅರಿತರೆ ಟೀಕಿಸುವ ಮನೋವೃತ್ತಿಯು ಅಳಿದು ಹೋಗಬಹುದು. ಆದರೆ ಅವಳ ಪರವಾಗಿ ವಿಚಾರ ಮಾಡುವವರು ವಿರಳ.

ಬಾಲಿಕೆಯು ಕಲಿಯುತ್ತಾಳೆ; ಶಿಕ್ಷಣ ಪಡೆದು ಮದುವೆಯಾಗುತ್ತಾಳೆ: ಸಂಸಾರದಲ್ಲಿ ಮಗ್ನಳಾಗಿಬಿಡುತ್ತಾಳೆ. ಯಾವ ಸಮಾಜ ಕಾರ್ಯವನ್ನೂ ಮಾಡುವದಿಲ್ಲ. ಸಾಮಾಜಿಕ ಜೀವನದಲ್ಲಿ ಬೆರೆಯುವದಿಲ್ಲ. ಅಂದ ಮೇಲೆ ಅಶಿಕ್ಷಿತ, ಸುಶಿಕ್ಷಿತರಲ್ಲಿ ಭೇದವೇನು? ಶಿಕ್ಷಣದ ಲಾಭವೇನು ಮುಂತಾಗಿ ಕೇಳಲಾಗುತ್ತಿದೆ. ಇದು ನಿಜವಾದ ಸಂಗತಿ. ನನ್ನ ಬಿ. ಎ., ಎಂ. ಎ. ಆದ ಗೆಳತಿಯರಿದ್ದಾರೆ. ಅವರು ದಿನಾಲು ಪತ್ರಿಕೆಗಳನ್ನು ಸಹ ಓದುವದಿಲ್ಲ. "ನಮಗೇನ ಮಾಡೋದದ ಅದನ್ನು ತಗೊಂಡು" ಅಂತ ಅವರ ಅಭಿಪ್ರಾಯ. ಸಂಸಾರ ಸುಸೂತ್ರವಾಗಿದ್ದರೆ ಆಯಿತು. ಆದರೆ ಸಂಸಾರವನ್ನು ಕೂಡ ಅವಳಿಗೆ ಸರಾಗವಾಗಿ ಸಾಗಿಸಲು ಬರುವದಿಲ್ಲೆಂದು ಅವಳ ಮೇಲೆ ಆರೋಪವಿದೆ. ಇದು ಎಷ್ಟರ ಮಟ್ಟಿಗೆ ನಿಜವಿದೆ ಮುಂದೆ ನೋಡೋಣವಂತೆ. ಇರಲಿ.

ಸ್ತ್ರೀ ಶಿಕ್ಷಣದ ಕುಂದು ಕೊರತೆ

ಸುಶಿಕ್ಷಿತ ಸ್ತ್ರೀಯ ಮನೋವೃತ್ತಿ ಹೀಗಾಗಲು ಹೆಚ್ಚಾಗಿ ಅವಳ ತಾಯಿ ತಂದೆಗಳೆ ಕಾರಣ. ಮಾನಸಿಕ ವಿಕಾಸಕ್ಕಾಗಿ ಶಿಕ್ಷಣ ಪಡೆಯಬೇಕು ಎಂಬ ಭಾವನೆಯು ಅವಳಲ್ಲಿ ಹುಟ್ಟಲು ಆಸ್ಪದವೇ ಸಿಗುವದಿಲ್ಲ. ಸ್ವಾರ್ಥ ಸಾಧು ಪಿತೃಗಳು ನೌಕರಿಗಾಗಿ ಅವಳಿಗೆ ಶಿಕ್ಷಣ ಕೊಡುತ್ತಾರೆ. ಇತರರು ವರಶೋಧನೆಯಲ್ಲಿ ಸಹಾಯಕವಾಗಲೆಂದು ಅವಳನ್ನು ಶಾಲೆ ಕಾಲೇಜುಗಳಲ್ಲಿ ಸೇರಿಸುತ್ತಾರೆ. ಹೀಗಾಗಿ ಶಿಕ್ಷಣದಲ್ಲಿ ಅವಳಿಗೆ ಆಸ್ಥೆ ಉಳಿಯುವದಿಲ್ಲ. ಯಾವದಾದರೊಂದು ಪದವಿಯನ್ನು ಪಡೆಯುತ್ತಾಳಷ್ಟೆ. ಆದರೆ ಯಾವ ವಿಷಯದ ಬಗ್ಗೆಯೂ ಅವಳಿಗೆ ಆಳವಾದ ಜ್ಞಾನವಿರುವದಿಲ್ಲ. ಇಂಥ ಶಿಕ್ಷಣದ ಲಾಭವನ್ನು ಏನೆಂತು ಮಾಡಿಕೊಳ್ಳಬೇಕು?

ಇದು ಶಿಕ್ಷಣದ ಮಾತಾಯಿತು. ಇನ್ನು ವಾತಾವರಣ. ಅದರ ಬಗ್ಗೆ ಅಂತೂ ಯಾರೂ ಚಿಂತಿಸುವದಿಲ್ಲ. ಮಗಳು ಬಿ. ಎ. ಪದವಿ ಪಡೆದಳು- ಎಂ- ಎ. ಪದವಿ ಪಡೆದಳು. ಆದರೇನು! ಅವಳಿಗೆ ನಾಲ್ಕು ಜನರ ಸಂಗಡ ಕುಳಿತು ಸರಿಯಾಗಿ ಮಾತಾಡಲು ಕೂಡ ಬರುವದಿಲ್ಲ. ಅವಳಿಗೆ ಎಂದಿಗೂ ಅದರ ರೂಢಿಯೇ ಇರುವದಿಲ್ಲ- ಅವಳು ಉದ್ದಕ್ಕೆ ಶಾಲೆಗೆ ಹೋಗಬೇಕು. ಮನೆಗೆ ಮರಳಬೇಕು. ಯಾರಾದರೂ ಕೂಡ ಮಾತಾಡಿದರೆ, ಇವರ ಕೂಡ ಏಕೆ ಮಾತಾಡಿದಿ ಎಂದು ಮನೆಯವರು ಕೇಳುವರೇ. ವಿದ್ಯಾರ್ಥಿ ವಿದ್ಯಾರ್ಥಿನಿಯರ ಶಿಕ್ಷಣವು ಒಂದೆಡೆ ಆಗುತ್ತಿರುವ ಸಮಯದಲ್ಲಿ ಅವಳನ್ನು ಇಷ್ಟೊಂದು ನಿರ್ಬಂಧದಲ್ಲಿ ಇಟ್ಟರೆ, ಅವಳು ತನ್ನ ಮುಂದಿನ ಆಯುಷ್ಯದಲ್ಲಿ ಸಾಮಾಜಿಕ ಜೀವನದಲ್ಲಿ ಸರಾಗವಾಗಿ ಹೇಗೆ ಬೆರೆಯಬಹುದು? ಯಾವ ಪರಿಸ್ಥಿತಿಯಲ್ಲಿಯೂ ಯಾರ ಉಪಸ್ಥಿತಿಯಲ್ಲಿಯೂ ಸಂಕೋಚಪಡಿಸದಂತೆ ಅವಳನ್ನು ಬೆಳೆಸಿದ್ದರೆ, ಅವಳು ಧೈರ್ಯವಂತಳಾಗುತ್ತಿದ್ದಳು. ಚಿಕ್ಕಂದಿನಿಂದಲೆ ಎಲ್ಲರ ಕೂಡ ಬೆರೆಯುವ ರೂಢಿ ಇಟ್ಟಿದ್ದರೆ, ಯಾವ ಕಾರ್ಯವನ್ನಾದರೂ ಪ್ರಾರಂಭಿಸಲು ಮಾನಸಿಕ ಬಲದ ಹಿನ್ನೆಲೆ ಇರುತ್ತಿತ್ತು. ಇಂಥ ವಾತಾವರಣದಲ್ಲಿ ಬೆಳೆದ ಬಾಲಿಕೆಯು ಮನಸಿದ್ದರೂ ಸಾಮಾಜಿಕ ಜೀವನದಲ್ಲಿ ಧುಮುಕಲು ಬೆದರುತ್ತಾಳೆ: ಸಂಕೋಚಪಡುತ್ತಾಳೆ. ಅವಳು ದೊಡ್ಡವಳಾದ ಮೇಲೆ, ತನಗೆ ತಿಳಿವಳಿಕೆ ಬಂದ ಮೇಲಾದರೂ ಈ ದುರ್ಗುಣಗಳನ್ನು ಏಕೆ ತ್ಯಜಿಸಬಾರದೆಂದು ಕೇಳಬಹುದು. ಆದರೆ ಚಿಕ್ಕಂದಿನಲ್ಲಿ ರೂಪಗೊಂಡ ಸ್ವಭಾವವನ್ನು ಬದಲಾಯಿಸುವದು ಬಹಳ ಕಠಿಣ. 'ಮೂರು, ವರ್ಷದ ಬುದ್ಧಿ ನೂರು ವರ್ಷದ ವರೆಗೆ' ಎಂಬ ಗಾದೇ ಮಾತು ನಿಜವಲ್ಲವೇ?

ಸಾಮಾಜಿಕ ಕಾರ್ಯದ ಹಟವೇಕೆ?

ಪ್ರತಿ ಸುಶಿಕ್ಷಿತ ಸ್ತ್ರೀಯು ಸಮಾಜಕಾರ್ಯ ಮಾಡಬೇಕೆಂದು ಏಕೆ ಅಪೇಕ್ಷಿಸಬೇಕು? ಇದು ನ್ಯಾಯವೆ? ಪ್ರತಿ ಸುಶಿಕ್ಷಿತ ಪುರುಷನು ಎಷ್ಟರ ಮಟ್ಟಿಗೆ ಸಮಾಜ ಕಾರ್ಯವನ್ನು ಮಾಡುವನು? ಕಚೇರಿಯಿಂದ ಕ್ಲಬ್ಬು: ತರುವಾಯ ಮನೆ- ಇದು ಹೆಚ್ಚಾಗಿ ಪ್ರತಿ ಪುರುಷನ ನಿತ್ಯದ ಕಾರ್ಯಕ್ರಮ. ಮನೆಯ ಕೆಲಸ, ಸಂಜೆಯಲ್ಲಿ ಸ್ವಲ್ಪ ತಿರುಗಾಟ ಇದು ಸುಶಿಕ್ಷಿತ ಸ್ತ್ರೀಯ ಕಾರ್ಯಕ್ರಮ. ಇದರಲ್ಲಿ ಯಾವ ಭೇದವಿದೆ!

ಸ್ತ್ರೀ ಸಮಾಜವು ಬಹಳ ಹಿಂದಿರುವದರಿಂದ ಅವಳು ಸಮಾಜ ಕಾರ್ಯವನ್ನು ಮಾಡಬೇಕೆಂದು ವಾದಿಸಬಹುದು. ಆದರೆ ಪುರುಷ ಸಮಾಜದ ಸುಧಾರಣೆಯು ಪೂರ್ಣವಾಗಿದೆಯೇ ಎಂದು ಕೇಳಬಹುದಲ್ಲವೆ?

ನಿಂದಕರ ನುಡಿಗಳು

ಇನ್ನು ಹಲವೊಂದು ವಿಷಯಗಳಲ್ಲಿ ಅವಳನ್ನು ಅಸತ್ಯವಾಗಿ ಆಡಿಕೊಳ್ಳಲಾಗುತ್ತದೆ. "ಅಯ್ಯ ಬಿ. ಎ. ಆದ್ಲು ಎಂ. ಎ. ಆದ್ಲು ಮುಂದೇನು! ನಮ್ಹಾಂಗ ಮದವಿ ಮಾಡಿಕೊಂಡೂ ಭರ್ರ ಬಡಿತಾಳ ಹೌದಲ್ಲೊ" ಮುಂತಾದ ಮಾತು ನೀವು ಕೇಳಿರಬಹುದು. ಇದರ ಅರ್ಥವೇನು? ಕಲಿತ ತಪ್ಪಿಗೆ ಅವಳು ಆಮರಣ ಅವಿವಾಹಿತ ಉಳಿಯಬೇಕೋ, ಇಲ್ಲವೆ ಮದುವೆಯಾಗಿ ಭರ್ರ ಬಯಬಾರದೊ? ಸುಶಿಕ್ಷಿತ ಸ್ತ್ರೀಯರು ಮದುವೆಯಾಗದೆ ಸಮಾಜಕಾರ್ಯವನ್ನು ಮಾಡಬೇಕೆಂದು ಇದರ ಅರ್ಥವಿದ್ದರೆ, ಸಮಾಜಕಾರ್ಯಮಾಡುತ್ತಿರುವ ಅವಿವಾಹಿತ ಸ್ತ್ರೀಯರಿಗೂ ಏಕೆ ಹೆಸರಿಡಲಾಗುತ್ತಿದೆ? ಸುಶಿಕ್ಷಿತ ವಿವಾಹಿತ ಹೆಂಗಸು ಸಮಾಜ ಕಾರ್ಯವನ್ನು ಮಾಡಿದರೆ "ಅಕಿಗೇನು ಕಲತಾಕಿ: ಅಕಿಗೇನ ಸಂಸಾರದಾಗ ಆಸ್ಥೆ" ಎಂದು ಟೀಕಿಸಲಾಗುತ್ತಿದೆ. ಸ್ತ್ರೀಯು ಸಮಾಜ ಕಾರ್ಯದಲ್ಲಿತೊಡಗಿದರೂ ಎಂದಿಗೂ ತನ್ನ ಸಂಸಾರವನ್ನು ಅಲಕ್ಷಿಸುವದಿಲ್ಲ. ಅವಳಿಗೆ ಸಂಸಾರದಲ್ಲಿ ಗಂಡಸಿನಕಿಂತ ಹೆಚ್ಚು ಮೋಹ. ಶಿಕ್ಷಣದಿಂದ ನೈಸರ್ಗಿಕ ಗುಣವು ಮಾಯವಾಗುವದೇ?

ಸುಶಿಕ್ಷಿತ ಸ್ತ್ರೀಗೆ ಸರಾಗವಾಗಿ ಸಂಸಾರ ಮಾಡಲು ಬರುವದಿಲ್ಲವೆಂದು ಹೇಳಲಾಗುತ್ತಿದೆ. ಇದಕ್ಕೆ ನನ್ನ ಒಪ್ಪಿಗೆ ಇಲ್ಲ. ಅಶಿಕ್ಷಿತ ಸ್ತ್ರೀಗಿಂತ ಸುಶಿಕ್ಷಿತ ಸ್ತ್ರೀಯೇ ಸಂಸಾರವನ್ನು ಹೆಚ್ಚು ಸುಂದರವಾಗಿ ಮಾಡಬಹುದು. ಅವಳು ಪತಿಯ ಮನೋಭಾವವನ್ನು ಚೆನ್ನಾಗಿ ಅರಿತುಕೊಳ್ಳಬಹುದು, ಅವನ ದೈಹಿಕ ಹಾಗೂ ಮಾನಸಿಕ ಪರಾಮರಿಕೆಯನ್ನು ಮಾಡಬಹುದು, ಮಕ್ಕಳನ್ನು ಸರಿಯಾದ ರೀತಿಯಲ್ಲಿ ಬೆಳೆಸಬಹುದು ಮತ್ತು ಮನೆಯನ್ನು ಸುಂದರವಾಗಿ ನಿರ್ಮಿಸಬಹುದು. ಅವಳು ಪತಿಯ ನಿಜವಾದ ಸಹಭಾಗಿನಿಯಾಗುವಳು. ತನ್ನ ಅಲ್ಪ ಸ್ವಲ್ಪ ಶಿಕ್ಷಣದ ಲಾಭ ಪಡೆದು, ತನ್ನ ಪತಿಯನ್ನು ಸುಖದಲ್ಲಿಟ್ಟು, ಮಕ್ಕಳನ್ನು ಗಟ್ಟಿಮುಟ್ಟಿಯಾಗಿ ಯೋಗ್ಯ ನಾಗರಿಕರನ್ನಾಗಿ ಅವಳು ಬೆಳೆಸುತ್ತಾಳೆ. ಪ್ರತಿ ಮನೆ, ಪ್ರತಿ ಬಾಲಕ, ಸಮಾಜದ ಘಟಕಗಳಲ್ಲವೆ? ಇಂದಿನ ಬಾಲಕರು ನಾಳಿನ ನಾಗರಿಕರು. ಅವರನ್ನು ಯೋಗ್ಯ ರೀತಿಯಿಂದ ಬೆಳೆಸುವ ಸುಶಿಕ್ಷಿತ ಸ್ತ್ರೀಯು ಸಮಾಜ ಕಾರ್ಯವನ್ನು ಮಾಡಿದಂತಾಗಲಿಲ್ಲವೆ?

ಇದಕ್ಕೆ ಅಪವಾದಗಳಿರಬಹುದು. ಆದರೆ ಜಗತ್ತಿನ ಪ್ರತಿ ನಿಯಮಕ್ಕೆ ಅಪವಾದಗಳಿರುತ್ತವೆ. ಹಲವೊಂದು ಸುಶಿಕ್ಷಿತ ಸ್ತ್ರೀಯರು ಟೀಕೆಗೆ ಯೋಗ್ಯರಿದ್ದರೆ, ಎಲ್ಲ ಸುಶಿಕ್ಷಿತ ಸ್ತ್ರೀಯರನ್ನು ಅದೇ ಪಂಕ್ತಿಯಲ್ಲಿ ಏಕೆ ಕೂಡಿಸಬೇಕು?

ಗಾಂಧೀಜಿಗೆ ನೋಬೆಲ ಪಾರಿತೋಷಕ

ಶಾಂತಿಗಾಗಿ ಮರಣೋತ್ತರ ಗೌರವ

ನೋಬೆಲ ಶಾಂತಿ ಬಹುಮಾನವನ್ನು ಗಾಂಧೀಜಿಗೆ ಮರಣೋತ್ತರ ಪಾರಿತೋಷಕವೆಂದು ಕೊಡುವ ಸಂಭವವಿದೆಯೆಂದು ತಿಳಿಯುತ್ತದೆ. ಈ ನೋಬೆಲ ಬಹುಮಾನವನ್ನು ನಾರ್ವೆ ಪಾರ್ಲಿಮೆಂಟು ಕೊಡುತ್ತದೆ.

ಶಾಂತಿಯ ಮೂರ್ತಿಯಾಗಿದ್ದ ಮಹಾತ್ಮಾ ಗಾಂಧಿಯವರಿಗೆ ಅವರು ಜೀವಂತವಿದ್ದಾಗಲೆ ಕೊಡಲಾಗದ್ದಕ್ಕೆ ಯುರೋಪದಲ್ಲಿ ಅನೇಕರಿಗೆ ಅಸಮಾಧಾನವಾಗಿದೆ. ಆದ್ದರಿಂದ ಮರಣೋತ್ತರ ಗೌರವವನ್ನಾದರೂ ಕೊಡಬೇಕೆಂಬ ವಿಚಾರ ನಡೆದಿದೆ ಎಂದು ಢಾಕಾ ವಿಶ್ವವಿದ್ಯಾಲಯದ ಡಾ. ಸಮರಸೇನರು. ತಿಳಿಸಿದರು ಇವರು ಕಳೆದ ವರ್ಷ ನಾರ್ವೆಕ್ಕೆ ಭಾಷಣವನ್ನು ಕೊಡಲು ಹೋಗಿದ್ದರು. ಈಗ ಹಿಂತಿರುಗಿದ್ದಾರೆ.

ನೊಬೆಲ ಬಹುಮಾನವನ್ನು ಮರಣೋತ್ತರ ಕೊಟ್ಟ ಉದಾಹರಣೆ ಇಲ್ಲ. ಹಾಗೆ ಮಾಡಲು ನಿಯಮಗಳಲ್ಲಿ ಕೆಲವೊಂದು ವಿಶಿಷ್ಟ ಮಾರ್ಪಾಡು ಮಾಡಬೇಕಾಗುವದು. ಗಾಂಧೀಜಿಗೆ ಈ ಬಹುಮಾನವನ್ನು ಹೋದ ವರ್ಷವೇ ಕೊಡುವದೆಂದು ಗೊತ್ತಾದಂತಿತ್ತು. ಆದರೆ ಪಂಜಾಬದ ಗಲಭೆ, ಹಿಂದುಸ್ತಾನ ಪಾಕಿಸ್ತಾನಗಳ ತಿಕ್ಕಾಟ ಪ್ರಾರಂಭವಾಗಿ ಈ ಪಾರಿತೋಷಕ ವಿತರಣವನ್ನು ಒಂದು ವರ್ಷ ಮುಂದೂಡಲಾಗಿತ್ತು.

ಗಾಂಧೀಜಿಗೆ ಈ ಪಾರಿತೋಷಕವು ಬಂದರೆ ಆ ಹಣವು ಶಾಂತಿ ಸ್ಥಾಪನೆಗೆ ಮೀಸಲಾಗುವದು. ಮತ್ತೂ ಗಾಂಧೀ ಸ್ಮಾರಕ ನಿಧಿಗೆ ಸೇರ ಬಹುದು ಎಂದು ಊಹಿಸಲಾಗುತ್ತಿದೆ.

ನರ್ಮದಾನದಿಗೆ ಅಣೆಕಟ್ಟು

೧೦೦ ಕೋಟಿಯ ಯೋಜನೆ

ಜಬಲಪೂರದಿಂದ ೨೫ ಮೈಲು ದೂರದಲ್ಲಿರುವ ಬರಗಿ ಹಳ್ಳಿಯ ಸಮೀಪದಲ್ಲಿ ನರ್ಮದಾ ನದಿಗೆ ಅಣೆಕಟ್ಟು ಕಟ್ಟಿಸುವ ವಿಚಾರವನ್ನು ಮಧ್ಯಪ್ರಾಂತ ಸರಕಾರವು ನಡೆಸಿದ್ದು ಕೇಂದ್ರ ಸರಕಾರಕ್ಕೆ ಈ ಅಣೆಕಟ್ಟು ಕಟ್ಟಿಸಲು ನೆರವಾಗಬೇಕೆಂದು ಬಿನ್ನವಿಸಿದೆ. ಈ ಯೋಜನೆಗೆ ೧೦೦ ಕೋಟಿ ರೂಪಾಯಿಗಳ ವೆಚ್ಚ ತಗಲಬಹುದೆಂದು ಅಂದಾಜು ಮಾಡಲಾಗಿದೆ. ಈ ಅಣೆಕಟ್ಟಿನಿಂದ ಅನೇಕ ಸಹಸ್ರ ಎಕರೆ ಭೂಮಿಗೆ ನೀರಾವರಿ ಒದಗುವದಲ್ಲದೆ ನೌಕಾ ಸಾರಿಗೆ ವಿದ್ಯುತ್ ಶಕ್ತಿ ನಿರ್ಮಾಣ ಮೊದಲಾದ ಅನೇಕ ಅನುಕೂಲತೆಗಳೂ ಒದಗುವವು.

ಜಗತ್ತಿನ ಅಕ್ಕಿ ಪರಿಸ್ಥಿತಿ

ಹಿಂದುಸ್ತಾನಕ್ಕೆ ೮,೨೫,೦೦೦ ಟನ್ ಪಾಲು

ಜಗತ್ತಿನ ಅಕ್ಕಿ ಪರಿಸ್ಥಿತಿ ಕಳೆದ ವರ್ಷಕ್ಕಿಂತ ಸುಧಾರಿಸಿದ್ದರೂ ೧೯೪೯ ರಲ್ಲಿ ಬೇಡಿಕೆಯ ಅರ್ಧಾಂಶವನ್ನು ಮಾತ್ರ ಪೂರೈಸಲು ಸಮರ್ಥವಾದೀತೆಂದು ಆಂತಾರಾಷ್ಟ್ರೀಯ ಅವಸರದ ಆಹಾರ ಸಮಿತಿಯ ಅಭಿಪ್ರಾಯ.

ಅಕ್ಕಿಯನ್ನು ಬೆಳೆಸುವ ದೇಶಗಳಲ್ಲಿ ಒಟ್ಟು ೩೧,೮೦,೯೦೦ ಟನ್ ಅಕ್ಕಿ ಉಳಿತಾಯವಾಗುತ್ತದೆ. ಆದರೆ ಕೊರತೆ ದೇಶಗಳ ಬೇಡಿಕೆ ೬೧,೧೦,೧೦೦ ಟನ್ ಇದೆ. ಕಳೆದ ವರ್ಷ ಕೇವಲ ೨೨ ಲಕ್ಷ ಟನ್ ಉಳಿದಿದ್ದು ಈ ವರ್ಷದ ಪರಿಸ್ಥಿತಿ ಅದಕ್ಕಿಂತ ಸುಧಾರಿಸಿದ್ದರೂ ಯುದ್ಧ ಪೂರ್ವದ ಉಳಿತಾಯಕ್ಕಿಂತ ನೂರಕ್ಕೆ ೬೦ ರಷ್ಟು ಕಡಿಮೆಯಿದೆ.

ಈ ವರ್ಷ ಈ ಹಿಂದೆ ಶಿಫಾರಸು ಮಾಡಿದ್ದು ಸೇರಿ ಹಿಂದುಸ್ತಾನಕ್ಕೆ ಒಟ್ಟು ೮,೨೫,೦೦೦ ಟನ್ ಅಕ್ಕಿಯನ್ನು ಕೊಡಬೇಕೆಂದು ಸಮಿತಿ ಸೂಚಿಸಿದೆ.

ಮಧ್ಯ ಭಾರತ ಒಕ್ಕೂಟ ರಚನೆ

ಮಧ್ಯ ಭಾರತ ಒಕ್ಕೂಟವನ್ನು ಭಾರತದ ಮುಖ್ಯ ಮಂತ್ರಿ ಪಂಡಿತ ನೆಹರೂ ಅವರು ಇಂದು ಉದ್ಘಾಟಿಸಿದರು. ಈವರೆಗಾದ ಒಕ್ಕೂಟದಲ್ಲಿ ಇದು ಅತಿದೊಡ್ಡದಾಗಿದೆ. ಇದರ ವಿಸ್ತೀರ್ಣವು ೪೭ ಸಾವಿರ ಚೌ. ಮೈಲು ಇದ್ದು ಜನ ಸಂಖ್ಯೆಯು ೭೦ ಲಕ್ಷಕ್ಕಿಂತಲೂ ಹೆಚ್ಚಿಗಿರುವದು. ಪಂಡಿತ ನೆಹರು ಅವರು ಒಕ್ಕೂಟದ ರಾಜಪ್ರಮುಖರಾದ ಗ್ವಾಲೇರದ ಮಹಾರಾಜರ ಪ್ರತಿಜ್ಞಾವಿಧಿಯನ್ನು ತಾ ೨೮ಕ್ಕೆ ನೆರವೇರಿಸಿದರು.

ನಿಜಾಂ ಪ್ರದೇಶದಲ್ಲಿ ಗಾಡಿಗಳ ಓಡಾಟ

ತಾ. ೨೬ ಕ್ಕೆ ಮುಂಬಯಿಯನ್ನು ಬಿಟ್ಟ ಮುಂಬಯಿ ಮದ್ರಾಸ ಮೇಲಗಾಡಿಯು ತಾ. ೨೮ ಕ್ಕೆ ಮುಂಜಾನೆ ವೇಳೆಗೆ ಸರಿಯಾಗಿ ಮದ್ರಾಸಕ್ಕೆ ಮುಟ್ಟಿತು. ಗಾಣಗಾಪುರದ ಅತ್ಯಾಚಾರಗಳ ನಂತರ ಬಂದ ಮೊದಲನೇ ಥ್ರೂ ಗಾಡಿಯೊಂದರೆ ಇದೇ. ಗುಂತಕಲ್ಲಿನವರೆಗೆ ಗಾಡಿಗೆ ಸೈನಿಕರ ಹಾಗೂ ಸಶಸ್ತ್ರ ಪೋಲೀಸರ ಸಂರಕ್ಷಣೆಯನ್ನು ಒದಗಿಸಲಾಗಿತ್ತು. ಹೈದರಾಬಾದ ಪ್ರದೇಶದಲ್ಲಿ ಯಾವ ದುರ್ಘಟನೆಯೂ ಆಗದೆ ಗಾಡಿಯು ಸುಸೂತ್ರ ಬಂದಿತು.

ಮದ್ರಾಸ ಮತ್ತು ಮುಂಬಯಿ ನಡುವೆ ಮೇಲ ಮತ್ತು ಎಕ್ಸಪ್ರೆಸ್ ಥ್ರೂ ಗಾಡಿಗಳು ತಾ. ೨೮ ರಿಂದ ಪ್ರಾರಂಭವಾದವೆಂದು ಎಂ. ಎಸ್. ಎಂ. ಮತ್ತು ಎಸ್. ಐ. ರೇಲ್ವೆಗಳ ಅಧಿಕೃತ ಪ್ರಕಟನೆ ಹೊರಟಿದೆ. ಗುಂತಕಲ್ಲ ಮತ್ತು ಹುಬ್ಬಳ್ಳಿಗಳ ನಡುವೆ ಹಗಲು ಮತ್ತು ರಾತ್ರಿ ಗಾಡಿಗಳು ಪ್ರಾರಂಭವಾಗಿವೆ.


ಪಾಕಿಸ್ತಾನದಲ್ಲಿ ಸರ್ವರಿಗೂ ಸೈನ್ಯ ಶಿಕ್ಷಣ

ಪಾಕಿಸ್ತಾನದ ಹಿರಿಯೋಲಗದಲ್ಲಿ ಪಾಕಿಸ್ತಾನದ ಮುಖ್ಯ ಮಂತ್ರಿಗಳೂ ಸಂರಕ್ಷಣ ಮಂತ್ರಿಗಳೂ ಆದ ಲಿಯಾಕತ ಅಲಿಖಾನರು ತಾ. ೨೮ ರಂದು ಹೀಗೆ ಹೇಳಿದರು.

ಕನಿಷ್ಠ ೩೦ ಲಕ್ಷ ಜನರಿಗೆ ಸೈನ್ಯ ಶಿಕ್ಷಣ ಕೊಡಬೇಕೆಂದು ಪಾಕಿಸ್ತಾನ ಸರಕಾರದ ವಿಚಾರವಿದೆ. ಪಾಕಿಸ್ತಾನ ರಾಷ್ಟ್ರ ರಕ್ಷಕ ದಳದಲ್ಲಿ ಈಗ ೪೦ ದಳಗಳಿದ್ದು ಒಟ್ಟು ನೂರು ದಳಗಳನ್ನು ನಿರ್ಮಿಸಲಾಗುವದು. ಶಾಲೆ ಕಾಲೇಜುಗಳಲ್ಲಿ ಅಲ್ಲದೆ ಎಲ್ಲ ವರ್ಗದ ಜನರಿಗೂ ಸೈನ್ಯ ಶಿಕ್ಷಣ ಕೊಡಲಾಗುವದು. ಪಾಕಿಸ್ತಾನದ ಎಲ್ಲ ಪ್ರಾಂತಗಳ ಜನರಿಗೂ ಸೈನ್ಯದಲ್ಲಿ ಪ್ರವೇಶವಿರುವದು. ಪಾಕಿಸ್ತಾನವು ತನ್ನ ಅಖಂಡತ್ವವನ್ನು ಕಾಯ್ದುಕೊಳ್ಳಲು ಸರ್ವ ವಿಧದಿಂದ ಪ್ರಯತ್ನಿಸುವದು. ಇಷ್ಟು ದೊಡ್ಡ ಸೈನ್ಯಕ್ಕೆ ಬೇಕಾಗುವ ಹಣದ ಬಗ್ಗೆ ಮುಖ್ಯ ಮಂತ್ರಿಗಳು ಏನೂ ಹೇಳಲಿಲ್ಲ.

ಹಿಂದುಸ್ತಾನಕ್ಕೆ ಡಿ. ವೆಲೆರಾ

ಆಯರ್ಲಂಡದ ಮೊದಲಿನ ಮುಖ್ಯ ಮಂತ್ರಿ ಶ್ರೀ. ಡಿ. ವೆಲೆರಾ ಅವರು ಆಸ್ಟ್ರೇಲಿಯಾಕ್ಕೆ ಹೋಗುವಾಗ ಜೂನ ೧೪ ಕ್ಕೆ ದಿಲ್ಲಿಗೆ ಬರಬಹುದೆಂದು ನಿರೀಕ್ಷಿಸಲಾಗಿದೆ.



ಹುಬ್ಬಳ್ಳಿ ಶಾಖೆ:—
ಕೊಪ್ಪಿಕರ ಬೀದಿ. ಹುಬ್ಬಳ್ಳಿ

ಜನಮತ

ಸ್ಥಳೀಯ ಸಂಸ್ಥೆಗಳಿಗೆ ನಾಮಕರಣ

ಮದ್ರಾಸ್ ಪ್ರಾಂತದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳು ಜರಗದೆ ಹತ್ತು ವರ್ಷಗಳಾದವು. ೧೯೪೨ ರಲ್ಲಿ ಚಲೇಜಾವ ಚಳವಳಿಯ ಕಾಲಕ್ಕೆ ಅನೇಕ ಜಿಲ್ಲಾ ಮತ್ತು ಪಂಚಾಯಿತ ಬೋರ್ಡ ಸದಸ್ಯರು ರಾಜೀನಾಮೆ ಕೊಟ್ಟಾಗ ಹೆಸರಿಗೆ ಚುನಾವಣೆಗಳು ಜರಗಿದ್ದರೂ ಆಗ ನಿಜವಾದ ಜನ ಪ್ರತಿನಿಧಿಗಳು ಆರಿಸಿ ಬರಲಿಲ್ಲ. ಕಾಂಗ್ರೆಸ್ ಸರಕಾರ ಬಂದ ನಂತರವೂ ಚುನಾವಣೆ ನಡೆಸದೆ, ಇದ್ದ ಸದಸ್ಯರ ಸದಸ್ಯತನವನ್ನು ರದ್ದು ಪಡಿಸಿ ಜಿಲ್ಲಾ ಬೋರ್ಡುಗಳಿಗೆ ವಿಶೇಷಾಧಿಕಾರಿಗಳನ್ನು ನೇಮಿಸಲಾಯಿತು. ಇದು ತಾತ್ಪೂರ್ತಿಕ ವ್ಯವಸ್ಥೆಯೆಂದು ಆಗ ಹೇಳಿದ್ದರೂ ಈಗ ಸರಕಾರದವರು ಜಿಲ್ಲಾ ಬೋರ್ಡುಗಳಿಗೆ ಸದಸ್ಯರನ್ನು ನಾಮಕರಣ ಮಾಡುವರೆಂದು ಸಾರಲಾಗಿದೆ. ನಾಮಕರಣ ಪದ್ಧತಿಗೆ ವಿರುದ್ಧವಾಗಿದ್ದ ಕಾಂಗ್ರೆಸ್ಸು ಈಗ ಚುನಾವಣೆಗೆ ಇದು ತಕ್ಕ ಸಮಯವಲ್ಲವೆಂದು ಹೇಳಿ ನಾಮಕರಣ ಮಾಡುವದು ಆಶ್ಚರ್ಯದ ಸಂಗತಿ. ಮತದಾರರಿಗೆ ಇದರಿಂದ ಅನ್ಯಾಯವಾಗುವದು. ಆದ್ದರಿಂದ ಚುನಾವಣೆಯ ವ್ಯವಸ್ಥೆಯನ್ನು ಸರಕಾರವು ಕೈಕೊಳ್ಳಬೇಕು. ಒಂದು ವೇಳೆ ಈ ಬಿಕ್ಕಟ್ಟಿನ ಸಮಯದಲ್ಲಿ ಚುನಾವಣೆ ನಡೆಸುವದು ಅವ್ಯವಹಾರ್ಯವೆಂದು ಸರಕಾರವು ಭಾವಿಸುವುದಿದ್ದರೆ, ನಾಮಕರಣ ಮಾಡುವಾಗ ಈಗಾಗಲೇ ಸ್ಥಳೀಯ ಸಂಸ್ಥೆಗಳಲ್ಲಿ ಸದಸ್ಯರಾಗಿದ್ದವರನ್ನೇ ಆರಿಸದೆ ನವೋತ್ಸಾಹವುಳ್ಳ ಹೊಸ ಸಾರ್ವಜನಿಕ ಕಾರ್ಯಕರ್ತರಿಗೂ ಸ್ಥಳೀಯ ಸಂಸ್ಥೆಗಳಲ್ಲಿ ದುಡಿಯಲು ಎಡೆ ಮಾಡಿಕೊಡಬೇಕು. ಜನತೆಯ ವಿಶ್ವಾಸವುಳ್ಳ ನುರಿತ ಜನ ಸೇವಕರನ್ನೇ ಆರಿಸಬೇಕು. ಈ ವಿಷಯದಲ್ಲಿ ಆಯಾ ಜಿಲ್ಲೆಯ ಪ್ರಾಂತಿಕ ಶಾಸನ ಸಭಾ ಸದಸ್ಯರ ಮತ್ತು ಕೇಂದ್ರ ಪಾರ್ಲಮೆಂಟ ಸದಸ್ಯರ ಅಭಿಪ್ರಾಯವನ್ನು ತಿಳಿದು ನಾಮಕರಣ ಮಾಡಬೇಕು. ಹೀಗಾದರೆ ಯೋಗ್ಯರೇ ಸ್ಥಳೀಯ ಸಂಸ್ಥೆಗಳಿಗೆ ಬರುವಂತಾಗುವದು. ಸರಕಾರ ಇತ್ತ ಗಮನಿಸುವದೆ?

ಚೊಕ್ಕಾಡಿ, ದ. ಕ. —ಕೋಟಿ ಗಣೇಶ ಸುಬ್ಬಪ್ಪಯ್ಯ

ಪವಿತ್ರ ಗ್ರಂಥಗಳ ಅವಮಾನ

ಮಹನೀಯರೆ,

ಹುಬ್ಬಳ್ಳಿಯಿಂದ ಹೊರಡುವ "ಶಾಂತಿ ಸಂದೇಶ"ವೆಂಬ ಇಸ್ಲಾಮಿ ಮಾಸ ಪತ್ರಿಕೆಯ ಮಾರ್ಚ ೧೯೪೮ ಸಂಚಿಕೆ ಅಕಸ್ಮಾತ್ತಾಗಿ ನನ್ನ ಕಣ್ಣಿಗೆ ಬಿತ್ತು. ಅದನ್ನು ನೋಡಿದರೆ ಅದರ ಪ್ರಕಾಶಕರಿಗೂ ಸಂಪಾದಕರಿಗೂ ಇನ್ನೂ ಪಾಕಿಸ್ತಾನದ ಮೋಹ ಹೋಗಿಲ್ಲವೆಂದು ವ್ಯಕ್ತವಾಗುತ್ತದೆ. ಆದರೆ ಅದಕ್ಕಿಂತಲೂ ಅಪಾಯಕರವಾದ ಕೆಲ ಸಂಗತಿಗಳನ್ನು ಅದರಲ್ಲಿ ನಾನು ಕಂಡೆ. ಇಸ್ಲಾಮ ಮಹಿಮೆಯನ್ನು ಪ್ರಚಾರಗೊಳಿಸಹೊರಟ ಈ ಪತ್ರಿಕೆಯಲ್ಲಿ ಹಿಂದೂ ವೇದೋಪನಿಷತ್ತು ಭಗವದ್ಗೀತೆಗಳಿಂದ ಮಂತ್ರ-ಶ್ಲೋಕಾದಿಗಳನ್ನೆತ್ತಿ ತಮಗೆ ಅನುಕೂಲವಾಗುವಂತೆ ಉಪಯೋಗಿಸಲಾಗಿದೆ. ಇದೇ ಅಯೋಗ್ಯ ಕ್ರಮವೆನ್ನುವೆ. ಸಾಲದ್ದಕ್ಕೆ ಈ ಮಂತ್ರಗಳನ್ನು ಅತ್ಯಂತ ಅಬದ್ಧ ರೀತಿಯಲ್ಲಿ ಉದ್ಧರಿಸಲಾಗಿದೆ. ಹಿಂದೂ ತತ್ವಜ್ಞಾನಿಗಳು ಯಾವ ಧರ್ಮದ ವಿದ್ವಾಂಸರೊಡನೆಯೂ ವಾಗ್ವಾದಕ್ಕೆ ಹಿಂಜರಿದಿದ್ದಿಲ್ಲ. ತರ್ಕದಲ್ಲಿ ಅವರನ್ನು ಎದುರಿಸಬಲ್ಲ ಶಕ್ತಿ ಪ್ರಾಯಶಃ ಉಳಿದಾವ ಧರ್ಮದ ವಿದ್ವಾಂಸರಲ್ಲಿಯೂ ಇಲ್ಲವೆಂಬ ಅಭಿಮಾನ ಅವರಿಗಿದೆ. ಖಂಡನೆ ಮಂಡನೆಗಳು ಅವರ ನಿತ್ಯಕರ್ಮಗಳಾಗಿದ್ದವು, ಆಗಿವೆ. ಆದರೆ ತಮ್ಮ ಪವಿತ್ರ ಗ್ರಂಥಗಳನ್ನು ಅಬದ್ಧ ರೀತಿಯಲ್ಲಿ ಅಧಿಕಾರರಹಿತರು ಉಚ್ಚರಿಸುವದನ್ನು ಅವರು ಸಹಿಸಲಾರರು. ಅಮೇರಿಕೆಯ "ಟೈಮ್ಸ್" ಪತ್ರಿಕೆಯಲ್ಲಿ ಹಜರತ ಮಹಮ್ಮದರ ಚಿತ್ರವೊಂದು ಪ್ರಕಟವಾದುದಕ್ಕೆ ಲಂಡನ್ ಮಸೀದೆಯ ಇಮಾಮರು ಸಿಟ್ಟಿಗೆದ್ದು ಬರೆದಿದ್ದರು. ಇಸ್ಲಾಮಿ ಗ್ರಂಥಗಳನ್ನು ಮಾರಲು ಹಿಂದೂ ವ್ಯಾಪಾರಿಗಳಿಗೆ ಅಪ್ಪಣೆ ಕೊಡಬಾರದೆಂದು ಲಾಹೋರಿನಲ್ಲಿ ಚಳವಳಿ ಹೂಡಲಾಗಿತ್ತು. ತಮ್ಮ ಪವಿತ್ರ ವಸ್ತುಗಳ ವಿಷಯ ಇಷ್ಟು ಉಗ್ರ ಭಕ್ತಿಯನ್ನು ಪ್ರದರ್ಶಿಸುವ ಮುಸ್ಲಿಮ ಪಂಡಿತರು ಇಂದಿನ ಕಲುಷಿತ ವಾತಾವರಣದಲ್ಲಿ ಇತರರ ಧರ್ಮ ಗ್ರಂಥಗಳನ್ನು ಮನಬಂದಂತೆ ಉಪಯೋಗಿಸುವದು ಎರಡೂ ಪಕ್ಷಗಳಿಗೆ ಹಿತವಲ್ಲ.

ಉಡುಪಿ —ವೆಂಕಟರಮಣಾಚಾರ್ಯ

ಕೆಂಪುಕೋಟೆಯ ನ್ಯಾಯಾಲಯದಲ್ಲಿ



ಮಹಾತ್ಮರ ಕೊಲೆಯ ಖಟ್ಲೆಯ ಆರೋಪಿಗಳು. ಮುಂದಿನ ಸಾಲು [ಎಡದಿಂದ] ೧) ನಥುರಾಮ ವಿನಾಯಕ ಗೋಡಸೆ, ೨) ನಾರಾಯಣ ದತ್ತಾತ್ರೆಯ ಆಪಟೆ, ೩) ವಿಷ್ಣು ರಾಮಕೃಷ್ಣ ಕರಕರೆ.
ನಡುವಿನ ಸಾಲು [ಎಡದಿಂದ] ೧) ಬಡಗೆ (ಗಡ್ಡದವರು), ೨) ಮದನಲಾಲ (ಕಾಣಿಸುವದಿಲ್ಲ) ೩) ಗೋಪಾಲ ವಿನಾಯಕ ಗೋಡಸೆ.
ಹಿಂದಿನ ಸಾಲು [ಎಡದಿಂದ] ವಿನಾಯಕ ದಾಮೋದರ ಸಾವರಕರ (ಗೋಡಸೇನ ಹಿಂದೆ, ಮುಖ ಕಾಣುವದಿಲ್ಲ), ೨) ಡಿ. ಎಸ್. ಪರಚುರೆ (ನಗುತ್ತ ಕುಳಿತವರು) ೩) ಶಂಕರ ಕ್ರಿಷ್ಟಯ್ಯ (ಕಾಣಿಸುವದಿಲ್ಲ)



ನ್ಯಾಯಾಧೀಶರಾದ ಶ್ರೀ. ಆತ್ಮಚರಣ ಐ. ಸಿ. ಎಸ್. ಅವರು



ಖಟ್ಲೆ ನಡೆಸಲು ಸಿದ್ಧರಾದ ಆರೋಪಿಗಳ ಪರ ವಕೀಲರು. [ಎಡದಿಂದ] ೧) ಶ್ರೀ. ಎಲ್. ಬಿ. ಭೋಪಟಕರ, ೨) ಜಮನಾದಾಸ ಮೇಹತಾ

ಇಸ್ಲಾಮಿ ರಾಷ್ಟ್ರಗಳಲ್ಲಿ ಅಲ್ಪಸಂಖ್ಯಾಕರ ಪಾಡು

ಯಹೂದ್ಯರಿಗೆ ಬಗೆಬಗೆಯ ಉಪದ್ರವ

ಕೆಲ ತಿಂಗಳುಗಳ ಹಿಂದೆ ಪಾಲಿಸ್ತಾನ ಪ್ರಶ್ನೆಯಲ್ಲಿ ಹಿಂದುಸ್ತಾನ ವಹಿಸಿದ ನೀತಿ ಸ್ಪಷ್ಟವಾಗಿ ಅರಬರ ಪರವಾಗಿತ್ತು. ಆದರೆ ಇಂದು ಭಾರತ ಸರಕಾರ ಈ ವಿಷಯದಲ್ಲಿ ನಿರ್ಧಾರದ ಪೂರ್ವಕ ತಾಟಸ್ಥ್ಯ ವಹಿಸಿದೆ. ಪಾಕಿಸ್ತಾನ ವಿರೋಧ ಭಾವದ ತೀವ್ರತೆ, ಮತ್ತು ಕಾಶ್ಮೀರ ಪ್ರಶ್ನೆಯಲ್ಲಿ ಸೀರಿಯ ವಹಿಸಿದ ಹಿಂದೀ ವಿರೋಧಿ ನೀತಿಗಳಿಂದ ನಮ್ಮ ಸರಕಾರ ಅನಿವಾರ್ಯವಾಗಿ ತನ್ನ ಧೋರಣೆಯನ್ನು ಬದಲಿಸಿದೆಯೆಂದು ಹೇಳಬಹುದು. ಅರಬರಾದರೂ ಹೊರ ನೋಟಕ್ಕೆ ಬಹಳ ನ್ಯಾಯವಾಗಿ ಕಾಣುವ ವಾದಗಳನ್ನು ಪ್ರಯೋಗಿಸುತ್ತಾರೆ. ಪಾಲಿಸ್ತಾನದಿಂದ ಯಹೂದ್ಯರು ಓಡಿಹೋಗಲು ಅರಬರೇನೂ ಕಾರಣರಲ್ಲ. ಅವರನ್ನು ಓಡಿಸಿದವರು ಅಸೀರಿಯನ್ನರು, ಬಬಿಲೋನಿಯನ್ನರು ಹಾಗು ರೋಮನ್ನರು. ಅರಬರು ೧೩ ಶತಕಗಳಿಂದ ಪಾಲಿಸ್ತಾನದ ಸ್ವಾಮಿಗಳಾಗಿದ್ದಾರೆ. ಅಲ್ಲಿ ಇಂದು ಯಹೂದ್ಯರನ್ನು ತಿರುಗಿ ತಂದು ಅನೈಸರ್ಗಿಕವಾಗಿ ತಳವೂರಗೊಡುವದು ಅನ್ಯಾಯ, ಪ್ರಜಾತಂತ್ರ ತತ್ವಕ್ಕೆ ವಿರುದ್ಧವಾದುದು. ಮೇಲಾಗಿ ಯುರೋಪಿಯನ್ ಯಹೂದ್ಯರ ದುರ್ಗತಿಗೆ ಹಿಟ್ಲರ ಹೊರತು ತಾವು ಕಾರಣರಲ್ಲ. ತಾವು ಯಹೂದ್ಯರನ್ನು ಪೀಡಿಸಿಲ್ಲ ಎಂದು ಅರಬರು ವಾದಿಸುತ್ತಾರೆ. ಆದರೆ ಯಹೂದ್ಯರು ಬರಿ ಯುರೋಪಿನಲ್ಲಿ ಮಾತ್ರ ಇರುವದಿಲ್ಲ. ಮಧ್ಯಪೂರ್ವದ ಅರಬ ರಾಷ್ಟ್ರಗಳಲ್ಲಿಯೂ ೯ ಲಕ್ಷದಷ್ಟು ಯಹೂದ್ಯರಿದ್ದಾರೆ. ಅವರೂ ಪಾಲಿಸ್ತಾನದ ಕಡೆ ಸಾಗಲು ಆತುರರಾಗಿದ್ದಾರೆ. ಮುಸ್ಲಿಮ ರಾಜ್ಯಗಳಲ್ಲಿ ಯಹೂದ್ಯರನ್ನು (ಅಷ್ಟೇ ಏಕೆ, ಇತರ ಅಲ್ಪಸಂಖ್ಯಾಕರನ್ನು) ನಡೆಸಿಕೊಳ್ಳುವ ರೀತಿ ಯಾವ ಬಗೆಯಲ್ಲಿಯೂ ಸುಸಂಸ್ಕೃತವೆಂದು ಹೇಳಬರುವದಿಲ್ಲ. ಇದನ್ನರಿತೇ ನಾವು ಈ ಪ್ರಶ್ನೆಯಲ್ಲಿ ನಮ್ಮ ನಿಲುವೆಯನ್ನು ನಿರ್ಧರಿಸಿಕೊಳ್ಳಬೇಕು.

ಕುರಾಣದ ಹೇಳಿಕೆಯಂತೆ ಯಹೂದ್ಯರೂ ಕ್ರಿಶ್ಚನ್ನರೂ "ಜೆಮ್ಮಿ"ಗಳು ಅಂದರೆ "ಜಜಿಯಾ" ಎಂಬ ತಲೆ ತೆರಿಗೆ ಕೊಟ್ಟರೆ ಮುಸ್ಲಿಮರ ರಕ್ಷಣೆಗೆ ಪಾತ್ರರಾದವರು. ಆದರೂ ಅವರು ನಾನಾ ವಿಧವಾದ ಪಕ್ಷಪಾತಗಳಿಗೆ ಹೆಗಲೊಡ್ಡಬೇಕಾಗುವದು. ಕಳೆದ ಹಾಗು ಸದ್ಯದ ಶತಮಾನಗಳಲ್ಲಿ ಪಾಶ್ಚಾತ್ಯ ಉದಾರ ಮತವಾದಿಗಳ ಪ್ರಭಾವದಿಂದ ಇಸ್ಲಾಮಿ ದೇಶಗಳಲ್ಲಿ ಯಹೂದ್ಯರನ್ನೂ ಮುಸ್ಲಿಮರನ್ನೂ ನ್ಯಾಯಸ್ಥಾನದಲ್ಲಿ ಸಮಾನವಾಗಿ ಗಣಿಸಬೇಕೆಂಬ ಕಾಯಿದೆಗಳಾಗಿದ್ದರೂ ಅವು ಬಹುಮಟ್ಟಿಗೆ ಪುಸ್ತಕದಲ್ಲೇ ಉಳಿದಿವೆ.

ಯೆಮೆನದ ಹೇಸಿ ಪದ್ಧತಿ

ಅರಬ ರಾಷ್ಟ್ರಗಳಲ್ಲೆಲ್ಲ ಯೆಮೆನ ಅತಿ ಚಿಕ್ಕದು; ಹಿಂದುಳಿದದ್ದೂ ಹೌದು. ಅಲ್ಲಿ ೪೦,೦೦೦ ಯಹೂದ್ಯರು ಇದ್ದಾರೆ. ಆದರೆ ಅವರನ್ನು ಸರಕಾರಿ ನೌಕರಿ ಮತ್ತು ಪೋಲೀಸ್ ಮತ್ತು ಸೈನಿಕ ಪದೆಗಳಲ್ಲಿ ಸೇರಿಸಿಕೊಳ್ಳುವದಿಲ್ಲವೆಂಬದಂತೂ ಇಯಿತಲ್ಲ; ಅವರು ನಗರಗಳಲ್ಲಿ ಕುದುರೆ ಸವಾರಿ ಮಾಡಬಾರದು, ಸುತ್ತುಮುತ್ತಲಿನ ಮುಸ್ಲಿಮರ ಮನೆಗಳಿಗಿಂತ ಎತ್ತರನ್ನ ಮನೆ ಕಟ್ಟಬಾರದು, ಎಲ್ಲಕ್ಕೂ ಹೆಚ್ಚಾಗಿ ಯೆಮನದ ರಾಜಧಾನಿಯಾದ ಸಾನಾದಲ್ಲಿ ಪಾಯಖಾನೆಗಳನ್ನೆಲ್ಲ ಸ್ವಚ್ಛ ಮಾಡುವದು ಯಹೂದ್ಯರ ಕೆಲಸವೆಂಬ ಹೇಯ ಪದ್ಧತಿಗಳು ಇಂದಿಗೂ ಬಳಕೆಯಲ್ಲಿವೆ; ಯಹೂದ್ಯ ಮಕ್ಕಳು ತಂದೆ ತಾಯಿಗಳನ್ನು ಕಳೆದುಕೊಂಡು ತಬ್ಬಲಿಗಳಾದರಂತೂ ತೀರಿತು. ಅವುಗಳ ಸಂಬಂಧಿಕರು ಅವನ್ನು ಪಾಲಿಸುತ್ತೇನೆಂದರೆ ಕೂಡ ಒಪ್ಪದೆ ಸರಕಾರವೇ ಅವುಗಳನ್ನು ವಶಕ್ಕೆ ತೆಗೆದುಕೊಂಡು ಮುಸ್ಲಿಮ ಧರ್ಮಕ್ಕೆ ಮತಾಂತರಗೊಳಿಸಿ ಬೆಳೆಸುವದು. ಈ ಭಯದಿಂದ ಎಷ್ಟೋ ಯಹೂದ್ಯರು ಮಗುವುತನದಲ್ಲೇ ಮಕ್ಕಳಿಗೆ ಮದುವೆ ಮಾಡಿಬಿಡುತ್ತಾರೆ, ಇಲ್ಲವೆ ಹೇಗಾದರೂ ಅವನ್ನು ಪಾಲಿಸ್ತಾನಕ್ಕೆ ಪಾರು ಮಾಡಲು ಯತ್ನಿಸುತ್ತಾರೆ. ಆದರ ಗುಟ್ಟೇನಾದರೂ ಹೊರಬಿತ್ತೆಂದರೆ ಅದಕ್ಕೆ ನೆರವು ನೀಡಿದವನ ಜೀವ ಉಳಿಯುವದಿಲ್ಲ.

ಮುಂದುವರಿದ ತುರ್ಕಿಯಲ್ಲಿ

ಇಸ್ಲಾಮಿ ರಾಜ್ಯಗಳಲ್ಲೆಲ್ಲ ತುರ್ಕಿಯಷ್ಟು ಮುಂದುವರಿದುದು ಬೇರೊಂದಿಲ್ಲ. ಆದರೆ ಅಲ್ಲಿಯೂ ಕಾಯಿದೆಗಿಂತ ರೂಢಿಯೇ ಬಲವಾಗಿ ಯಹೂದ್ಯ, ಗ್ರೀಕ್, ಕಿಶ್ಚನ್, ಮತ್ತು ಆರ್ಮೇನಿಯನ್ ಅಲ್ಪಸಂಖ್ಯಾಕರನ್ನು ಅನೇಕ ರೀತಿಯಲ್ಲಿ ಛಲಿಸಲಾಗುತ್ತದೆ. ಕಮಾಲ ಪಾಶಾರಂತಹ ಪ್ರಗತಿಶೀಲರು ಕಟ್ಟಿದ "ಜನತಾ ಪಕ್ಷ"ದಲ್ಲಿ ಕೂಡ ಮುಸ್ಲಿಮೇತರರಿಗೆ ಪ್ರವೇಶವಿಲ್ಲ. ಸರಕಾರಿ ನೌಕರಿಗಳಲ್ಲಾಗಲಿ ಸರಕಾರಿ ನಿಯಂತ್ರಿತ ಬ್ಯಾಂಕ್, ಕಾರಖಾನೆ, ಮೊದಲಾದವುಗಳಲ್ಲಾಗಲಿ ಒಬ್ಬನೇ ಒಬ್ಬ ಯಹೂದ್ಯನಿಲ್ಲನೆಂದರೆ ತಪ್ಪಾಗದು. ಸೈನ್ಯದಲ್ಲಿಯೂ ಅಧಿಕಾರಿ ವರ್ಗಕ್ಕೆ ಉತ್ತೀರ್ಣರಾಗುವವರು ಮುಸ್ಲಿಮರೇ ಹೊರತು ಅಲ್ಪಸಂಖ್ಯಾಕರಿಗೆ ಸ್ಥಾನ ದೊರಕುವದು ಅಪರೂಪ. ಖಾಸಗಿ ವ್ಯಾಪಾರದಲ್ಲೂ ಅಲ್ಪಸಂಖ್ಯಾಕರಿಗೆ ನಾನಾ ಪ್ರಕಾರದ ಅಡಚಣಿಗಳಿವೆ. "ಬರ್ಲಿಕ್ಸ" ಎಂಬ ಅರೆ ಸರಕಾರಿ ಸಂಸ್ಥೆಯೊಂದು ಆಯಾತ ನಿರ್ಯಾತದ ಪರವಾನಗಿ ಕೊಡುತ್ತದೆ. ಅದು ಯಾವಾಗಲೂ ಮುಸ್ಲಿಮೇತರರ ಮೇಲೆ ಮುಲತಾಯಿ ಪ್ರೇಮವನ್ನೆ ತೋರುತ್ತದೆ. ೧೯೪೨ ರಲ್ಲಿ ಹೇರಲ್ಪಟ್ಟ ವರ್ಲಿಕ್ ವರ್ಗಿಸಿ ಎಂಬ ಆಸ್ತಿ ತೆರಿಗೆಯಂತೂ ಅಲ್ಪಸಂಖ್ಯಾಕರನ್ನು ವ್ಯಾಪಾರ ಕ್ಷೇತ್ರದಿಂದ ಪೂರ್ತಿ ಓಡಿಸಲೆಂದೇ ಜಾರಿಗೆ ಬಂದಂತಿದೆ. ಹೆಸರಿಗೆ ಎಲ್ಲರಿಗೂ ಸಮಾನವಾಗಿದ್ದರೂ ಮುಸ್ಲಿಮೇತರರ ಮೇಲೆ ಅತಿಶಯ ಪ್ರಮಾಣದಲ್ಲಿ ತೆರಿಗೆ ಹೇರಿದ್ದರಿಂದ ಅನೇಕ ಮುಸ್ಲಿಮೇತರ ವ್ಯಾಪಾರಿಗಳು ತೆರಿಗೆ ತುಂಬಲು ವ್ಯಾಪಾರವನ್ನೇ ಮಾರಿಕೊಳ್ಳಬೇಕಾಯಿತು. ಹೀಗೆ ಅನೇಕ ಮುಸ್ಲಿಮೇತರರ ವ್ಯಾಪಾರಗಳು ಮುಸ್ಲಿಮರ ಕೈಸೇರಿದವು. ಈ ತೆರಿಗೆ ಕೊಡಲು ತಪ್ಪಿದವರನ್ನು ಪೂರ್ವ ಅನಟೋಲಿಯದ ವಿಶೇಷ ಶಿಬಿರಗಳಲ್ಲಿ ಸಕ್ರಮ ಶಿಕ್ಷೆಗೆ ಗುರಿ ಮಾಡಲಾಗುತ್ತದೆ. ಅಲ್ಲಿಗೆ ಹೋದವರೆಲ್ಲರೂ ಅಲ್ಪ ಸಂಖ್ಯಾಕ ಗುಂಪಿನವರೆ. ಎಲ್ಲವನ್ನೂ ಕಳೆದುಕೊಳ್ಳುವ ಬದಲು ತಾವೇ ದೇಶಬಿಟ್ಟು ಹೋಗುವದೊಳಿತೆಂದು ಅವರು ಸ್ವಾಭಾವಿಕವಾಗಿ ಬಗೆಯುತ್ತಾರೆ.

ಬ್ರಿಟಿಶ-ಪ್ರಿಯ ಇರಾಕದಲ್ಲಿ

ಅನೇಕ ದಿನಗಳ ವರೆಗೆ ಬ್ರಿಟಿಶರ ಕೈಲಿ ತರಬೇತು ಪಡೆದ ಇರಾಕದಲ್ಲಿ ಸ್ಥಿತಿಯೇನು? ಹಿಂದಿನ ಅರಸು ಫೈಜಲನ ಕಾಲದಲ್ಲಿ ಯಹೂದ್ಯರು ಸ್ವಲ್ಪ ಸುಖವಾಗಿದ್ದರು. ಆದರೆ ೧೯೩೩ ರಲ್ಲಿ ಅವನು ತೀರಿಕೊಂಡನಂತರ ಅವರ ಪಾಡು ಕೆಡುತ್ತ ಬಂತು. ೧೯೪೮ ರ ಪಾಲಿಸ್ತಾನ ದಂಗೆಯ ನಂತರ ಅಲ್ಲಿ ಸೋತ ಜರುಸಲೇಮು ಮುಫ್ತಿ ಇರಾಕಿಗೆ ಓಡಿ ಹೋಗಿ ಅಲ್ಲಿಯೂ ಯಹೂದ್ಯವೈರದ ವಿಷವನ್ನು ಬಿತ್ತಿದ್ದರ ಫಲವಾಗಿ ೧೯೪೧ ರಲ್ಲಿ ಭಯಂಕರ ಯಹೂದ್ಯ ವಿರೋಧಿ ದಂಗೆಗಳಾಗಿ ಅನೇಕ ಯಹೂದ್ಯರು ಪ್ರಾಣ ಕಳೆದುಕೊಂಡರು. ಎಷ್ಟೋ ಯಹೂದ್ಯ ದ್ರವ್ಯ ಸುಲಿಯಲ್ಪಟ್ಟಿತು. ಕಾಯಿದೆಯ ದೃಷ್ಟಿಯಿಂದ ಎಲ್ಲರೂ ಸಮಾನರಾಗಿದ್ದರೂ ಫೈಜಲನ ಮರಣದ ನಂತರ ಮಂತ್ರಿಪದಕ್ಕೆ ಒಬ್ಬನೇ ಒಬ್ಬ ಯಹೂದ್ಯನನ್ನು ತೆಗೆದುಕೊಂಡದ್ದಿಲ್ಲ. ಸೈನ್ಯ ಪೋಲೀಸು ಪಡೆಗಳಲ್ಲಿಯೂ ಅವರ ಸಂಖ್ಯೆ ಅತ್ಯಲ್ಪ. ಬಗದಾದ ನಿವಾಸಿಗಳಲ್ಲಿ ನೂರಕ್ಕೆ ೩೩ ರಷ್ಟು ಜನ ಯಹೂದ್ಯರಿದ್ದರೂ ಅವರ ಶಾಲೆಗಳಲ್ಲಿ ಹೀಬ್ರೂ ಕಲಿಸಲು ಅಪ್ಪಣೆಯಿಲ್ಲ. ಆ ಶಾಲೆಗಳಿಗೆ ಸರಕಾರಿ ಸಹಾಯವಿಲ್ಲದಿದ್ದರೂ ಅವುಗಳ ಮೇಲೆ ತೀಕ್ಷ್ಣ ಸರಕಾರಿ ನಿಯಂತ್ರಣವುಂಟು. ಈ ನಿಷು ರ ವಾತಾವರಣದಿಂದ ಪಾರಾಗಿ ಎಲ್ಲಾದರೂ ಹೋಗೋಣವೆಂದರೂ ಅಸ್ಪದವಿಲ್ಲ. ಎಲ್ಲಿ ಪಾಲಿಸ್ತಾನಕ್ಕೆ ವಲಸೆ ಹೋಗುವರೋ ಎಂದು ಯಹೂದ್ಯರನ್ನು ದೇಶಬಿಟ್ಟು ಹೋಗಲಿಕ್ಕೇ ಕೊಡುವದಿಲ್ಲ! ವಿದೇಶಿ ಯಹೂದ್ಯರಿಗೆ—ಅಮೇರಿಕನ್ ಯಹೂದ್ಯರಿಗೆ ಕೂಡ—ಇರಾಕಿನಲ್ಲಿ ಕಾಲಿಡಲು ಬಿಡುವದಿಲ್ಲ.

ಇಜಿಪ್ತದಲ್ಲಿ

ಇಜಿಪ್ತದಲ್ಲಿಯೂ ಯಹೂದ್ಯರ ಸ್ಥಿತಿ ಮಾತ್ರವಲ್ಲ ಕ್ರಿಶ್ಚನರದು ಕೂಡ ನೆಟ್ಟಗಿಲ್ಲ. ಮೇ ಮಧ್ಯದಲ್ಲಿ ಬ್ರಿಟಿಶ ಲಾರ್ಡ್ಸ ಭವನದಲ್ಲಿ ಯಾರ್ಕಿನ ಆರ್ಚಬಿಶಪರು (ಧರ್ಮಗುರುಗಳು) ಕ್ರಿಶ್ಚನ್ನರ ಮತ್ತು ಯಹೂದ್ಯರ ವಿರುದ್ಧ ಇಜಿಪ್ತದಲ್ಲಿ ಬಹಳ ಪಕ್ಷಪಾತ ಮಾಡಲಾಗುತಿದೆಯೆಂದು ದೂರಿದರು. ಇಗರ್ಜಿಗಳನ್ನು ಕಟ್ಟಲು ಒಪ್ಪಿಗೆ ಕೊಡಲಾಗುವದಿಲ್ಲ. ಪ್ರಮುಖ ಸರಕಾರಿ ನೌಕರಿಗಳಲ್ಲಿ ಕ್ರಿಶ್ಚನ್ನರಿಗೆ

—೧೧ನೆಯ ಪುಟಕ್ಕೆ

ವಿವಿಧ ಪ್ರಪಂಚ

ಕಿರಿದೊಳ್ಳಿನ ಹಿರಿಮೆ!

'ಕಿರಿದೊಳ್ಳು ಮೂಡುವುದು ಸಿರಿವಂತಿಕೆಯ ಕುರುಹು' ಎಂಬುದು ಪ್ರಾಚೀನ ನಂಬಿಗೆ. ಅದರ ಶೋಭೆಯನ್ನು ಕಂಡು ತಾಯಿ ಹಿಗ್ಗುವಳು, ಆಳು ಮೆಚ್ಚುವನು, ಗೆಳೆಯರು ನಲ್ಮೆಗೆ ದೀರುವರು, ಗೃಹಲಕ್ಷ್ಮಿ ಹೆಮ್ಮೆ ಪಡುವಳು. ಊರಲ್ಲಿ ಧನಿಯರೇ ದಾಯರೇ ಎನ್ನಲು ಪ್ರಾರಂಭಿಸುವುದು, ಒಂದು ವಿಧದ ಅಧಿಕಾರ, ತೂಕ, ಗಾಂಭೀರ್ಯ, ಗರುವಿಕೆ, ಮುಖವನ್ನಲಂಕರಿಸುವುದು, ಮೀಸೆ ಮತ್ತು ಕಣ್ಣುಗಳಲ್ಲಿ ತೃಪ್ತಿ ಸೂಸುವುದು, ಶಾಂತಿ ಶೋಭಿಸುವುದು ಎಂಬುದನ್ನು ಕಂಡವರಿಗೆ ಹೊಸದಾಗಿ ಹೇಳಬೇಕಾಗಿಲ್ಲ.

ಕೆಲವರೆನ್ನಬಹುದು— ದಪ್ಪ ತೊಗಲಿನವರಿಗೆ ಮಂದ ಬುದ್ಧಿ ಎಂದು; ಇದು ಮಾತ್ರ ಸುಳ್ಳು. ಅವರು ಸ್ವಪ್ನಶೋಧಕರಾಗಿಗಳೆಂದರೆ ಒಪ್ಪಬಹುದು. ಏಕೆಂದರೆ ಇತಿಹಾಸದಲ್ಲಿ ಹೆಸರಾಂತ ಕೆಲ ನರ ನಾರಿಯರ ಹೆಸರುಗಳನ್ನು ಹೇಳಿದರೆ ನಿಮಗೆ ಗೊತ್ತಾಗುತ್ತದೆ. ಪೂರ್ವ ಕಾಲದಲ್ಲಿ ಸ್ವಲ್ಪ ದಪ್ಪಿದ್ದಾಕೆಯೇ ಸೌಂದರ್ಯವತಿ ಎಂಬ ನಂಬಿಗೆ ಕೂಡ ಇತ್ತು. ಈಗ ಕಡ್ಡಿಯಂತೆ ಹಾರಿ ಹೋಗುವ ಹುಡುಗಿ ಮಾನಿಸರೇ ಲಕ್ಷಣವಂತರು ಎನ್ನುತ್ತಾರೆ—ವಿಚಿತ್ರ ದೃಷ್ಟಿ!

ಇಂಗ್ಲೆಂಡಿನ ದೊರೆ ಎಂಟನೆಯ ಹೆನ್ರಿ, ಫ್ರಾನ್ಸಿನ ೧೪ನೆಯ ಲೂಯಿ ಸಂಭಾಷಣ ಪಂಡಿತನೆನಿಸಿದ ಡಾಕ್ಟರ ಜಾನ್ಸನ್ ಮಹಾಶಯ, ಮಹಾತ್ಮನಾದ ಬುದ್ಧ, ಚೀನದ ತತ್ವಶಾಸ್ತ್ರಕಾರನಾದ ಕನ್‌ಫ್ಯೂಶಿಯಸ್, ಗ್ರೀಸಿನ ಮಹಾಜ್ಞಾನಿಯಾದ ಪ್ಲೇಟೋ ಈ ಎಲ್ಲರೂ ಸ್ಥೂಲಕಾಯರೇ. ಆ ಕಾರಣದಿಂದ ಅವರು ಮಂದಮತಿಗಳೆನಿಸಿಕೊಳ್ಳಲಿಲ್ಲ.

ಐರೋಪ್ಯ ಸುಂದರಿಯರಲ್ಲಿ ಸುಪ್ರಸಿದ್ಧಳಾದ ಕ್ಲಿಯೋಪಾತ್ರ ಗಜಲಕ್ಷ್ಮಿಯಂತೆಯೇ ಇದ್ದಳು. ಭಯಂಕರನಾದ ಮಾರ್ಕ ಆ್ಯಂಟೋನಿಯನ್ನು ಮೋಹಿಸಿದವಳು ಅವಳೇ. ರಶಿಯದ ಪ್ರಸಿದ್ಧ ರೂಪರಾಣಿ ಕ್ಯಾಥಲೀನಳೂ ಹಾಗೆಯೇ. ಇಂಗ್ಲೆಂಡಿನ ರಾಣಿಯರಾಗಿದ್ದ ಏನ್, ವಿಕ್ಟೋರಿಯ ಮತ್ತು ಆಸ್ಟ್ರಿಯದ ಮೇರಿಯಾ ಥೆರೀಸ ಈ ಎಲ್ಲ ಲಕ್ಷಣವತಿಯರೂ ಕಿರಿದೊಳ್ಳು ಹೊತ್ತವರೇ ಎಂಬುದನ್ನು ಮರೆಯ ಬಾರದು.

ಅತಿ ಸ್ಥೂಲತ್ವ ಅಸಹ್ಯವೂ ಅನನುಕೂಲವೂ ಆದರೂ ಮಧ್ಯಮ ಸ್ಥೂಲತ್ವ ಮನುಷ್ಯನ ವ್ಯಕ್ತಿತ್ವಕ್ಕೊಂದು ನಾಗರಿಕ ಗಾಂಭೀರ್ಯದ ಕಳೆಯನ್ನು ಕೊಡುತ್ತದೆ. ಮನುಷ್ಯ ವಿಶ್ವಾಸ್ಯನೆಂದು ತೋರುವಂತೆ ಮಾಡುತ್ತದೆ. ಇದೇ ಭಾವದಿಂದ ಜೂಲಿಯಸ್ ಸೀಜರನು ಕ್ಯಾಸಿಯಸ್ ಮುಂತಾದ ತನ್ನ ಮುಂದಿನ ಅಜ್ಞಾತ ಶತ್ರುಗಳ ಅಂಗಯಷ್ಟಿಯಿಂದಲೇ ಅವರು ಅಗದವರು. ಅಪಾಯಕಾರಿಗಳು ಎಂದೂ ತುಂಬು ಮೈಯವರು ತುಂಬು ಬಗೆಯವರೂ ಆಗಿರುತ್ತಾರೆ, ಅದ್ದರಿಂದ ಅವರೇ ತನ್ನೊಡನಾಡಿಗಳಾಗಿರಬೇಕು ಎಂದನು. ಇದು ಸಾರ್ವತ್ರಿಕ ನಿಯಮವಲ್ಲದಿದ್ದರೂ ಬಹು ಪಕ್ಷ ಅನುಭವಸಿದ್ಧವಿದೆ. ಆದುದರಿಂದ ಅಲ್ಪ ಸ್ಥೂಲತ್ವದಿಂದ ಯಾರೂ ನಾಚಿಕೆಪಟ್ಟುಕೊಳ್ಳಬೇಕಾಗಿಲ್ಲ. ತೆಳ್ಳನೆಯವರಿಗಿಂತ ದಪ್ಪನೆಯವರು ವಿವಾಹ ವಿಚ್ಛೇದ ಮಾಡಿಕೊಳ್ಳುವುದು ಕಡಿಮೆ, ಆದರಿಂದ ಅಂಥವರೇ ವಿವಾಹವಾಗಲು ಯೋಗ್ಯರು ಎಂದು ಶ್ರೀ. ಎಲ್. ಎಚ್. ರಾಬಿನ್ಸ ಎಂಬ ಪ್ರಸಿದ್ಧ ವಿಜ್ಞಾನಿ ಬರೆಯುತ್ತಾನೆ.

ಆಲಸ್ಯದಿಂದ ಸಾಹಸಿಗಳಾಗಿರದ ಮಾತ್ರಕ್ಕೆ ಮೊದಲ ವರ್ಗ ಕೀಳಲ್ಲ. ಮನಸ್ಸು ಮಾಡಿದರೆಂದರೆ ಅವರೆಂದೂ ಹಿಮ್ಮೆಟ್ಟುವವರಲ್ಲ; ಅವರ ನಿರ್ಧಾರದ ಫಲಾಗಮವನ್ನು ಕಂಡೇ ತೀರುವುದು ಎಂಬುದನ್ನು ಶಾಲಾ ವಿದ್ಯಾರ್ಥಿಗಳಲ್ಲಿ ಪ್ರಯೋಗ ಮಾಡಿ ತೀರ್ಮಾನಕ್ಕೆ ಬರಲಾಗಿದೆ. ಇಚ್ಛಾಶಕ್ತಿಯಿಂದ ಸ್ಥೂಲಕಾಯರು ಅತಿ ಸ್ಥೂಲಕಾಯರಾಗದಂತೆ ನೋಡಿಕೊಳ್ಳದಿದ್ದರೆ ಮಾತ್ರ ಅವರಿಗೆ ಜೀವನದಲ್ಲಿ ಯಾವುದೂ ರುಚಿಸದ ಅತ್ಯಾಲಸ್ಯ ಪ್ರಾಪ್ತಿಯಾಗುವುದು. ; ಈ ಜಡಭರತ ತತ್ವದಿಂದ ರಕ್ಷಿಸಿಕೊಂಡರೆ ಅವರಷ್ಟು ಸುಖಜೀವಿಗಳಾಗಿ ಬದುಕಬಲ್ಲವರು ಮತ್ತಾರೂ ಇಲ್ಲ.

ತತ್ವಜ್ಞಾನಿ ಪ್ಲೇಟೋಗೆ ರೊಟ್ಟಿ, ಜೇನು, ತರಕಾರಿ, ಹಣ್ಣು ಎಂದರೆ ಬಹಳ ಇಷ್ಟವಂತೆ. 'ಇಸ್ಲಾಮಿನ ಪ್ರವಾದಿಯಾದ ಮಹಮ್ಮದನಿಗೆ ಹುರಿದ ಕುರಿಮರಿಯ ಮಾಂಸ ಬಹಳ ರುಚಿಸುತ್ತಿತ್ತಂತೆ. ಚಾರಲ್ಸ ಮಹಾಶಯನು ಜಿಂಕೆಯ ಮಾಂಸಕ್ಕೆ ಬಾಯಿ ನೀರು ಬಿಡುತ್ತಿದ್ದನಂತೆ. ಅಂತೂ ಸ್ಥೂಲದೇಹಿಗಳು ಭೋಗಿಗಳು. ಸೇವಕ ಧರ್ಮ ಅವರಿಗೆ ಚನ್ನಾಗಿ ಸಾಧಿಸದು. ಅವರು ಸೇವ್ಯರಾಗಿ ಉಳಿದರೆ ಮಾತ್ರ ಬಾಳಿನಲ್ಲಿ ಗೆಲ್ಲುವರು.

ಮೋಟಾರುಗಳು: ಇಬ್ಬರು ಮುತ್ತಜ್ಜಂದಿರು ಮತ್ತು ಮಧ್ಯಯುಗದ ವಿಲಾಸಿಗಳ ಕುದುರೆಗಾಡಿಗಳು

○ ○ ○ ○ ○

ವಧೂವರರ ಪರಿಚಯ

ಕಲಿಕಾಲದಲ್ಲಿ ತಾಯ್ತಂದೆಯರ ಅಭಿಪ್ರಾಯದ ಆಧಾರದ ಮೇಲೆ ಹೆಣ್ಣು ಗಂಡು ಪರಸ್ಪರದ ಆಯ್ಕೆ ಮಾಡುವುದು ಬಳಯಲಿಲ್ಲ. ಅವರವರನ್ನು ಅವರವರೇ ನೋಡಿಕೊಳ್ಳಬೇಕಾದ ಅವಶ್ಯಕತೆಯನ್ನು ತಾಯ್ತಂದೆಯರು ತಂದೊಡ್ಡಿದ್ದಾರೆ. ಎಂಬುದನ್ನು ಕಷ್ಟನಷ್ಟಗಳಿಗೆ ಗುರಿಯಾದ ಪತಿಪತ್ನಿಯರೆಲ್ಲರೂ ಬಲ್ಲರು. ಆದರೆ ಇದರ ನಿವಾರಣೆಗೆ ಆತ್ಯಂತಿಕ ಉಪಾಯವೆಂದರೆ ತಾಯ್ತಂದೆಯರನ್ನೂ ವಧೂವರರನ್ನೂ ವಿವೇಕಶಾಲಿಗಳನ್ನಾಗಿ ಮಾಡುವ ನಾಗರಿಕ ಶಿಕ್ಷಣ ಒಂದೇ. ಹಾಗಿದ್ದರೂ ಅಪರಿಚಿತ ವಧೂವರರಲ್ಲಿ ಸಂಭಾಷಣಾರಂಭಕ್ಕಾದರೂ ಅನುಕೂಲ ಉಂಟಾಗಲೆಂದು ಅವರು ಪರಸ್ಪರರಿಂದ ತಿಳಿದುಕೊಳ್ಳಬೇಕಾದ ಅಂಶಗಳನ್ನು ಈ ಕೆಳಗೆ ಕೊಡಲಾಗಿದೆ.

೧ ಹುಟ್ಟಿದ ಕುಟುಂಬದಲ್ಲಿಯ ಸಂಬಂಧ ನಿರ್ದೇಶ.

೨ ಕುಟುಂಬ ಸದಸ್ಯರಲ್ಲಿ ಆತ್ಯಾಪ್ತರ ಹೆಸರು.

೩ ಮನೆ.

—೧೧ನೆಯ ಪುಟಕ್ಕೆ

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೨

ಕಳೆದ ವಾರದ ವರದಿಯ ನಂತರ ಶೇರ ಪೇಟೆಯಲ್ಲಿ ವಿಶೇಷ ಬದಲಾವಣೆಯೇನೂ ಆಗಿಲ್ಲ. ಶೇಜಿ ವ್ಯಾಪಾರಿಗಳು ಬೆಲೆ ಕೆಳಗಿಳಿಯು ದಂತೆ ನೋಡಿಕೊಂಡರು. ಪಾಕಿಸ್ತಾನದೊಡನೆ ೩೫ ಸರಕುಗಳ ವ್ಯಾಪಾರದ ಒಪ್ಪಂದವಾದು ದರಿಂದಲೂ ಹೈದರಾಬಾದ ಸಮಸ್ಯೆ ಬಗೆಹರಿ ಯುವ ಲಕ್ಷಣ ತೋರಿದ್ದರಿಂದಲೂ ಪೇಟೆ ಯಲ್ಲಿ ಅಷ್ಟೊಂದು ಕುಸಿದಾಟ ಕಾಣಿಸಲಿಲ್ಲ. ಇಂದಿನ ಕೊನೆಯ ದರಗಳು ಇಂತಿವೆ:

ಜವಳಿ

ಅಹಮದಾಬಾದ ಅಡ್ವಾನ್ಸ	೨೭೬.೪-೦
ಬಾಂಬೆ ಡಾಯಿಂಗ್	೧೧೦೪-೧೨-೦
ಸೆಂಟ್ರಲ ಇಂಡಿಯಾ	೩೧೬-೨-೦
ಸೆಂಚುರಿ	೫೧೫-೮-೦
ಗೋಕಾಕ	೩೨೫-೦-೦
ಕೋಹಿನುರು	೬೪೧-೨-೦
ಫಿನಿಕ್ಸ	೪೫೭-೮-೦
ಸ್ವದೇಶಿ	೬೩೭-೦-೦

ಇತರ

ಬೇಲಾಪುರ ಸಕ್ಕರೆ	೩೪೧-೦-೦
ಬಾಂಬೇ ಬರ್ಮಾ	೪೫೫-೦-೦
ಟಾಟಾ ಸ್ಟೀಲ ಡೆಫರ್ಡ	೧೬೫೩-೮-೦
,, ,, ಸಾದಾ	೩೨೬-೦-೦
ಇಂಡಿಯನ್ ಆಯರ್ನ	೨೯-೫-೦
ಸಿಂಧ್ಯ ಸ್ಟೀಮ	೨೮-೨-೦
ಅಸೊ. ಸಿಮೆಂಟ್ಸ	೧೭೩-೦-೦
ಸೆಂಟ್ರಲ ಬ್ಯಾಂಕ್	೮೬.೦.೦
ಇಂಪಿರಿಯಲ್ ಬ್ಯಾಂಕ ಪೂರ್ಣ	೨೦೪೭.೮-೦
ಇಂಡಿಯನ್ ಬ್ಯಾಂಕ	೨೨೬.೦.೦
ರಿಝರ್ವ ,,	೧೧೦-೦-೦

ಸರಕಾರಿ ಸಾಲ ಪತ್ರ

೩% ೪೮-೫೩	೧೦೦.೧-೦
೩½% ೪೯-೫೨	೧೦೦-೬-೦
೩% ೧೯೬೩.೬೫	೧೦೦.೧೫.೦

ಚಿನ್ನ--ಬೆಳ್ಳಿ

ಚಿನಿವಾರ ಕಟ್ಟೆಯಲ್ಲಿ ಕಳೆದ ವಾರದ ಮುಂದಿ ಪ್ರವೃತ್ತಿ ತೊಲಗಿ ತಿರುಗಿ ಬೆಲೆಗಳು ಸುಧಾರಿಸಿ ದವು. ತಯಾರಿ ಚಿನ್ನ ೧೧೬.೨.೦ ವರೆಗೂ ಹೋಗಿ ತಿರುಗಿ ತುಸು ಇಳಿಯಿತು. ಇಂದಿನ ಕೊನೆಯ ದರಗಳು ಇಂತಿವೆ:

ಚಿನ್ನ ತಯಾರಿ	೧೧೫.೨.೦
,, ವಾಯದಾ	೧೧೪-೪-೦
ಸಾವರಿನ್	೭೫.೦.೦
ಬೆಳ್ಳಿ ತಯಾರಿ	೧೬೭.೪.೦
,, ವಾಯದಾ	೧೬೭.೪.೦

ಅರಳೆ

ಬಟ್ಟೆಯ ಮೇಲೆ ಸರಕಾರ ತಿರುಗಿ ನಿಯಂತ್ರಣ ಹೇರಬಹುದೆಂಬ ಭೀತಿಯಿಂದಲೂ ಹೈದರಾಬಾದದ ಪರಿಸ್ಥಿತಿ ಅನಿಶ್ಚಿತವಾಗಿದ್ದುದರಿಂ ಲೂ ಅರಳೆ ಬೆಲೆಗಳು ಬಹಳ ಇಳಿದುಕೊಂ ಡವು. ಜುಲೈ ಅರಳೆ ರೂ. ೭೨೩-೦-೦ ತನ ಕವೂ ಇಳಿದು ಹೋಗಿ ತಿರುಗಿ ತುಸು ಸುಧಾರಿಸಿ ಕೊಂಡಿತು. ಇಂದಿನ ಬೆಲೆಗಳು ಹೀಗೆ ಕೊನೆ ಗೊಂಡವು.

ಜುಲೈ	೭೩೦-೦-೦
ಸೆಪ್ಟಂಬರ	೭೨೪-೦-೦

ಎಣ್ಣೆ ಕಾಳು

ಶೇಂಗಾ	೧೭೦-೦-೦
,, (ಹೊಸ)	೧೬೫-೦-೦
ಅಗಸಿ	೨೬-೧೪-೦
,, ಎಣ್ಣೆ	೧೬.೪.೦

ಸಾಂಗಲಿ

ಅರಸಿನ ಹೇರು	೧೧೪-೧೧೮॥
ಶೇಗಾ ಖಂಡಿ	೧೩೨-೦-೦
ಮೆಣಸಿನಕಾಯಿ (ಹೊಸ)	೧೩೦—೧೯೫
ಬೆಲ್ಲ	೩೦-೫೭

ಶಿವಮೊಗ್ಗ

ತಾ. ೨೫

ದೇಶಾವರ ನಂ. ೧ ಮಣ ೧ ಕ್ಕೆ	೩೪-೩೭
,, ,, ೨	೩೦-೩೪
ರಾಜಾ ಅಲವು	೩೨-೩೫
ಕೊರೆಸಾಲು ,,	೨೭-೩೨
ವಂತಿ ಬೆಟ್ಟೆ	೨೨-೨೪
ಬೆಟ್ಟೆ	೧೯-೨೨
ಸುಲಿ	೩೩-೩೬

ನಾಲ್ಕು ಮಾತು — ರಂಗನಾಥ ದಿವಾಕರ

(೧) ಏಕತಂತ್ರ ಕರ್ನಾಟಕ

ಏಕತಂತ್ರ ಕರ್ನಾಟಕದ ಕಲ್ಪನೆಯ ಬಗ್ಗೆ ಹಾಗೂ ಅದನ್ನು ಕುಂಠಿತಗೊಳಿಸಿದ ಕೆಲಸದ ಬಗ್ಗೆ ಮತ್ತು ಆ ವಿಷಯದಲ್ಲಿ ಆದ ಪ್ರಗತಿಯ ಬಗ್ಗೆ ಕರ್ನಾಟಕದ ಒಳಗೆ ಹಾಗೂ ಕರ್ನಾಟಕದ ಹೊರಗೆ ಬಹಳ ಸಮಾಧಾನವು ವ್ಯಕ್ತ ವಾಗ ಲಾಗುತ್ತಿದೆ. ಕೇಂದ್ರ ಸರಕಾರದ ಜವಾಬ್ದಾರ ಮಂತ್ರಿಗಳು, ಎರಡು ದೊಡ್ಡ ಸಂಸ್ಥಾನಗಳ ದಿವಾನರು, ಒಂದು ಪ್ರಾಂತದ ಮುಖ್ಯ ಮಂತ್ರಿ ಗಳು, ಇವರ ಭೆಟ್ಟಿಯಾದಾಗ, 'ಇದು ಕೈಗೂಡಿದರೆ ಕರ್ನಾಟಕದ ಹಿತವಾಗುವದಂತೂ ಸ್ಪಷ್ಟ; ಅಲ್ಲದೆ, ಮೈಸೂರು ಹಿಂದುಸ್ತಾನದಲ್ಲಿಯ ಎಲ್ಲ ಸಂಸ್ಥಾನಗಳಿಗೂ ಮಾದರಿಯಾಗಿ ನಿಲ್ಲುವದು. ಬರೋಡೆ ತ್ರಾವಣಕೋರಗಳಿಗೆ ಮೇಲು ಪಂಕ್ತಿ ಹಾಕಿಕೊಟ್ಟಂತಾಗುವದು,' ಎಂದು ಕಂಠೋಕ್ತವಾಗಿ ಕೊಂಡಾಡಿದರು.

* * *

ಇನ್ನು ಆಗುವದು ಹೋಗುವದು ಯುನಿಯನ್ ಕರ್ನಾಟಕದ ಮುಖಂಡರು, ಮೈಸೂರಿನ ಮಂತ್ರಿ ಮಂಡಲ ಹಾಗೂ ಶ್ರೀಮನ್ಮಹಾರಾಜರು ಹಾಗೂ ಕೇಂದ್ರ ಸರಕಾರ ಇವರ ದೂರದರ್ಶಿತ್ವ ಹಾಗೂ ಮುತ್ಸದ್ದಿತನವನ್ನೇ ಅವಲಂಬಿಸಿದೆ. ಇವಲ್ಲದೆ ಇಡೀ ಕರ್ನಾಟಕದ ಮಹಾ ಜನರ ಮತಾಭಿಪ್ರಾಯವನ್ನೂ ಅವಲಂಬಿಸಿದೆ. ಕೊನೆಗೆ ಈ ಏಕತಂತ್ರ ಆದರ್ಶವನ್ನೇ ಅಖಂಡ ಕರ್ನಾಟಕದ ಜನಾಂಗದ ಸುಖ ದುಃಖಗಳು ಅವಲಂಬಿಸಿವೆ. ಅವರೆಲ್ಲರ ಆತ್ಯಂತಿಕ ಸುಖವು ಏಕತಂತ್ರವಾಗುವುದರಲ್ಲಿಯೇ ಇದೆ. ಮೊದಲಿನಂತೆ ಛಿನ್ನವಿಚ್ಛಿನ್ನವಾಗಿಯೇ ಉಳಿಯಬೇಕೋ ಈಗ ಒಂದಾಗುವ ಸುಸಂಧಿ ದೊರೆತಾಗ ಒಕ್ಕಟ್ಟಾಗಿ, ಏಕತಂತ್ರರಾಗಿ ಭದ್ರವಾದ ಕರ್ನಾಟಕ ಜನಾಂಗವನ್ನು ಕಟ್ಟಿ ಸ್ವಪರ ಉದ್ಧಾರವನ್ನು ಮಾಡಿಕೊಳ್ಳಬೇಕೊ ಈ ಪ್ರಶ್ನೆ ಅವರ ಮುಂದೆ ಅದೆ.

* * *

ಈ ವರೆಗಂತೂ ಉಭಯ ಮುಖಂಡರು —ಯೂನಿಯನ್ ಕರ್ನಾಟಕ ಹಾಗೂ ಮೈಸೂರು —ಯೋಗ್ಯವಾದ ಹೆಜ್ಜೆಗಳನ್ನು ಹಾಕುತ್ತ ನಡೆದಿರುವರು. ಇದರ ಮೇಲಿಂದ ನೋಡಲಾಗಿ ಅವರು ತಾತ್ಕಾಲಿಕ ಲಾಭ ಹಾನಿಗಳ ಕಡೆಗೆ ನೋಡದೆ ಉದಾರ ಬುದ್ಧಿಯಿಂದ ದೂರದ ವರೆಗೆ ವಿಚಾರ ಮಾಡಿ ಕರ್ನಾಟಕದ ಜನರ ಆತ್ಯಂತಿಕ ಹಿತದ ಕಡೆಗೆ ದೃಷ್ಟಿಯನ್ನಿಟ್ಟಿರುವ ರೆಂಬುದು ಸ್ಪಷ್ಟವಿದೆ. ಇನ್ನು ಕೇಂದ್ರ ಸರಕಾರದವರಾಗಲಿ ಕಾಂಗ್ರೆಸ್ಸಿನ ಶ್ರೇಷ್ಠಿಗಳಾಗಲಿ ಈ ಬಗ್ಗೆ ಯಾವ ಧೋರಣವನ್ನು ತಾಳುವರೊ ನೋಡಬೇಕು. ಅವರು ಸಹ ಈ ಬಗ್ಗೆ ತಮ್ಮಿಂದಾದಷ್ಟು ಸಹಾಯವನ್ನೇ ಮಾಡುವರೆಂಬಲ್ಲಿ ಯಾವ ಸಂಶಯವೂ ತೋರುವದಿಲ್ಲ. ಅವರಾದರೂ ಲೋಕಹಿತವನ್ನು ಬಯಸಿಯೆ ಈ ವರೆಗೆ ಕೆಲಸವನ್ನು ಮಾಡುತ್ತ ಬಂದವರಲ್ಲವೆ?

(೨) ಸತ್ವಪರೀಕ್ಷೆ

ಕಾಂಗ್ರೆಸ ಸಂಸ್ಥೆಯ ಹಾಗೂ ಕಾಂಗ್ರೆಸ್ಸಿಗರ ಸತ್ವಪರೀಕ್ಷೆಯ ಕಾಲವು ಸಮೀಪಿಸುತ್ತಲಿದೆ ಅಥವಾ ಸದ್ಯಕ್ಕೆ ಆ ಸತ್ವಪರೀಕ್ಷೆ ನಡೆದಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈ ವರೆಗೆ ಕಾಂಗ್ರೆಸ್ ಸಂಸ್ಥೆಯು ಅನೇಕ ಕಾರಣಗಳ ಮೂಲಕ ವಿರೋಧಿ ಪಕ್ಷವಾಗಿ ಹಿಂದುಸ್ತಾನದಲ್ಲಿ ಕೆಲಸ ಮಾಡುತ್ತ ಬಂದಿತು. ಹಿಂದುಸ್ತಾನದಲ್ಲಿ ಅಧಿಕಾರಾರೂಢವಾಯಿತು. ಅತ್ಯಂತ ಕಠಿಣ ಕಾಲದಲ್ಲಿ ಹಾಗು ಯುದ್ಧೋತ್ತರ ವಿಷಮ ಪರಿಸ್ಥಿತಿಯಲ್ಲಿ ಈ ಭಾರವು ಕಾಂಗ್ರೆಸ್ಸಿನ ಮೇಲೆ ಬಿದ್ದದರಿಂದ ಜನರ ಅಪೇಕ್ಷೆಗೆ ಅನುಸಾರವಾಗಿ ಯೋಗ್ಯ ಪರಿಹಾರವನ್ನು ಪೂರೈಸುವದು ಅಸಾಧ್ಯವಾಗಿದೆ. ನೇರವಾಗಿ ಬೊಟ್ಟು ಮಾಡಿ ತೋರಿಸಬಹುದಾದ ಕೆಲವು ದಂತೆ ಜನ ಕೇಳಿದಷ್ಟು ಬೇಗ ಸುಧಾರಿಸದ್ದು ಬಿಟ್ಟು ಅನೇಕ ಕಾಂಗ್ರೆಸ್ಸಿಗರು ಅಧಿಕಾರದ ದನ್ನು ಇಟ್ಟಿರುವರು. ಇದರಿಂದ, ಕಮ್ಯುನಿಸ್ಟರು ಸೋಶಾಲಿಸ್ಟರು, ಬಲವಾದ ಕೋಮುವಾದಿ ಪಕ್ಷದವರು, ಭಾರತದಲ್ಲಿ ಪ್ರಾಂತೀಯರು ನಮ್ಮ ತಮ್ಮ ಪಕ್ಷದ ಕಾಂಗ್ರೆಸ್ಸಿನ ಮೇಲೆ ದಾಳಿ ಯನ್ನಿಟ್ಟಿರುವರು. ಇಂಥ ಪ್ರಸಂಗದಲ್ಲಿ ಸ್ವಾಭಾವಿಕವಾಗಿಯೆ ಕಾಂಗ್ರೆಸ್ಸು ಹೆಚ್ಚು ಬಲಿಷ್ಠವೂ ಸಂಘಟಿತವೂ ಆಗುವದು ಅತ್ಯವಶ್ಯವಾಗಿದೆ. ಇದರ ಸಂಖ್ಯೆಯು ದಿನೇದಿನೇ ಬೆಳೆದು ಬರಬೇಕು ಹೆಚ್ಚು ತಲೆದೋರುತ್ತಿದೆ. ಒಂದೇ ಸಂಯುಕ್ತ ಪ್ರಾಂತದಲ್ಲಿ ೧೦೦೦ ಜನರಿಗೆ ಶಿಸ್ತಿನ ವಿರುದ್ಧ ವರ್ತಿಸಿದ್ದರಿಂದ ಸವಾಲು ಕೇಳಲಾಗಿದೆ! ಹೀಗೆ ನಡೆದರೆ ಸಂಸ್ಥೆಯ ಗತಿ ಏನಾಗಬೇಕು? ಇತ್ತ ಮಹಾರಾಷ್ಟ್ರದಲ್ಲಿ ಬಹುಜನ ಸಮಾಜವಾದ ಎಂಬ ಹೊಸ ಪಕ್ಷ ಹೊರಟು ಕಾಂಗ್ರೆಸ್ಸಿನ ವಿರುದ್ಧ ಹೋರಾಡಲಣಿಯಾಗಿದೆ.

* * *

ಈ ಪ್ರಸಂಗದಲ್ಲಿ ಕಾಂಗ್ರೆಸ್ಸಿಗರ ತತ್ವಗಳಿಗೆ ಅಂಟಿಕೊಂಡು ಈ ವರೆಗೆ ತ್ಯಾಗಪೂರ್ವಕವಾಗಿ ಕಾರ್ಯವನ್ನು ಮಾಡುತ್ತ ಬಂದಿರುವವರು ತಮ್ಮ ತಮ್ಮೊಳಗಿನ ಮೇಲಾಟ ಮುಂತಾದವುಗಳನ್ನು ತೊರೆದು ಒಕ್ಕಟ್ಟಾಗಿ ಶಿಸ್ತಿನಿಂದ ನಡೆಯದೆ ಹೋದರೆ ಕಾಂಗ್ರೆಸ್ಸು ದುರ್ಬಲವಾಗಿ ಹೋಗುವದು. ಸದ್ಯದ ವಿಷಮ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸು ಹಾಗೆ ದುರ್ಬಲವಾಗುವದು ಯಾವ ದೇ ದೃಷ್ಟಿಯಿಂದ ಇಷ್ಟದಾಗಲಾರದು. ಈ ಸಂಸ್ಥೆ ಬಿಟ್ಟರೆ ದೇಶದಲ್ಲಿ ಇನ್ನಾವ ಸಂಸ್ಥೆಯೂ ಇಷ್ಟು ಬಲಿಷ್ಠವಿಲ್ಲ, ಇಷ್ಟು ಜನಸಾಮಾನ್ಯರ ವಿಶ್ವಾಸಕ್ಕೆ ಪಾತ್ರವಾಗಿಲ್ಲ. ಇಷ್ಟು ತ್ಯಾಗ ಮಾಡಿಲ್ಲ. ಆದುದರಿಂದ ಈ ಪರಿಸ್ಥಿತಿಯಲ್ಲಿ ನಿಜವಾಗಿ ಕಾಂಗ್ರೆಸ್ಸಿನ ಭಕ್ತರೆನಿಸುವವರು ಕಾಂಗ್ರೆಸ್ಸಿನ ಮೂಲ ತತ್ವಗಳತ್ತ ಹೆಚ್ಚು ಲಕ್ಷಗೊಟ್ಟು ಅವುಗಳಂತೆ ಆಚರಿಸುವದು ಅತ್ಯಾವಶ್ಯಕವಿದೆ. ಲೋಕಶಿಕ್ಷಣ, ಲೋಕಸಂಘಟನ ಹಾಗೂ ಲೋಕಸೇವೆ ಈ ಮೂರು ಮಾತುಗಳ ಕಡೆಗೆ ಸದ್ಯಕ್ಕೆ ಕಾಂಗ್ರೆಸ್ಸಿನಿಂದ ದುರ್ಲಕ್ಷವಾಗುತ್ತಿದೆ ಎಂಬದನ್ನು ಒಪ್ಪಬೇಕಾಗುವದು. ಇದೇ ಮಾತನ್ನು ಆಚಾರ್ಯ ಕೃಪಲಾನಿಯವರು ಖಂಡತುಂಡಾಗಿ ಹೇಳಿರುವರು. ಇತ್ತ ದುರ್ಲಕ್ಷ ಮಾಡಿದರೆ ಇನ್ನೂ ಹೆಚ್ಚು ಭಯ.

(೩) ಹೈದ್ರಾಬಾದ

ಈ ಹೊತ್ತು ನಾಳೆ ಎನ್ನುತ್ತ ಈ ಪ್ರಶ್ನೆ ಹಾಗೆಯೆ ನೆನಗುದಿಗೆ ಬಿದ್ದಿದೆ. ಈ ಹೊತ್ತಿನ ಮರಣ ನಾಳೆ ಎಂದು ಹೈದ್ರಾಬಾದದ ಅಧಿಕಾರಿಗಳು ಪ್ರಕರಣವನ್ನು ಮುಂದೆ ಹಾಕುತ್ತ ನಡೆದಂತೆ ತೋರುವದು. ಯೂನಿಯನ್ ಸರಕಾರದವರು ಅತ್ಯ ವಿಶ್ವಾಸಪೂರ್ವಕವಾಗಿ ಈ ಕೆಲಸವು ತಮಗೆ ಇಷ್ಟವಾದಂತೆಯೆ ಆಗುವದೆಂದು ತಿಳಿದು ಧೀರೋದಾತ್ತವಾಗಿ ನಡೆದಿರುವರು. ಆದರೆ ಜನಸಾಮಾನ್ಯರ ಮನೋರಚನೆ ಹಾಗೂ ಭಯಸ್ಥಿತಿ ಇವು ಕರುಣಾಸ್ಪದವಾಗಿರುವವೆಂಬದನ್ನು ನಾವು ಮರೆಯಕೂಡದು. ಹೀಗಿದ್ದರೂ ಭಯಪಟ್ಟು ಕಕ್ಕಾವಿಕ್ಕಿಯಾಗಿ ಅತ್ತಿತ್ತ ಓಡಾಡುವದರಿಂದ ದೇಶತ್ಯಾಗ ಮಾಡುವದರಿಂದ ಯಾವ ಲಾಭವೂ ಆಗದು. ಇಷ್ಟೇ ಅಲ್ಲ. ಮತ್ತಷ್ಟು ತೊಂದರೆಯೆ ಆಗುವದೆಂಬಲ್ಲಿ ಸಂಶಯವಿಲ್ಲ. ಆದುದರಿಂದ ಈ ವರೆಗೆ ಧೈರ್ಯದಿಂದ ಇದ್ದಂತೆ ಇನ್ನು ಮೇಲೂ ಧೈರ್ಯದಿಂದಿರುವದೆ ಜಾಣತನವೆಂದು ಹೇಳಬೇಕಾಗಿದೆ. ನಮ್ಮ ಆಸ್ತಿ, ನಮ್ಮ ಜನ, ನಮ್ಮ ಧನ, ನಮ್ಮ ಮಾನ ಇವುಗಳನ್ನು ನಾವು ನಮ್ಮ ಧೈರ್ಯ ಸ್ಥೈರ್ಯಗಳಿಂದಲೆ ಕಾಯಬಲ್ಲೆವು ಹೊರತು ನಾವೇ ಕೈಕಾಲು ಬಿಟ್ಟರೆ ನಮ್ಮನ್ನು ಯಾರೂ ಕಾಪಾಡಲಾರರು ಎಂಬುದು ಈಗ ಎಲ್ಲ ನಿರ್ವಾಸಿತರ ಅನುಭವದ ಮಾತಾಗಿದೆ. ಅದೇ ಮಾತು ಇಲ್ಲಿಯಾದರೂ ಅನ್ವಯಿಸುವದು. ಅದೇ ಧೈರ್ಯವೆ ಕೆಲಸಕ್ಕೆ ಬರುವದು, ಗಾಬರಿ, ಭಯ ಇವು ಯಾವಾಗಲೂ ಘಾತಕವಾದವುಗಳೇ ಸೈ.

೧೯೪೮ ರಲ್ಲಿ ೬॥ ಅಡಿ ಸುತ್ತಳತೆಯ ೧೫೦ ಪೌಂಡು ತೂಕದ ಒಂದು ಗುಂಬಳಕಾಯಿ ಯನ್ನು ನ್ಯೂಯಾರ್ಕದ ಸ್ಮಿಥ್ ಎಂಬುವನು ತನ್ನ ತೋಟದಲ್ಲಿ ಬೆಳೆಯಲು ಸಮರ್ಥನಾದನು.

ಹುಬ್ಬಳ್ಳಿ

ಮುಂಬೈ ಪೇಟೆಯ ಮುಂದಿ ಇದ್ದ ಮೂಲಕ ಈ ಅಠವಡೆಯಲ್ಲಿ ಈ ಪೇಟೆಯಲ್ಲಿ ವಿಶೇಷ ವ್ಯಾಪಾರವಿಲ್ಲ.

ಜಯವಂತಿ ಹತ್ತಿ ಕಾಳು	೯೦ ಪೌಂಡು
ಡ. ಹತ್ತಿ ಕಾಳು	,, ,,

ಮೋ. ಕ. ಗಾಂಧಿ

[ಗಣಿತದ ಪ್ರವೀಣರೂ, ಸಾಹಿತ್ಯಕ [illegible] ಅವರ ಮರಣ ವಿಷಯಕ [illegible] ಬರೆದಿದ್ದ ಲೇಖನವು [illegible] ಸದ್ಯದ ವಾಚಕರ ಅವಗಾಹನೆಗಾಗಿ ಇಲ್ಲಿ ಎತ್ತಿಕೊಡುತ್ತೇವೆ. [illegible] ಕೇಳುವದನ್ನು ಉದ್ದೇಶಿಸಿದ್ದಕ್ಕಾಗಿ ಅವರ ಪ್ರಕಾಶಕರ ಕ್ಷಮೆ ಕೋರುತ್ತೇವೆ. - ಸಂ.]

ಮೋಹನದಾಸ ಕರಮಚಂದ ಗಾಂಧಿಯವರನ್ನು ಒಬ್ಬ ರಾಜಕೀಯ ತಲೆತಿರುಕರು ಕೊಂದು ಹಾಕಿದರೂ ಭಾರತದ ಅನೇಕ ಪ್ರಸಂಗದ ಮುಖಾಭಿಭೂತಿಯೆನಿಸಿದ ಅವರ ಜೀವನಕ್ಕೆ ಅದೇನು ಕಲಂಕವಾಗಿಲ್ಲ. ಅವರ ಅಪಾರ ಸುಪ್ರದ ಜೀವನದ ಕೊನೆಗೆ ಈ ಬಗೆಯ ಹಿಂಸಾತ್ಮಕ ಘಟನೆ ಸಂಭವಿಸಿದ್ದರಿಂದ ಗಾಂಧೀಜಿ ಅಸಾಧಾರಣ ಆಧ್ಯಾತ್ಮಿಕ ಗುರುವಾಗಿದ್ದರೆಂಬ ಜನಮನದಲ್ಲಿ ನೆಲಸಿದ ಭಾವನೆ ಇನ್ನೂ ದೃಢವಾಗಿ ಹೋಯಿತು. ಜಗದೋದ್ಧಾರಕ್ಕಾಗಿ ಬಂದವರಲ್ಲಿ ಈ ಬಗೆಯ ಕೊನೆಗೆ ಗುರಿಯಾದವರು ಇವರೇ ಮೊದಲಿಗರೇನಲ್ಲ. ಗಾಂಧೀಜಿಗೆ ಮುಪ್ಪಡಸಿ ಹೋಗಿತ್ತು. ಭಾರತದ ಸ್ವಾತಂತ್ರ್ಯ ವಿಷಯಕವಾಗಿದ್ದ ಅವರ ರಾಜಕೀಯ ಹಂಬಲವೂ ಪೂರೈಸಿ ಹೋಗಿತ್ತು. ರಾಷ್ಟ್ರೀಯ ಹಾಗೂ ಜಾಗತಿಕ ನಿಷ್ಠೆಯ ಬಗ್ಗೆ ಸ್ವಯಂ ಆಚರಣೆಯಿಂದ ಅವರ ಅನುಯಾಯಿಗಳಿಗೆ ಮಾರ್ಗದರ್ಶನವಾಗಿ ಹೋಗಿದ್ದಾರೆ. ಆಧುನಿಕ ಭಾರತದ ಬಹುಮುಖ ಪ್ರಮೇಯಗಳ ಬಗ್ಗೆ ತಮ್ಮ ತತ್ವಗಳನ್ನು ಅನೇಕಾನೇಕ ಸಂದರ್ಭಗಳಲ್ಲಿ ಉದ್ಘೋಷಿಸಿದ್ದಾರೆ. ಸಾಲದ್ದಕ್ಕೆ ಎಷ್ಟೋ ವರ್ಷಗಳ ವರೆಗೆ ಈ ಉದ್ಘೋಷಿತ ತತ್ವಗಳನ್ನು ತಮ್ಮದೇ ಆದ ಒಂದು ವೈಶಿಷ್ಟ್ಯದೊಂದಿಗೆ ಪರಿಣಾಮಕಾರಕವಾಗಿಯೂ ಫಲಪ್ರದವಾಗಿಯೂ ಆಚರಿಸಿ ತೋರಿಸಿದ್ದೂ ಉಂಟು.

ಆದ್ದರಿಂದ ವೈಯಕ್ತಿಕ ಪ್ರಭಾವ ಪ್ರತಿಭೆ ಹಾಗೂ ಧ್ಯೇಯ ಸಾಧನೆಯ ವಿಚಾರ ದೃಷ್ಟಿಯಿಂದ ಅವಲೋಕಿಸಿದರೆ ಗಾಂಧೀಜಿಯ ಜೀವನವು ಪರಿಪೂರ್ಣವೇ ಆಗಿತ್ತೆಂದು ಧಾರಾಳವಾಗಿ ಹೇಳಬಹುದು. ಅವರ ಈ ಗುಣಗಳನ್ನೇ ಭಾರತದ ಇನ್ನುಳಿದವರು ಅಳವಡಿಸಿಕೊಳ್ಳುವದನ್ನು ಉಳಿದಿತ್ತು. ಈ ಅಳವಡಿಕೆ ಅವರಿಲ್ಲದಾಗಲೂ ಆಗಬಹುದಲ್ಲ? ಎಂದ ಮೇಲೆ ಅವರಿಲ್ಲವೆಂದು ಅವರು ತೋರಿದ ದಾರಿಯಾಗಲಿ ಕಲಿಸಿದ ತತ್ವವಾಗಲೀ ಹಾಳಾಗಲಿಲ್ಲ. ಆದ್ದರಿಂದ ಈಗ ಗಾಂಧೀಜಿಯ ತತ್ವಾಚರಣೆಯಲ್ಲಿ ತಪ್ಪದಿಯಿಟ್ಟು ಗುರಿ ಮುಟ್ಟುವದು ಭಾರತೀಯರ ಮೇಲಿದ್ದ ಭಾರ.

ಭಾರತೀಯರು ಗಾಂಧೀಜಿಗೆ 'ಬಾಪು' ಎನ್ನುವರು, ಆದರೆ ತಂದೆಯ ಪದ ಕೊಟ್ಟಿದ್ದರು. ಅದನ್ನು ಕಟ್ಟ ಕಡೆಗೆ ಅವರು ಒಪ್ಪಿಕೊಂಡೂ ಇದ್ದರು. ಲಕ್ಷಾವಧಿ ಜನರಲ್ಲಿ ಈ ಪಿತೃಭಾವವಿದ್ದುದರಿಂದ ಅವರ ಮರಣದಿಂದ ಅನೇಕರಿಗೆ ರಾಷ್ಟ್ರೀಯತೆ ಗಿಂತ ವೈಯಕ್ತಿಕ ನಷ್ಟವೇ ಆಯಿತೆಂದು ತಿಳಿದು ದುಃಖ ಪಟ್ಟದು ಸ್ವಾಭಾವಿಕ. ಗಾಂಧೀಜಿ ಭಾರತಕ್ಕೆ ದಯಪಾಲಿಸಿದ್ದು ಪಿತೃವಾತ್ಸಲ್ಯದ ಮಾರ್ಗದರ್ಶನವಷ್ಟೇ ಅಲ್ಲ; ಜಗತ್ತಿನ ಸಂಸ್ಕೃತಿಗೇ ದಾನವಾಗಿರುವ ಇತಿಹಾಸ ಪ್ರಸಿದ್ಧ ಅಹಿಂಸೆಯ ನೈತಿಕ ಬಲವನ್ನೇ ಅಲ್ಲ; ಇದಕ್ಕೂ ಹೆಚ್ಚಿನದನ್ನು ಗಾಂಧೀಜಿ ಕೊಟ್ಟುಹೋಗಿದ್ದಾರೆಂಬುದು ದಿನ ಕಳೆದಂತೆ ಕಂಡು ಬರದಿರದು.

ಅದ್ಭುತ ಆತ್ಮಸಾಮರ್ಥ್ಯದಿಂದಲೇ ಗಾಂಧೀಜಿ ಮಹಾತ್ಮರೆನಿಸಿದರು. [illegible]

[illegible]

[illegible] ಗಾಂಧೀಜಿಯವರಲ್ಲಿ [illegible]

— [illegible]

ಕರ್ಮವೀರ

[illegible]

ಭಾರತದ 'ಇಡುಗಂಟು'


ಹಿಂದುಸ್ಥಾನದ 'ಇಡುಗಂಟಿನ' (ಸ್ಟರ್ಲಿಂಗ ಸಾಲ) ಸಮಸ್ಯೆಯಿನ್ನೂ ಬಗೆಹರಿದಿಲ್ಲ. ಅದರ ಮಾತುಕತೆಗಾಗಿ ಹಿಂದುಸ್ಥಾನ ಸರಕಾರದ ಅರ್ಥಸಚಿವರಾದ ಸರ್ ಷಣ್ಮುಖಂ ಚೆಟ್ಟಿಯವರು ಮತ್ತು ರಿಝರ್ವ ಬ್ಯಾಂಕಿನ ಗವರ್ನರರಾದ ಸರ್ ಚಿಂತಾಮಣ ದೇಶಮುಖರು ಅರ್ಥಕಾರ್ಯ ಶಿಬ್ಬಂದಿಯೊಡನೆ ಲಂಡನಿಗೆ ಹೋಗಿರುವರು. ಬ್ರಿಟಿಶ ಸರಕಾರದಿಂದ ಹಿಂದುಸ್ಥಾನಕ್ಕೆ ೧೭೦ ಕೋಟಿ ಪೌಂಡಿನಷ್ಟು ಸ್ಟರ್ಲಿಂಗ ಸಾಲ ಮರಳಿ ಬರುವದಿದ್ದು ಆ ಬಗ್ಗೆಯೇ ಈಗ ಚರ್ಚೆ ನಡೆದಿದೆ.

ಕಳೆದ ಯುದ್ಧ ಕಾಲದಲ್ಲಿ ಹಿಂದುಸ್ಥಾನವು ತನ್ನದಲ್ಲದ ಯುದ್ಧದಲ್ಲಿಯೂ ಭಾರೀ ಕಷ್ಟನಷ್ಟವನ್ನನುಭವಿಸಿತು. ಅಲ್ಲದೆ ಬ್ರಿಟನ್ ಮತ್ತು ಅಮೇರಿಕೆಗಳ ಸೈನ್ಯಗಳ ದೊಡ್ಡ ಠಾಣ್ಯವಾಗಿದ್ದಿತು. ತತ್ಪರಿಣಾಮವಾಗಿ ಈ ಸ್ಟರ್ಲಿಂಗ ಸಂಗ್ರಹವು ಶೇಖರಿಸಲ್ಪಟ್ಟಿದೆ. ಬ್ರಿಟಿಶ ಸರಕಾರವು ಹಿಂದುಸ್ಥಾನದಲ್ಲಿ ನೇರವಾಗಿ ಸಾಲ ತೆಗೆದು ಇದನ್ನು ಮುಟ್ಟಿಸಬಹುದಾಗಿತ್ತು. ಆದರೆ ಅದು ಹಾಗೆ ಮಾಡದೆ ಇಂಗ್ಲಂಡದಲ್ಲಿ ಸ್ಟರ್ಲಿಂಗ ನಿಧಿಯನ್ನು ಸಂಗ್ರಹಿಸಿತು. ಅದಕ್ಕೆ ಪ್ರತಿಯಾಗಿ ಹಿಂದುಸ್ಥಾನದ ರಿಝರ್ವ ಬ್ಯಾಂಕು ನೋಟುಗಳನ್ನು ಕೊಟ್ಟಿತು. ಅವು ಕೂಡಲೆ ವ್ಯವಹಾರದಲ್ಲಿ ಬಂದವು. ಹೀಗೆಯೇ ಈ ಸ್ಟರ್ಲಿಂಗ ನಿಧಿ ಹೆಚ್ಚುತ್ತ ಬಂದಿದೆ.

ಸ್ಟರ್ಲಿಂಗ ಸಂಗ್ರಹವು ಯುದ್ಧ ಸಾಲವಲ್ಲ. ಅದು ಪಾಲುಗಾರರ ಸಂಸ್ಥೆಯಾದ ಹಿಂದೀ ರಿಝರ್ವ ಬ್ಯಾಂಕು ಇಂಗ್ಲಂಡಿನಲ್ಲಿ ಇಟ್ಟ ಇಡುಗಂಟು. ಆದ್ದರಿಂದ ಅದನ್ನು ಕಡಿಮೆ ಮಾಡುವ ಪ್ರಶ್ನೆಯೇ ಉದ್ಭವಿಸುವದಿಲ್ಲ ಎಂಬುದಾಗಿ ಹಿಂದುಸ್ಥಾನದ ಅರ್ಥಸಚಿವರು ಸ್ಪಷ್ಟಪಡಿಸಿದ್ದು ಯಥೋಚಿತವಾಗಿದೆ. ಮೇಲಿನ ವಿವರಣೆಯನ್ನು ನೋಡಿದ್ದಾದರೆ ಈ ಸ್ಟರ್ಲಿಂಗ ನಿಧಿಗೆ ಪಾಲುಗಾರರ ಸಂಸ್ಥೆಯಾದ ರಿಝರ್ವ ಬ್ಯಾಂಕು ಹೇಗೆ ಹೊಣೆಗಾರವೆಂಬುದು ಗೊತ್ತಾಗುವದು. ಇಂಥ ಬ್ಯಾಂಕಿನ ಹಣವನ್ನು ಕರಗಿಸುವದೆಂತು? ಇನ್ನು ಈ ಹಣವನ್ನು ತಿರುಗಿ ಮುಟ್ಟಿಸುವ ಬಗೆಗಳಾದರೂ ಅನೇಕ ಇರುವವು. ಯುದ್ಧಾನಂತರ ಹಿಂದುಸ್ಥಾನದಲ್ಲಿಯ ಯುದ್ಧೋಪಕರಣಗಳೂ ಸೈನಿಕ ಕಟ್ಟಡಗಳೂ ಹಿಂದುಸ್ಥಾನ ಸರಕಾರದ ಕೈಗೆ ಬಂದಿವೆ. ಅವುಗಳ ಬೆಲೆಯನ್ನು ನಿರ್ಧರಿಸಿ ಅಷ್ಟು ಹಣವನ್ನು ಸ್ಟರ್ಲಿಂಗ ಸಾಲದಲ್ಲಿ ಕಡಿಮೆಮಾಡುವದು ತಜ್ಞಮಂಡಳದ ಕೆಲಸಗಳಲ್ಲೊಂದಾಗಿದೆ. ಅಲ್ಲದೆ ಹಿಂದುಸ್ಥಾನದಲ್ಲಿ ಕೆಲಸ ಮಾಡಿದ ಅಧಿಕಾರಿಗಳ ಪಿಂಚಣಿಯೂ ಸ್ಟರ್ಲಿಂಗ ಸಾಲದಲ್ಲಿ ಹಣವನ್ನು ಮುರಿದುಕೊಳ್ಳಬಹುದು. ಈ ಬಗೆಯ ಸಣ್ಣಪುಟ್ಟ ವಿಷಯಗಳನ್ನು ಬಗೆಹರಿಯಿಸಿ ಉಳಿದ ಸ್ಟರ್ಲಿಂಗ ಸಾಲದ ಬಗ್ಗೆ ಏನು ಮಾಡಬೇಕೆಂಬುದನ್ನು ತಜ್ಞಮಂಡಳವು ಗೊತ್ತುಪಡಿಸಬೇಕಾಗಿದೆ.

ತನಗೆ ನ್ಯಾಯ್ಯವಾಗಿ ಸಲ್ಲಬೇಕಾದ ಈ ಹಣವನ್ನು ಮರಳಿ ಪಡೆಯುವ ಅಧಿಕಾರ ರಿಝರ್ವ ಬ್ಯಾಂಕಿಗಿದ್ದರೂ ಬ್ರಿಟನನ್ನು ಒತ್ತಾಯಪಡಿಸಿ ಹಾಗೆ ಹಣ ಪಡೆಯುವ ಇಚ್ಛೆ ಹಿಂದುಸ್ಥಾನಕ್ಕಾಗಲಿ ರಿಝರ್ವ ಬ್ಯಾಂಕಿಗಾಗಲಿ ಇರುವದಿಲ್ಲ. ಹಿಂದುಸ್ಥಾನಕ್ಕೆ ಎಲ್ಲ ಬಗೆಯ ಯಂತ್ರಸಾಮಗ್ರಿಗಳು ಬೇಕಾಗಿವೆ. ಆ ಯಂತ್ರ ಮತ್ತು ಯಂತ್ರೋಪಕರಣಗಳನ್ನು ಪೂರಯಿಸಿ ಸ್ಟರ್ಲಿಂಗ ನಿಧಿಯಲ್ಲಿ ಆ ಹಣವನ್ನು ಮುಟ್ಟಿಸಿಕೊಳ್ಳಬಹುದೆಂದು ಹಿಂದುಸ್ಥಾನ ಕೇಳುತ್ತಿದೆ. ಎಂದಿನಿಂದಲೂ ಹಿಂದುಸ್ಥಾನ ಮತ್ತು ಇಂಗ್ಲಂಡಗಳಲ್ಲಿ ವ್ಯಾಪಾರ ನಡೆಯುತ್ತಲಿದ್ದು ಸ್ವತಂತ್ರ ಹಿಂದುಸ್ಥಾನದಲ್ಲಿ ಅದು ಮತ್ತಷ್ಟು ಹೆಚ್ಚುವ ಸಂಭವವಿದೆ. ಈ ಪರಿಸ್ಥಿತಿಯಲ್ಲಿ ಬ್ರಿಟಿಶ ವ್ಯಾಪಾರಸ್ಥರು ತಕ್ಕ ಉಪಾಯಗಳನ್ನು ಕೈಕೊಂಡು ಹಿಂದಿನಂತೆ ವ್ಯಾಪಾರವನ್ನು ಸಾಗಿಸಬಹುದು. ಬ್ರಿಟಿಶ ಸರಕಾರವು ಸ್ಟರ್ಲಿಂಗ ನಿಧಿಯ ಸಾಲವನ್ನು ಈ ರೀತಿ ಯಂತ್ರ ಯಂತ್ರೋಪಕರಣಗಳನ್ನು ಮತ್ತು ಇತರ ಅವಶ್ಯಕ ಪದಾರ್ಥಗಳನ್ನು ಪೂರಯಿಸಿ ಕರಗಿಸಿದ್ದಾದರೆ ರಿಝರ್ವ ಬ್ಯಾಂಕು ಇಂಗ್ಲಂಡದಲ್ಲಿ ಇಟ್ಟ ಈ ಇಡುಗಂಟನ್ನು ಮುಟ್ಟಿಸಿದಂತಾಗುವದು, ತನ್ನ ವ್ಯಾಪಾರವನ್ನು ಹೆಚ್ಚಿಸಿಕೊಂಡಂತಾಗುವದು. ಬ್ರಿಟಿಶ ಕಾರಖಾನೆದಾರರು ತುಟ್ಟಿ ದರದಿಂದ ಸರಕುಗಳನ್ನು ಪೂರಯಿಸುವರೆಂಬ ಅಳುಕು ಇದೆ. ಹೇಗಾದರೂ ಮಾಡಿ ಈ ಸ್ಟರ್ಲಿಂಗ ನಿಧಿಯನ್ನು ಕರಗಿಸಿ ಬಿಡುವಾ ಎಂದು ಮನಬಂದಂತೆ ಭಾರತಕ್ಕೆ ಬೇಕಾದವು ನ್ಯಾಯ್ಯವಾಗಲಾರವು. ಅಲ್ಲದೆ ಸರಕುಗಳಿಗೆ ಬೇರೆ ಪೇಟೆಗಳಲ್ಲಿ ಇರುವ ಬೆಲೆಯೆಂಬುದನ್ನು ಲಕ್ಷಿಸಿ ಅದೇ ಬೆಲೆಗೆ ಹಿಂದುಸ್ಥಾನಕ್ಕೆ ಅವಶ್ಯವಾಗಿರುವ ಸರಕುಗಳನ್ನು ಪೂರಯಿಸುವ ಕ್ರಮವು ನ್ಯಾಯ್ಯವು. ಹಿಂದುಸ್ಥಾನ ಸ್ವಾತಂತ್ರ್ಯಪ್ರಾಪ್ತಿಯ ತರುವಾಯ ಭಯಂಕರ ಆರ್ಥಿಕ ವಿಪತ್ತಿಗೆ ಗುರಿಯಾಗಿದೆ. ಸುಳಿ ಹೋಗಿ ಬರುವ ಜನರ ಪುನರ್ನಿವೇಶನ, ಕಾಶ್ಮೀರ ಮೋರ್ಚಾಗಳಲ್ಲಿ ಬಹಳಷ್ಟು ಹಣವನ್ನು ಹಿಂದುಸ್ಥಾನ ಸರಕಾರ ವೆಚ್ಚ ಮಾಡಬೇಕಾಗಿದೆ. ಈ ಪರಿಸ್ಥಿತಿಯಲ್ಲಿ ಹಿಂದುಸ್ಥಾನ ತನ್ನ ಬೆವರು ಸುರಿಸಿ ಕಾದಿಟ್ಟ ಈ ಸ್ಟರ್ಲಿಂಗ ಇಡುಗಂಟನ್ನು ಅನ್ಯಾಯವಾಗಿ ಕರಗಿಸಿದ್ದಾದರೆ ಅದು ಬಳಕೆಗೆ ಬಾರದಾಗುವದು. ಇತ್ತ ಗಮನಿಸುವದು ಬ್ರಿಟನಿಗೆ ಅವಶ್ಯವಾಗಿದೆ. ಈ ಸ್ಟರ್ಲಿಂಗ ಸಾಲವನ್ನು ಮರಳಿ ಕೊಡುವ ಬಗೆಗೆ ಬ್ರಿಟಿಶ ಸರಕಾರವೇನೋ ಸಿದ್ಧವಿದೆ. ಆದರೆ ಅಮೇರಿಕ ಸರಕಾರವು ಮಾತ್ರ ತನ್ನ ವ್ಯಾಪಾರಕ್ಕೆ ಇದರಿಂದ ಹಾನಿಯುಂಟಾಗುತ್ತದೆಯೆಂಬ ಭ್ರಾಮಕ ಕಲ್ಪನೆಯಿಂದ ವಿರೋಧ ಮಾಡುತ್ತಲಿದೆ. ಅದೂ ಬ್ರಿಟನದಂತೆಯೇ ಉದಾರ ಧೋರಣ ವಹಿಸಿ ಹಿಂದುಸ್ಥಾನದ ಈ ಇಡುಗಂಟನ್ನು ಮರಳಿ ಕೊಡುವಲ್ಲಿ ಸಹಾಯ ಮಾಡುವದವಶ್ಯವಾಗಿದೆ.

ಭಾರತದ ಅರ್ಥಮಂತ್ರಿ ಷಣ್ಮುಖಂ ಚೆಟ್ಟಿ



ಭಾರತ ಸರಕಾರದ ಅರ್ಥಮಂತ್ರಿ ಸರ್ ಆರ್. ಕೆ. ಷಣ್ಮುಖಂ ಚೆಟ್ಟಿಯವರು ಬ್ರಿಟನದಿಂದ ಭಾರತಕ್ಕೆ ಬರಬೇಕಾದ ಸ್ಟರ್ಲಿಂಗ ಹಣದ ಬಗ್ಗೆ ವಿಚಾರ ವಿನಿಮಯ ಮಾಡಲು ಕಳೆದ ವಾರ ಇಂಗ್ಲಂಡಿಗೆ ಹೋದರು. ಮುಂಬೈಯಲ್ಲಿ ಇಳಿದಾಗ ತೆಗೆದ ಚಿತ್ರವಿದು.

ವಾರದ ಸಿಂಹಾವಲೋಕನ

ಆರ್ಥಿಕ ಪ್ರಭುತ್ವ ಬೇಡ

ಉದಕ ಮಂಡಲದಲ್ಲಿ ಕೂಡಿದ ಯುಕ್ತ ರಾಷ್ಟ್ರ ಸಂಘದ ಸಭೆಯ ಬಗ್ಗೆ ಕಳೆದ ವಾರ ಬರೆದದ್ದಾಗಿದೆ. ಆ ಪರಿಷತ್ತನ್ನು ಉದ್ಘಾಟಿಸುತ್ತ ಪಂಡಿತ ಜವಾಹರಲಾಲರು ನೂರು ಕೋಟಿ ಮಾನವರು ಸುಖ ಶಾಂತಿಯಲ್ಲಿ ಬಾಳುವಂತೆ ಯೋಜನೆ ಮಾಡಬೇಕೆಂದು ಸೂಚಿಸಿದ್ದು ಅತ್ಯಂತ ಮಹತ್ವದ್ದಾಗಿದೆ. ಏಶಿಯದ ಆರ್ಥಿಕ ಸಮಸ್ಯೆ ಜಾಗತಿಕ ಆರ್ಥಿಕ ಸಮಸ್ಯೆಯ ಒಂದಂಗವಾಗಿರುವದೆಂದು ತಿಳಿದು ಜಾಗತಿಕ ರಾಷ್ಟ್ರಗಳು ಅದನ್ನು ಬಿಡಿಸಲಣಿಯಾಗಬೇಕೆಂದೂ ಜವಾಹರಲಾಲರು ಹೇಳಿದ್ದಾರೆ. ಯುಕ್ತ ರಾಷ್ಟ್ರಸಂಘವಾಗಲಿ ಯುರೋಪಿನ ಇತರ ಪ್ರಬಲ ರಾಷ್ಟ್ರಗಳಾಗಲಿ ಏಶಿಯ ರಾಷ್ಟ್ರಗಳ ಮೇಲೆ ಆರ್ಥಿಕ ಇಲ್ಲವೆ ರಾಜಕೀಯ ಪ್ರಭುತ್ವ ಹೇರ ಬಯಸದೆ ಅವುಗಳಿಗೆ ಸಹಾಯ ಮಾಡಿ ಅವುಗಳನ್ನು ಅಭಿವೃದ್ಧಿಪಡಿಸುವ ಧೋರಣವನ್ನಿಟ್ಟುಕೊಳ್ಳುವದು ಕ್ರಮಪ್ರಾಪ್ತವಾಗಿದೆ. ಬಾಯಿಂದ ಗುಡ್ಡದಂಥ ಮಾತಾಡುವದು ಆದರೆ ಪ್ರಸಂಗ ಬಂದಾಗ ಅದರಂತೆ ನಡೆಯದಿರುವದು ಎಂದಿಗೂ ಶೋಭಿಸಲಾರದು. ಯುರೋಪ ರಾಷ್ಟ್ರಗಳು ತಮ್ಮ ಈ ಮಹತ್ವದ ಹೊಣೆಯನ್ನು ಅರಿತುಕೊಳ್ಳದೆ ದುರ್ಬಲ ರಾಷ್ಟ್ರಗಳ ಆರ್ಥಿಕ ಮತ್ತು ರಾಜಕೀಯ ಸುಲಿಗೆಗೆ ಎಳಸಿದ್ದರಿಂದಲೆ ಇಂದು ಜಗತ್ತಿನಲ್ಲಿ ಇಷ್ಟೊಂದು ಅನರ್ಥಗಳು ನಡೆದಿವೆ. ಈ ಅನರ್ಥ ಪರಂಪರೆ ಇಲ್ಲದಂತಾಗಿ ಏಶಿಯಾ ರಾಷ್ಟ್ರಗಳು ಸುಖ ಸಮೃದ್ಧಿಗಳಲ್ಲಿ ಓಲಾಡಬೇಕಾದರೆ ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯ ಅವುಗಳಿಗಿರುವದು ಅವಶ್ಯವಾಗಿದೆ. ಕೆಲ ಸಂದರ್ಭಗಳಲ್ಲಿ ಒಂದೊಂದೇ ರಾಷ್ಟ್ರ ಆರ್ಥಿಕ ಪ್ರಗತಿಯನ್ನು ಪಡೆಯುವದು ಸಾಧ್ಯವಾಗದಿದ್ದರೆ ಹಲವು ರಾಷ್ಟ್ರಗಳು ಕೂಡಿ ಗುಂಪು ಕಟ್ಟಿಕೊಂಡು ಸಾಮೂಹಿಕ ರೀತಿಯಿಂದ ತಮ್ಮ ಆರ್ಥಿಕ ಅಭಿವೃದ್ಧಿಗೆ ಪ್ರಯತ್ನಿಸಬೇಕು. ಪ್ರಬಲ ರಾಷ್ಟ್ರಗಳು ಎಲ್ಲ ಬಗೆಯ ಸಹಾಯ ಸಹಕಾರವನ್ನು ಸಲ್ಲಿಸಬೇಕು.

ಕೊಯನಾ ಯೋಜನೆ

ಕೊಯನಾ ನದಿಗೆ ೩೫ ಕೋಟಿ ರೂಪಾಯಿ ವೆಚ್ಚ ಮಾಡಿ ಅಣೆಕಟ್ಟು ಕಟ್ಟಿ ವಿದ್ಯುತ್ ಶಕ್ತಿ ಉತ್ಪಾದನೆ ಹಾಗು ನೀರಾವರಿಯನ್ನು ಸಾಧಿಸುವ ಬೃಹತ್ ಯೋಜನೆಯೊಂದು ಮುಂಬೈ ಸರಕಾರದ ಮುಂದಿದೆ. ಈ ಯೋಜನೆಯಿಂದ ೨೫೦ ಸಾವಿರ ಕಿಲೋವ್ಯಾಟ ವಿದ್ಯುತ್ ಶಕ್ತಿ ನಿರ್ಮಾಣವಾಗುವದು. ಕರಾಡ ಸ್ಟೇಶನದಿಂದ ೩೫ ಮೈಲುಗಳ ಮೇಲೆ ಈ ಅಣೆಕಟ್ಟು ಕಟ್ಟುವ ಸ್ಥಳವಿದೆಯೆಂದು ತಿಳಿಯುತ್ತದೆ. ಹಿಂದುಸ್ಥಾನದಲ್ಲಿ ಬೇರೆ ಎಲ್ಲಿಯೂ ಇಷ್ಟು ಹೆಚ್ಚು ವಿದ್ಯುತ್ ಶಕ್ತಿ ಹೊರಡದಿದ್ದೀತು. ಈ ಯೋಜನೆಯನ್ನು ಕೊಯನಾ ನದಿಗೆ ೩೨೦೦ ಫೂಟ ಉದ್ದ ಮತ್ತು ೩೦೦ ಫೂಟ ಎತ್ತರ ಅಣೆಕಟ್ಟು ಕಟ್ಟಿ ಕಾರ್ಯರೂಪದಲ್ಲಿ ತರಲಾಗುವದು. ಇದರಿಂದ ೩೨೦ ಚದರು ಮೈಲು ವಿಸ್ತಾರವಾದ ಸರೋವರವೇ ನಿರ್ಮಾಣವಾಗುವದು. ಇದರಲ್ಲಿ ೧೫೦ ಸಾವಿರ ದಶಲಕ್ಷ ಘನಫೂಟು ನೀರು ನಿಲ್ಲುವದು. ಈ ನೀರು ೩೫ ಫೂಟು ಅಗಲಳತೆಯ ಕೊಳವೆಯ ಮೂಲಕ ಘಟ್ಟದ ಕೆಳಗೆ ೧೫೦೦ ಫೂಟು ಎತ್ತರದಿಂದ ಪೋಫಲಿ ಎಂಬ ಕೊಂಕಣ ಪ್ರದೇಶದಲ್ಲಿ ಬೀಳುವದು. ಈ ಬೀಳುವ ನೀರಿನಿಂದ ವಿದ್ಯುತ್ತನ್ನು ಹೊರಡಿಸುವ ಯೋಜನೆ ಮಾಡಲಾಗಿದೆ. ಅಲ್ಲಿಂದ ಕೊಲ್ಹಾಪುರದ ವರೆಗೆ ವಿದ್ಯುತ್ ಶಕ್ತಿಯನ್ನು ಒಯ್ಯುವ ವ್ಯವಸ್ಥೆ ಮಾಡಲಾಗಿದೆ. ಸೊಲ್ಲಾಪುರದ ಗಿರಣಿಗಳೆಲ್ಲ ಈ ವಿದ್ಯುತ್ ಶಕ್ತಿಯಿಂದಲೆ ನಡೆಯುವವು. ವಿಜಾಪುರ ಜಿಲ್ಹೆಗೂ ಈ ವಿದ್ಯುತ್ ಶಕ್ತಿ ಪೂರೈಸುವದು. ಕೃಷ್ಣಾ ಕೊಯನಾ ನದಿಗಳ ನೀರನ್ನು ಎತ್ತರ ಸ್ಥಳಕ್ಕೆ ಈ ವಿದ್ಯುತ್ ಶಕ್ತಿಯಿಂದ ಏರಿಸಿ ಬರಗಾಲ ಪ್ರದೇಶವೆಂದು ಹೆಸರಾದ ವಿಜಾಪುರ ಜಿಲ್ಹೆ ಮತ್ತು ಇತರ ಪ್ರದೇಶಗಳಲ್ಲಿ ನೀರಾವರಿ ಮಾಡಲಾಗುವದು. ಈಗಾಗಲೆ ಈ ಯೋಜನೆಯ ಪೂರ್ವ ಪರಿಶೀಲನೆ ಮುಗಿದಿದ್ದು ಮುಂದಿನ ಕೆಲಸ ಪ್ರಾರಂಭವಾಗಲಿದೆ.

ಅಂತಃಶತ್ರುಗಳು

ಹಿಂದುಸ್ಥಾನಕ್ಕಿಂದು ಬಾಹ್ಯ ಶತ್ರುಗಳಿಗಿಂತ ಅಂತಃಶತ್ರುಗಳ ಭೀತಿ ಹೆಚ್ಚಿದೆ. ಈ ಅಂತಃಶತ್ರುಗಳ ಬಾಧೆಯಿಂದ ಜನವಿಂದು ಬಗೆಬಗೆಯ ಕಷ್ಟನಷ್ಟಗಳನ್ನು ಅನುಭವಿಸುತ್ತದೆ. ಸರಕಾರಕ್ಕಾದರೂ ಈ ಅಂತಃಶತ್ರುಗಳ ಅರಿವು ಇಲ್ಲದಿಲ್ಲ. ಹಿಂದುಸ್ಥಾನ ಸರಕಾರದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಮಧ್ಯಭಾರತ ಒಕ್ಕೂಟವನ್ನು ಉದ್ಘಾಟಿಸುವಾಗ ಮಾಡಿದ ಭಾಷಣದಲ್ಲಿ ಈ ಅಂತಃಶತ್ರುಗಳ ಮಾತೆತ್ತಿರುವರು. ಈ ಅಂತಃಶತ್ರುಗಳ ಪರಿಣಾಮವಾಗಿ ಹಿಂದುಸ್ಥಾನದಲ್ಲಿಂದು ಪ್ರಜಾಪ್ರಭುತ್ವವು ಅಷ್ಟೊಂದು ಯಶಸ್ವಿಯಾಗಲೊಲ್ಲದು. ಈ ಅಂತಃಶತ್ರುಗಳಲ್ಲಿ ಒಂದೆಡೆ ಕಮ್ಯುನಿಸ್ಟರು, ಲಾಭಬಡಕರು ಇದ್ದರೆ ಮತ್ತೊಂದೆಡೆ ಜಾತ್ಯಂಧರಿರುವರು. ಕಮ್ಯುನಿಸ್ಟರು ಸದ್ಯದ ಕಾಂಗ್ರೆಸ ಸರಕಾರವನ್ನು ಉರುಳಿಸಲು ಹವಣಿಸುತಿದ್ದಾರೆ ಎಂಬ ಬಗ್ಗೆ ಬೇಕಾದಷ್ಟು ಪುರಾವೆಗಳು ಸಿಕ್ಕಿವೆಯೆಂದು ಬಂಗಾಲದ ಗೃಹಮಂತ್ರಿ ಶ್ರೀ. ಕಿರಣ ಶಂಕರರಾಯರು ಹೇಳಿದ್ದಾರೆ. ಇಲ್ಲಿನ ಕಮ್ಯುನಿಸ್ಟರು ಹಿಂಸಾತ್ಮಕ ರೀತಿಯಿಂದ ಸರಕಾರವನ್ನುರುಳಿಸುವ ಪ್ರಯತ್ನ ಮಾಡುತ್ತಿದ್ದರೆ ಲಾಭಬಡಕರು ಹಿಂದುಸ್ಥಾನದ ಪ್ರಜಾಪ್ರಭುತ್ವದ ಅಡಿಗಲ್ಲನ್ನೇ ಸಡಿಲು ಮಾಡುತಿರುವರು. ಬಟ್ಟೆ ನಿಯಂತ್ರಣವನ್ನು ತೆಗೆದುಹಾಕಿದ್ದು ಗಿರಣಿಗಾರರ ಕೈಯಲ್ಲಿ ಅನಿಯಂತ್ರಿತ ಅಧಿಕಾರ ಕೊಡುವದಕ್ಕಾಗಿಯೆಂಬ ಭಾವನ ಜನತೆಯಲ್ಲಿ ಬೇರೂರಿ ಹೋಗಿದೆ. ಗಿರಣಿಗಾರರು ಮೂರು ತಿಂಗಳಲ್ಲಿಯೆ ಮೂವತ್ತು ಕೋಟಿ ರೂಪಾಯಿ ಲಾಭ ಮಾಡಿಕೊಂಡರೆಂಬುದು ನಿಜವಾಗಿದ್ದರೆ ಜನಸಾಮಾನ್ಯರ ಶೋಷಣೆ ಎಷ್ಟರಮಟ್ಟಿಗೆ ನಡೆಯುತೆಂಬುದು ಗೊತ್ತಾಗದಿರದು!! ಲಾಭಬಡಕರನ್ನು ನಡುಬೀದಿಯಲ್ಲಿ ಗಲ್ಲಿಗೇರಿಸುವ ಕಾಲವೂ ಬರಬಹುದೆಂದು ಹಿಂದೊಮ್ಮೆ ಪಂಡಿತ ಜವಾಹರಲಾಲರು ಹೇಳಿದ್ದರು. ಆ ಕಾಲ ಬರುವ ಮೊದಲೇ ಗಿರಣಿಗಾರರು ಬುದ್ಧಿಗಲಿತರೆ ಒಳಿತು. ಕಮ್ಯುನಿಸ್ಟರು ಲಾಭಬಡಕರಲ್ಲದೆ ಜಾತ್ಯಂಧರೂ ಸರಕಾರದ ಮತ್ತು ದೇಶದ ಅಂತಃಶತ್ರುಗಳು. ಅವರ ಚಟುವಟಿಕೆಗಳ ಪರಿಣಾಮವಾಗಿಯೇ ದೇಶದಲ್ಲಿ ಇನ್ನೂ ಶಾಂತಿ ಪ್ರಸ್ಥಾಪಿತವಾಗಿಲ್ಲ. ಶಾಂತಿಗಾಗಿಯೆ ಸರಕಾರದ ಶಕ್ತಿಯೆಲ್ಲ ವ್ಯಯವಾಗಹತ್ತಿದ್ದರಿಂದ ಉಳಿದ ಆವಶ್ಯಕ ವಿಷಯದತ್ತ ಸರಕಾರ ಗಮನಿಸಲಾರದ ಪರಿಸ್ಥಿತಿ ಪ್ರಾಪ್ತವಾಗಿದೆ.

ರಾಯಭಾರಿಯೊಬ್ಬನ ಅಧಿಕ ಪ್ರಸಂಗ

ನಮ್ಮ ಇಜಿಪ್ತದ ರಾಯಭಾರಿ ಡಾ. ಸಯ್ಯದ ಹುಸೇನರ ಗುಣ ವಿಶೇಷಗಳು ಬೇರೆ ಯಾವುವೇ ಇರಲಿ ಮಿತಭಾಷಣಗುಣ ಅವುಗಳಲ್ಲೊಂದಲ್ಲ. ಆದರೆ ಬೇರಾವ ಅವಗುಣಗಳಿದ್ದರೂ ಮಾತಿನಲ್ಲಿ ಜಾರಿಬೀಳದಿರುವ ಗುಣ ರಾಯಭಾರಿಯಲ್ಲಿಲ್ಲದಿದ್ದರೆ ಅವನು ತನ್ನ ದೇಶವನ್ನು ಅನವಶ್ಯಕ ಉಪದ್ರವಗಳಿಗೀಡು ಮಾಡುವಲ್ಲಿ ಸಂದೇಹವೇ ಇಲ್ಲ. ಡಾ. ಹುಸೇನರು ರಾಯಭಾರಿಗಳಾಗಿ ನೇಮಕ ಹೊಂದಿದೊಡನೆಯೆ ಹಿಂದೀ ಪತ್ರಿಕೋದ್ಯೋಗಿಗಳನ್ನು ಅನವಶ್ಯಕವಾಗಿ ನಿಂದಿಸಿ ಅಪ್ರಿಯತೆಯನ್ನು ಸಂಪಾದಿಸಿಕೊಂಡಿದ್ದರು. ಹೈದರಾಬಾದ ನಿಜಾಮರ ರಾಜಕೀಯ ಭವಿತವ್ಯದ ಮೇಲೆ ಅವರಾಡಿದ ಮಾತುಗಳು ಯಾರನ್ನೂ ಸಂತೋಷಗೊಳಿಸಲಿಲ್ಲ. ಈಗ ಪಾಲಿಸ್ತಾನದ ವಿಷಯದಲ್ಲಿ ಹಿಂದೀ ಸರಕಾರ ಮತ್ತು ಜನತೆಯ ಬೆಂಬಲವೆಲ್ಲ ಅರಬರ ಪಕ್ಷದಲ್ಲಿದೆಯೆಂದು ಕೈರೋದಲ್ಲಿ ಅವರು ಸಾರಿದರೆಂದು ಸುದ್ದಿ ಬಂದಿದೆ. ಇದು ನಿಜವಾಗಿದ್ದರೆ ಅವರನ್ನು ಹಿಂದೆ ಕರೆಸಿಕೊಂಡು ಅವರಷ್ಟು ಬಾಯಿಬಡುಕರಲ್ಲದ ಇನ್ನಾರನ್ನಾದರೂ ಕೈರೋಕ್ಕೆ ಕಳಿಸುವದು ಲೇಸು. ಪಾಲಿಸ್ತಾನದ ಇಂದಿನ ಹೋರಾಟದಲ್ಲಿ ಹಿಂದೀ ಸರಕಾರ ಸಂಪೂರ್ಣ ತಟಸ್ಥವಾಗಿದೆಯೆಂದು ಅಧಿಕೃತವಾಗಿ ಸಾರಿರುವಾಗ ಹುಸೇನ ಸಾಹೇಬರಿಗೆ ತಮ್ಮ ಸರಕಾರದ ಪರವಾಗಿ ಹೀಗೆ ಮಾತಾಡುವ ಅವಶ್ಯಕತೆಯೇನಿತ್ತು? ಪಂ. ನೆಹರೂ ಅವರು ರಾಯಭಾರಿಗಳನ್ನು ನೇಮಿಸುವಾಗ ಹಿಂದಿನ ಅವರ ದೇಶಸೇವೆಯನ್ನೊಂದೇ ಬಗೆಯದೆ ಅವರ ಸ್ವಭಾವವನ್ನೂ ವಿಚಾರಿಸಿಕೊಳ್ಳಬೇಕೆಂದು ಸೂಚಿಸಬೇಕಾಗಿದೆ. ಮುಸ್ಲಿಮರಾದ ಹುಸೇನ ಸಾಹೇಬರಿಗೆ ತಮ್ಮ ಅರಬ ಧರ್ಮಬಂಧುಗಳ ಪಕ್ಷವೇ ನ್ಯಾಯ್ಯವೆಂದು ತೋರುವದು ಸಹಜ. ಅವರು ಇಂಥ ಪ್ರಸಂಗದಲ್ಲಿ ತಮ್ಮ ರಾಗದ್ವೇಷಗಳನ್ನು ಬಚ್ಚಿಡಲು ಅಸಮರ್ಥರಾಗಿರಬಹುದು. ಆದರೆ ರಾಯಭಾರವೆಂಬುದು ಬೇರೆಯೆ ತರದ ಕಲೆ. ಮುಸ್ಲಿಮರನ್ನು ಮುಸ್ಲಿಮ ರಾಷ್ಟ್ರಗಳಿಗೆ ರಾಯಭಾರಿಗಳಾಗಿ ಕಳಿಸುವದರಿಂದ ಲಾಭವೆಷ್ಟೋ ಅಷ್ಟೇ ಹಾನಿಯೂ ಆಗುವದೆಂದು ಕಾಣುತ್ತದೆ. ಆದ್ದರಿಂದ ಸಾಮಾನ್ಯವಾಗಿ ಮುಸಲ್ಮಾನ ರಾಷ್ಟ್ರಗಳಿಗೆ ಮುಸಲ್ಮಾನೇತರ ರಾಯಭಾರಿಗಳನ್ನು ನೇಮಿಸತಕ್ಕದ್ದು ಸೂಕ್ತವಾಗಿದೆ.

ಜಾತೀಯತೆಯ ವಿಷ

ಒಬ್ಬ ಶಿಕ್ಷಕರ ಕಾಗದದಿಂದ ಈ ಕೆಳಗಿನದನ್ನು ಸಂಕ್ಷೇಪಿಸಿ ಕೊಡಲಾಗಿದೆ:

“ ನಮ್ಮ ಸರಕಾರಗಳು ಜಾತೀಯ ಸಂಘಟನೆಗಳನ್ನು ವಿಧಿಬಾಹಿರವೆಂದು ಬಹಿಷ್ಕರಿಸಿವೆ. ಆದರೆ ನನ್ನ ಅನುಭವದ ಪ್ರಕಾರ, ಈ ಸಂಘಟನೆಗಳ ಸದಸ್ಯರು ಆ ಬಗ್ಗೆ ಕವಾಯಿತು ಪ್ರದರ್ಶನಗಳನ್ನು ಮಾಡುತ್ತಿಲ್ಲವಾದರೂ ಅವರ ಚಾತುರ್ಯವೇನೂ ಕಡಿಮೆಯಾಗಿಲ್ಲ. ಪ್ರಾರ್ಥನೆ, ವರ್ಗಗಳು, ಆಟ ಇತ್ಯಾದಿ ನೆವಗಳಿಂದ ಅವರು ಈಗಲೂ ಒಟ್ಟು ಸೇರುತ್ತಾರೆ ಮತ್ತು ಮೊದಲಿನಂತೆಯೇ ಜಾತೀಯತೆಯ ವಿಷವನ್ನು ಹರಡುತ್ತಿದ್ದಾರೆ. ಅವರು ಬಾಪುವನ್ನು ಕೊಂದದ್ದು ಯೋಗ್ಯವೆಂದು ಹೇಳುತ್ತಾರೆ ಮತ್ತು ಉಳಿದ ಕಾಂಗ್ರೆಸ್ ಮುಖಂಡರೂ ಮಂತ್ರಿಗಳೂ ಅದೇ ಗತಿ ಕಾಣಬೇಕು. ಎಂದು ಅನ್ನುತ್ತಿದ್ದಾರೆ.

“ ನಾನು ಮತ್ತು ಎರಡು ಮೂರು ಸಂಗಡಿಗರು ಕೂಡಿ ಈ ೩-೪ ವರ್ಷಗಳಿಂದ ಆರ್. ಎಸ್. ಎಸ್. ಸಂಘದಲ್ಲಿ ನೂರರೊಳಗೇ ಸದಸ್ಯರು ಉಳಿವಂತೆ ಮಾಡಿದೆವು. ಆ ಸಂಘಕ್ಕೆ ಆಗಲೆ ಸೇರಿದ್ದ ವಿದ್ಯಾರ್ಥಿಗಳ ಮೇಲೆ ನಾವು ಯಾವ ಪರಿಣಾಮವನ್ನೂ ಉಂಟುಮಾಡಲಾರದಾದೆವು. ಕಾಲಕ್ರಮೇಣ ಅವರ ಪ್ರಚಾರದ ದುಷ್ಪರಿಣಾಮವು ಬಹಳ ಹೆಚ್ಚಾಗಿ ಹೋದೀತು.

“ ಆರ್. ಎಸ್. ಎಸ್ಸಿನ ಬಹುಮಂದಿ ಸದಸ್ಯರು ವಿದ್ಯಾರ್ಥಿಗಳು. ನನ್ನನ್ನು ಕೇಳಿದರೆ, ಈ ಕಾರಣದಿಂದ ಜಾತೀಯತೆಯ ವಿಷಮಯ ಪ್ರಚಾರವನ್ನು ನಿಲ್ಲಿಸಲು ಕೇಂದ್ರ ಸರಕಾರವು ನಾಡಿನ ಎಲ್ಲ ಶಾಲೆ ಕಾಲೇಜುಗಳ ಶಿಕ್ಷಕ ಪ್ರಾಧ್ಯಾಪಕರಿಗೆ ತಮ್ಮ ಭಾಷಣ, ಲೇಖನ, ಆಟ ಮತ್ತು ಸಾಮಾಜಿಕ ಸಮಾರಂಭಗಳು ಮುಂತಾದವುಗಳ ಮೂಲಕ ಜಾತೀಯತೆಯ ವಿರುದ್ಧ ಪ್ರತ್ಯಕ್ಷ ರೀತಿಯಿಂದ ಪ್ರಚಾರ ಮಾಡಲು ಅನುಜ್ಞೆ ಕೊಡಬೇಕೆಂದು ನನ್ನ ಮತ. ”

ಕಳೆದ ಕೆಲವು ವರ್ಷಗಳಿಂದ ಅತ್ಯಂತ ಅಪಾಯಕರವಾದ ಮತ್ತು ದುರದೃಷ್ಟಕರವಾದ ಭಾವನೆಗಳನ್ನು ನಮ್ಮ ನಮ್ಮ ನಾಡಿನಲ್ಲಿ ಬೆಳೆಸಿಕೊಳ್ಳುತ್ತ ಬಂದುದರಲ್ಲಿ ಸಂಶಯವಿಲ್ಲ. ಪರಸ್ಪರ ದ್ವೇಷಪ್ರಸಾರದಿಂದ ಹಿಂದು ಮತ್ತು ಮುಸ್ಲಿಂ ಜಾತೀಯವಾದಿಗಳು ನಾಡಿಗೆ ಮಾಡಿದ ಕೇಡನ್ನು ಅಳೆಯಲಸದಳ. ಅವರು ಕೋಮಲವೂ ಕಂಡದ್ದನ್ನೆಲ್ಲ ಕಲಿವ ಪ್ರವೃತ್ತಿಯುಳ್ಳದ್ದೂ ಆದ ಮಕ್ಕಳ ಮನಸ್ಸಿನಲ್ಲಿ ದುರ್ಭಾವನೆಗಳನ್ನು ತುಂಬಿದ್ದು ನಿಜ. ಇನ್ನೂ ಅನೇಕ ಕಾಲ ಈ ವಿಷವು ಜನರ ಮಾನಸಿಕ ಆರೋಗ್ಯಕ್ಕೆ ಅಪಾಯವುಂಟುಮಾಡುತ್ತ ಹೋಗುತ್ತದೆ. ಆಧ್ಯಾತ್ಮಿಕ ವಿಕಾಸವನ್ನು ಸಾಧಿಸಲು ಹೃದಯವೈಶಾಲ್ಯ, ವಿಶ್ವವ್ಯಾಪಿ ಪ್ರೇಮ, ವಿಸ್ತಾರವಾದ ದೃಷ್ಟಿಕೋನ ಇವು ಇರಬೇಕು. ಮನುಷ್ಯನು ಇವನ್ನು ತನ್ನಲ್ಲಿ ಬೆಳೆಸಿಕೊಳ್ಳಬೇಕಾದರೆ ಆಧ್ಯಾತ್ಮಿಕ ಭಾವನೆಗಳ ಸರಿಯಾದ ಬೆಳವಣಿಗೆ ಅಗತ್ಯ. ಅತ್ಯುಚ್ಚ ವಿಶ್ವವಿದ್ಯಾಲಯ ಶಿಕ್ಷಣ, ಧರ್ಮಗ್ರಂಥಗಳ ಆಳವಾದ ಅಭ್ಯಾಸ, ಧಾರ್ಮಿಕ ಕಾರ್ಯಗಳಲ್ಲಿ ತಪ್ಪದೆ ಪ್ರವೃತ್ತನಾಗಿರುವುದು, ಪ್ರಾರ್ಥನೆ, ಪೂಜೆ, ನಮಾಜ್ ಇತ್ಯಾದಿ ಯಾವುವಿದ್ದರೂ ಮೇಲೆ ಹೇಳಿದ ಭಾವನೆಗಳ ಸರಿಯಾದ ಬೆಳವಣಿಗೆಯಿಲ್ಲದೆ ಉಕ್ತ ಗುಣಕ್ರಿಯಗಳನ್ನು ಮನುಷ್ಯನಲ್ಲಿ ಬೆಳೆಸಲು ಅವಕಾಶಕೊಡಲಾರವೆಂಬುದನ್ನು ಈ ಜಾತೀಯ ಸಂಘಟನೆಗಳು ಸ್ಪಷ್ಟವಾಗಿ ನಿದರ್ಶಿಸುವುವು. ಕೊಡಹಾಲು ಕೆಡಿಸಲು ಒಂದು ತೊಟ್ಟು ಹುಳಿ ಸಾಕಾಗುವಂತೆ, ಪಂಡಿತ ಮೌಲ್ವಿಗಳ ಧಾರ್ಮಿಕ ಪಾಂಡಿತ್ಯ ಮತ್ತು ಪ್ರಾಧ್ಯಾಪಕರ ಉದಾರವೆಂದು ಕರೆಯಲ್ಪಡುವ ವಿದ್ಯಾಭ್ಯಾಸ ಈ ಯಾವುವೇ ಆಗಲಿ, ಸ್ವಚ್ಛವಾದ ಬೆಳಕು ಮತ್ತು ಉದಾತ್ತ ಭಾವನೆಗಳ ಬೆಳವಣಿಗೆ ಇಲ್ಲದೆ ವಿವಿಧ ಧರ್ಮಗಳು, ಗೀತ, ಕುರಾನ್ ಮೊದಲಾದ ಧರ್ಮಗ್ರಂಥಗಳು, ಧಾರ್ಮಿಕ ವ್ರತನಿಯಮಾದಿ ಕರ್ಮಗಳು ಇವನ್ನು ಪಿಶಾಚದ ಕೈಯಲ್ಲಿಯ ಸಾಧನಗಳನ್ನಾಗಿ ಮಾಡಿವೆ.

ದ್ವೇಷ ಹರಡುವುದು ಇಳಿಜಾರಿನಿಂದ ಕೆಳಗೆ ಇಳಿದಷ್ಟು ಸುಲಭ. ನಮ್ಮ ಎಲ್ಲ ರಾಜಕೀಯ ಸಂಘಟನೆಗಳೂ ಕಳೆದ ಎಷ್ಟೋ ವರ್ಷಗಳಿಂದ ಇದನ್ನು ಮಾಡುತ್ತ ಬಂದಿವೆ. ಹಿಂದು-ಶೀಖ ಮತ್ತು ಮುಸಲ್ಮಾನ ಧರ್ಮಾಂಧರು ಪರಸ್ಪರ ದ್ವೇಷವನ್ನು ಹಬ್ಬಿಸಿದರು ಕೆಲ ಹರಿಜನ ಸಂಘಟನೆಗಳು ಸವರ್ಣ ಹಿಂದುಗಳನ್ನು ದ್ವೇಷಿಸಲು ಹರಿಜನರಿಗೆ ಕಲಿಸಿವೆ. ಕೆಲವು ಜನ ಸನಾತನಿಗಳು ಅದಕ್ಕೆ ಸರಿ ವಿರುದ್ಧ ನಡೆಯು ಕೊಂಡಿದ್ದಾರೆ. ಕಮ್ಯುನಿಸ್ಟ ಮತ್ತು ಸೋಶಲಿಸ್ಟರು ಬಂಡವಾಳದಾರರನ್ನು ಹಗೆಗಳೆಂದು ಬೋಧಿಸಿದ್ದಾರೆ ಗಾಂಧೀಯುವರೊಬ್ಬರನ್ನು ಬಿಟ್ಟರೆ ಪರಸ್ಪರ ಪ್ರೇಮ ಮತ್ತು ಸ್ನೇಹದ ಸಂದೇಶವನ್ನು ಮತ್ತಾರೂ ಕೊಟ್ಟಿಲ್ಲ. (ಎಷ್ಟೋ ಸಲ ಏಕಾಕಿಗಳಾಗಿ) ಗಾಂಧಿಯವರೊಬ್ಬರ ಪಾಲಿಗೇ ಆ ಸಂದೇಶದನ್ನು ಕೊಡುವುದು ಬಿದ್ದಿತು. ಆದರೆ ಅವರು ಸಮರ್ಥರಾಗಿ ಆ ಸಂದೇಶವನ್ನು ಜನರಿಗೆ ಮುಟ್ಟಿಸಿದ್ದು ಸಹ್ಯವಾಗದೆ ದ್ವೇಷಾರಾಧಕರು ಅದಕ್ಕಾಗಿ ಅವರನ್ನು ಕೊಂದುಬಿಟ್ಟರು.

ಈ ದುಷ್ಪ್ರವೃತ್ತಿಯನ್ನು ಚೆನ್ನಾಗಿ ತಿಳಿದುಕೊಂಡವರೂ ಎಲ್ಲ ಜಾತೀಯ ಸಂಘಗಳನ್ನು ತಮ್ಮಿಂದ ಕೊಡಹಿಬಿಟ್ಟವರೂ ಅದನ್ನು ಪ್ರತಿಭಟಿಸಲು ಸರ್ವ ಪ್ರಯತ್ನಮಾಡಿ, ಗಾಂಧಿಯವರು ಎದುರಿಸಿದ ಗಂಡಾಂತರವನ್ನು ಎದುರಿಸಲು ಸಿದ್ಧರಾಗಬೇಕು.

ಈ ಬಗೆಯ ಪ್ರಯತ್ನಗಳಿಗಾಗಿ ಲೇಖಕನಿಗೆ ಧನ್ಯವಾದಗಳು ಸಲ್ಲತಕ್ಕದ್ದು. ಆದರೆ ಅವನು (ಅವನ ಸಂಗಡ ನಾವೆಲ್ಲರು) ತನಗೆ ದೊರೆತ ಅಪೂರ್ಣ ಯಶಸ್ಸಿನ ಕಾರಣದ ಬಗ್ಗೆ ಒಂದೇ ಸವನೆ ವಿಚಾರ ಮಾಡತಕ್ಕದ್ದೆಂದು ನಾನು ಸೂಚಿಸುತ್ತೇನೆ. ಜಾತೀಯತೆಯನ್ನು ನಿರ್ಮೂಲಗೊಳಿಸಿದವರನ್ನೆ ನಸ್ಯವು ಆಶ್ರಯಿಸುವುದಾದ್ದರಿಂದ ಮತ್ತು ಆ ರೀತಿ ಜಾತೀಯತೆಯನ್ನು ಹೊಡೆದುಹಾಕಿರುವೆವೆಂದು ಹೇಳಿಕೊಳ್ಳುವ ನಮಗೆ ಆಯಶಸ್ಸು ಸಿಕ್ಕಬೇಕಾದರೆ ಉಳಿದ ಅಪೂರ್ಣತೆಗಳು ನಮ್ಮಲ್ಲಿ ಇರಬೇಕಾಗುವದು; ನಮ್ಮ ಯಶಸ್ಸಿಗೆ ಅವು ಅಡ್ಡಿಯನ್ನುಂಟು ಮಾಡುತಿರಬಹುದು. ಹೆಚ್ಚು ಆತ್ಮಸಂಯಮ, ಸ್ವಾರ್ಥತ್ಯಾಗ ಮತ್ತು ತಿಳಿವಳಿಕೆಗಳಿಂದ ನಾವೀ ಅಪೂರ್ಣತೆಗಳನ್ನು ಹೋಗಲಾಡಿಸಿಕೊಳ್ಳಬೇಕು ಸಾತ್ವಿಕತೆ ಮತ್ತು ಪ್ರೇಮಗಳಿಂದ ದ್ವೇಷ ಮತ್ತು ಕೆಡಕು ಹೋಗದಿದ್ದರೆ ಆರಾಧಕರಲ್ಲಿಯೇ ಏನಾದರೂ ದೋಷವಿರಲಿಕ್ಕೆಬೇಕಲ್ಲದೆ ಅಹಿಂಸೆಯ ತತ್ವದಲ್ಲಿ ಅಲ್ಲ ಎಂಬ ನಿಯಮವನ್ನೆ ಇದೆಲ್ಲ ಅನುಸರಿಸುವದು. ಸರಕಾರದವರು ಕೆಲ ಹುಕುಮುಗಳನ್ನು ಹೊರಡಿಸಬೇಕೆಂದು ಈ ಲೇಖಕನು ಅಪೇಕ್ಷಿಸುತ್ತಾನೆ. ಆದರೆ ಹೀಗೆ ಮಾಡಿರಿ ಹೀಗೆ ಮಾಡಬೇಡಿರಿ ಎಂದು ವಿಧಿಸುವದರಿಂದ ಅಲ್ಪವೆ ದಬ್ಬಾಳಿಕೆಯ ಕಾಯಿದೆ ಮತ್ತು ಆಡಳಿತದಿಂದ ದುಷ್ಪ್ರವೃತ್ತಿಯು ಮಾಯವಾಗಿ ಸತ್ಪ್ರವೃತ್ತಿಯುಂಟಾಗುವದೆಂಬಲ್ಲಿ ನನ್ನ ವಿಶ್ವಾಸವಿಲ್ಲದ್ದರಿಂದ ಈ ವಿಷಯಗಳನ್ನು ನಾನು ಚರ್ಚಿಸಬಯಸುವದಿಲ್ಲ. ಹೆಚ್ಚೆಂದರೆ ಇಂಥ ಉಪಾಯಗಳಿಂದ ತೋರಿಕೆಯ ಶಾಂತಿ ಪ್ರಸ್ಥಾಪಿತವಾಗಬಲ್ಲುದು. ದುಷ್ಪ್ರವೃತ್ತಿಯು ಅನೇಕ ಸಲ ಬೇರು ಬಿಟ್ಟು ಮೇಲೆ ಮಾಯ್ದಂತೆ ತೋರಿ ಒಳಗೆ ರಬ್ಬುತಿರುವ ಗಾಯದಂತೆ ಒಳಗೊಳಗೇ ಈ ವಿಷವು ಹಬ್ಬುತ್ತಿರುವದು, ಇಂದು ಗಾಂಧೀವಾದಿಗಳೆನ್ನಿಸಿಕೊಳ್ಳುವವರು ಮತ್ತು ಕಾಂಗ್ರೆಸ್ಸಿಗರು ಇಷ್ಟೊಂದು ಶಕ್ತಿಹೀನರಾಗಿರುವದಕ್ಕೆ ತಾವು ಮತ್ತು ಜನತೆ ಮಾಡಬೇಕಾಗಿದ್ದ ಕಾರ್ಯ ಕೆಲಸಗಳನ್ನು ಸರಕಾರವೆ ಮಾಡಲಿ ಎಂಬ ಮನೋವೃತ್ತಿಯನ್ನು ಅವರುತಾಳುತಿರುವದೇ ಕಾರಣವೆಂದು ನನ್ನ ಅಭಿಪ್ರಾಯವಾಗಿದೆ. ಪ್ರತಿಯೊಂದು ವಿಷಯಕ್ಕೂ ಅವರು ಕಾಯಿದೆಯಾಗಬೇಕೆಂದು ಅಪೇಕ್ಷಿಸುತಿರುವರು. ಉದಾಹರಣಾರ್ಥವಾಗಿ, ಮಂದಿರ ಪ್ರವೇಶವನ್ನು ಹರಿಜನರು ಮಾಡಲಾರರು ‘ ಹರಿಜನರಿಗಾಗಿ ಮಂದಿರಪ್ರವೇಶ’ ಮಸೂದೆಯನ್ನು ಮಾಡಿರೆಂದು ಅವರು ಹೇಳುತಿರುವರು; ಜಾತೀಯ ಸಂಸ್ಥೆಗಳಿವೆ, ಧರ್ಮಸಂಸ್ಥೆಗಳಿವೆ, ಧರ್ಮನಿಧಿಗಳಿವೆ ಇವನ್ನೆಲ್ಲ ನಿರ್ಬಂಧಿಸುವ ಮಸೂದೆಗಳನ್ನು ಪಾಸುಮಾಡಿರೆಂದೂ ಅವರು ಹೇಳುತಿರುವರು. ಜಾತೀಯತೆಯ ದ್ವೇಷವನ್ನು ನಿರ್ಮೂಲಗೊಳಿಸಬೇಕಾಗಿದೆ ‘ ಕೆಲವೊಂದು ರೀತಿಯಿಂದ ಪಾಠ ಹೇಳಿ ಕೊಡಲು ಶಿಕ್ಷಕರಿಗೆ ಮತ್ತು ಪ್ರಾಧ್ಯಾಪಕರಿಗೆ ಹೇಳಿಕೊಳ್ಳಿರಿ’; ಕಳ್ಳಪೇಟೆ ಮತ್ತು ಲಾಭಬಡುಕತನ ಜೋರಿನಿಂದ ಸಾಗಿದೆ ‘ ನಿಯಂತ್ರಣಗಳನ್ನು ಹೇರಿರಿ, ಮತ್ತು ಶಿಕ್ಷೆಗಳನ್ನು ಹೆಚ್ಚಿಸಿರಿ; ಪತ್ರಿಕೆಗಳು ಸರಿಯಾಗಿ ನಡೆಯುವದಿಲ್ಲ. ‘ ಅವುಗಳನ್ನು ಹತ್ತಿಕ್ಕಿರಿ ’; ಜನರು ರಾಟಿಯನ್ನು ತಿರುಗಿಸುವದಿಲ್ಲ ರಾಟಿಯು ಪ್ರಚಾರಾರ್ಥವಾಗಿ ಸರಕಾರದ ಯಂತ್ರವು ಕಾರ್ಯೋದ್ಯುಕ್ತವಾಗಲಿ ಎಂದು ಮುಂತಾಗಿಯೂ ಅವರು ಹೇಳುವುದುಂಟು. ಈ ರೀತಿಯಾಗಿ ಜನರು ಕಾಂಗ್ರೆಸ ಸದಸ್ಯರು ಕೂಡ, ಸರಕಾರವುತಮ್ಮ ಸಹಾಯಕ್ಕೆ ಬಂದರೆ ಮಾತ್ರ ತಮ್ಮಲ್ಲಿ ವಿಚಾರಗಳು ಬಂದು ಅವು ಯಶಸ್ವಿಯಾಗುವವೆಂದು ಭಾವಿಸುವಂತೆ ಸರಕಾರವನ್ನೇ ಹೆಚ್ಚುಹೆಚ್ಚು ಅವಲಂಬಿಸಹತ್ತಿದ್ದಾರೆ. ಈ ಬಗೆಯ ಪ್ರವೃತ್ತಿಯಿಂದ ಜನರು ಮತ್ತು ಕಾರ್ಯಕರ್ತರು ಅಶಕ್ತರಾಗುವರಲ್ಲದೆ ಆತ್ಮವಿಶ್ವಾಸವೂ ಅವರಲ್ಲಿ ಇಲ್ಲದಂತಾಗುವದು. ಜಠರಾಗ್ನಿ ಘದ ಯಾವದೇ ಒಂದು ಒಳ್ಳೆ ಯೋಜನೆ ಮಾತ್ರವೇ ನೂಲನ್ನು ಉತ್ಪಾದಿಸಲಾರದು. ರಾಟಿಯನ್ನು ತಿರುಗಿಸುವ ಜನರೇ ನೂಲನ್ನು ಉತ್ಪಾದಿಸಬಲ್ಲರು; ಅದೇ ರೀತಿಯಾಗಿ ಸರಕಾರದವರು ಯಾವದೊಂದು ಸದ್ಧೋರಣೆಯನ್ನು ಸಾರಿದ ಕೂಡಲೆ ಕೆಡಕೆಲ್ಲ ಮಾಯವಾಗಿ ಒಳಿತಾಗಲಾರದು. ಸರಕಾರೀ ಅಧಿಕಾರಿಗಳು ಮತ್ತು ಜನತೆಯು ಆತ್ಮಪರೀಕ್ಷಣ ಮಾಡಿಕೊಂಡು ಆ ಧೋರಣವನ್ನು ಪ್ರತ್ಯಕ್ಷವಾಗಿ ಆಚರಣೆಯಲ್ಲಿ ತರಲು ಹತ್ತಿದಾಗಲೆ ಅದು ಯಶಸ್ವಿಯಾಗುವದು. ಹಿಂದೂ ಇಲ್ಲವೆ ಸೀಖ ಅಧಿಕಾರಿಗಳು ಮತ್ತು ಅವರಲ್ಲಿಯ ಬುದ್ಧಿವಂತ ಜನರು ಹಾಗು ಸಾಮಾನ್ಯ ಜನರು ಅಥವಾ ಮುಸಲ್ಮಾನ ಅಧಿಕಾರಿಗಳು ಮತ್ತು ಅವರಲ್ಲಿಯ ಬುದ್ಧಿವಂತರು ಹಾಗು ಸಾಮಾನ್ಯ ಜನರು ಬೇರೆ ಜಾತಿಯ ವಿರುದ್ಧ ಆಳವಾದ ದ್ವೇಷಭಾವವನ್ನು ತಾಳಿದ್ದಾದರೆ ಯಾವದೇ ಬಗೆಯ ಹುಕುಮಾಗಲಿ ಕಾಯದೆಯಾಗಲಿ ಮತ್ತು ಉದಾರ ಮತ್ತು ಸದ್ಧೋರಣೆಯ ಸಾರಿಕೆಯಾಗಲಿ ಅಥವಾ ಅಂತರ್ರಾಷ್ಟ್ರೀಯ ಒಡಂಬಡಿಕೆಗಳಾಗಲಿ ಯಶಸ್ವಿಯಾಗಲಾರವು. ಸಂಗತಿಗಳನ್ನು ನಾವು ಆಳವಾಗಿ ವಿಚಾರಿಸಿದ್ದಾದರೆ ಎರಡೂ ವಸಾಹತುಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಇದೆಲ್ಲ ಪ್ರತ್ಯಕ್ಷವಾಗಿ ನಡೆಯುತಿದೆ ಎಂಬುದು ಗೊತ್ತಾಗದಿರದು.

ಕಾಂಗ್ರೆಸ್ಸಿಗರ ಮತ್ತು ಗಾಂಧೀಜಿಯನ್ನು ಸ್ಮರಿಸಿ ಪ್ರತಿಜ್ಞೆ ಮಾಡುವವರ ಮನಸ್ಸು ಕೂಡ ಈ ವಿಷಯದಲ್ಲಿ ಪೂರ್ಣವಾಗಿ ಸ್ವಚ್ಛವಾಗಿರುವದಿಲ್ಲ. ಕಾಂಗ್ರೆಸ್ಸಿನ ಪ್ರಮುಖ ಅಧಿಕಾರಿವರ್ಗದವರು ಕೂಡ ಯುದ್ಧಮನೋವೃತ್ತಿಯವರಾಗಿರೆಂದೂ ಯುದ್ಧ ಸಮೀಪಿಸಿದೆಯೆಂದು ಭಾವಿಸಿಯೇ ನೂರುಗಟ್ಲೆ ಜನ ಸೈನಿಕ ಶಿಕ್ಷಣ ಪಡೆಯಿರೆಂದೂ ಜನತೆಗೆ ಉಪದೇಶಿಸುತಿರುವರೆಂಬುದನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಮೂರನೇ ಮಹಾಯುದ್ಧಕ್ಕಾಗಿ ಈ ಬಿನ್ನಹ ಮಾಡಲಾಗುತಿದೆಯೆಂದು ನನಗೆ ಎನಿಸುವದಿಲ್ಲ. ಜಾತೀಯ ಯುದ್ಧದ ಸೂಚನೆಯೇ ಇದಾಗಿದೆಯೆಂದು ನನಗೆ ಅಂಜಿಕೆಯುಂಟಾಗಿದೆ. ಹಿಂದು ಮತ್ತು ಶೀಖರು ಮುಸಲ್ಮಾನರ ವಿರುದ್ಧ ಹೂಡುವ ಹೋರಾಟದ ಸಿದ್ಧತೆಯಿದು. ಈ ಯುದ್ಧರಂಗವು ಹಿಂದೀ ಒಕ್ಕೂಟದಲ್ಲಿಯಾಗಲಿ ಇಲ್ಲವೆ ಹಿಂದೀ ಒಕ್ಕೂಟ ಮತ್ತು ಪಾಕಿಸ್ತಾನಗಳ ಗಡಿಗಳಲ್ಲಾಗಲಿ ಅಥವಾ ಹಿಂದುಸ್ತಾನ ಮತ್ತು ಹೈದರಾಬಾದ ಗಡಿಗಳಲ್ಲಾಗಲಿ ಆಗಬಹುದು, ಕಾಂಗ್ರೆಸ್ಸಿಗರು ಮತ್ತು ಗಾಂಧೀವಾದಿಗಳು ಕೂಡ ತಿಳಿಯದಲೆ ಜಾತೀಯತೆಯ ಎಜಂಟರಾಗಹತ್ತಿರುವರು.

ಆದುದರಿಂದ ಎಲ್ಲ ಬಗೆಯ ಜಾತೀಯತೆಯನ್ನು ಹೋಗಲಾಡಿಸುವದವಶ್ಯವೆಂಬ ಬಗ್ಗೆ ಯಾರಲ್ಲಿ ಎಳ್ಳಷ್ಟಾದರೂ ಸಂಶಯವಿಲ್ಲವೋ ಅವರು ಸ್ವತಃ ಕಾರ್ಯಪ್ರವೃತ್ತರಾಗಿ ಎಲ್ಲ ಬಗೆಯ ವಿರೋಧವನ್ನು ಮತ್ತು ಅಡಚಣೆಗಳನ್ನು ಎದುರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸರಕಾರದ ಧೋರಣವು ಮತ್ತು ಪ್ರವೃತ್ತಿಯು ತಮಗೆ ಅನುಕೂಲವಾಗಿದೆ, ಸರಕಾರದ ಧುರೀಣರಾದ ಪಂಡಿತ ಜವಾಹರಲಾಲ ಮೊದಲಾದವರು ತಮ್ಮ ಪಕ್ಷದಲ್ಲಿರುವರು. ಪ್ರತ್ಯಕ್ಷವಾಗಿ ಇಲ್ಲವೆ ಅಪ್ರತ್ಯಕ್ಷವಾಗಿ ಜಾತೀಯರಾಗಿರುವವರ ಪಕ್ಷದಲ್ಲಿ ಇರುವದಿಲ್ಲ ಎಂದು ಮುಂತಾಗಿ ಭಾವಿಸಿ ಸಮಾಧಾನ ಹೊಂದತಕ್ಕದ್ದಲ್ಲ. ತನ್ನ ಧೋರಣವನ್ನು ಯಶಸ್ವಿಗೊಳಿಸಲು ತಮ್ಮ ಸರಕಾರವು ತನಗೆ ಸರಿಯಾದ ಉಪಾಯಗಳನ್ನು ಕೈಕೊಳ್ಳಬಹುದು. ಸರಿಯಾದ ಕೆಲಸ ಮಾಡುವ ಇಲ್ಲವೆ ಕೆಡಕನ್ನು ಹೋಗಲಾಡಿಸುವ ಸರಕಾರದ ರೀತಿ ಪದ್ಧತಿಗಳು ಜನತೆಯ ಅಹಿಂಸಾತ್ಮಕ ಸೇವಕನ ರೀತಿ ಪದ್ಧತಿಗಳಿಗಿಂತ ಸಾಮಾನ್ಯವಾಗಿ ಭಿನ್ನವಾಗಿರಬಹುದೆಂಬುದನ್ನು ಮರೆಯತಕ್ಕದ್ದಲ್ಲ. ಪಾರಿತೋಷಕ ಮೊದಲಾದವುಗಳನ್ನು ಕೊಟ್ಟು ಇಲವೆ ಶಿಕ್ಷೆಯ ಬೆದರಿಕೆಯಿಂದ ಸರಕಾರವು ಸಾಮಾನ್ಯವಾಗಿ ಕೆಲಸ ಮಾಡಿಸಿಕೊಳ್ಳುವದುಂಟು. ಕೆಲ ಸಲ ಇದರಿಂದ ಯಶಸ್ಸು ದೊರೆಯುತ್ತದೆ. ಆದರೆ ಜನತೆಯು ಅಭಿಪ್ರಾಯಗಳಲ್ಲಿ ಮತ್ತು ಭಾವನೆಗಳಲ್ಲಿ ಬದಲು ಮಾಡಬೇಕೆಂದರೆ ಈ ಪದ್ಧತಿಗಳು ಕಾರ್ಯಕಾರಿಯಾಗಲಾರವು. ಜಾತೀಯತೆಯನ್ನು ನಿರ್ಮೂಲಗೊಳಿಸುವಲ್ಲಿ ಅತ್ಯಂತ ಶ್ರದ್ಧೆಯುಳ್ಳ ಲೋಕಸೇವಕರಿಂದಲೆ ಈ ಕಾರ್ಯವು ಪರಿಣಾಮಕಾರಿಯಾಗಬಲ್ಲದು. ಸರಕಾರದ ಉದ್ದೇಶವೇ ಇದೇ ಆಗಿರುವದರಿಂದ ಲೋಕಸೇವಕರ ಈ ಪ್ರಯತ್ನಗಳು ಅದಕ್ಕೆ ಸಹಾಯಕವಾಗಿ ಪರಿಣಮಿಸುವವು. ಅದರ ಪ್ರತಿಕ್ರಿಯೆ ಹೆಚ್ಚಾಗುವದು. ಆದರೆ ಸರಕಾರದ ಮುಖಾಂತರ ಕೆಲಸ ಮಾಡುವ ಆಸೆಯನ್ನು ಇಲ್ಲವೆ ಸರಕಾರವೆ ಎಲ್ಲ ಕೆಲಸ ಮಾಡಬೇಕೆನ್ನುವ ಲೋಕಸೇವಕರು ಬಿಟ್ಟುಗೊಡಬೇಕೆಂದು ನಾನು ಕೇಳಿಕೊಳ್ಳುವೆ. ಈ ಬಗೆಯ ಪ್ರವೃತ್ತಿಯಿಂದ ಸರಕಾರಕ್ಕೂ ಯಶಸ್ಸು ಸಿಕ್ಕಲಾರದು ಧ್ಯೇಯವೂ ಯಶಸ್ವಿಯಾಗಲಾರದು, ಸರಕಾರದ ರಾಜ್ಯಸೂತ್ರವೆಲ್ಲ ಸಂಪೂರ್ಣವಾಗಿ ಜಾತ್ಯಂಧರಾಗಿದ್ದರೂ ಸರ್ವೋದಯದಲ್ಲಿ ಶ್ರದ್ಧೆಯುಳ್ಳವರೇ ಈ ಬಗೆಯ ಎಲ್ಲ ಕೆಲಸವನ್ನು ಮಾಡುತ್ತ ನಡೆಯಬೇಕು.

ಮುಂಬಯಿ — ಕಿಶೋರಲಾಲ ಮಶ್ರುವಾಲಾ

೧೧-೫-೪೮

ಮೋಹನಚಂದ ಕ. ಗಾಂಧಿ

(೭ ನೇ ಪುಟದಿಂದ)

ಲ್ಯಾಣವನ್ನು ತರಬಲ್ಲನು. ಇದೇ ಅವರು ಭಾರತಕ್ಕೆ ದಯಪಾಲಿಸಿದ ಮಹಾದಾನ. ಮಾನಾತ್ಮಕ ಪಿತೃಪದದಲ್ಲಷ್ಟೇ ಅಲ್ಲ ಮಾನವ ಕುಲದ ಸ್ವತಂತ್ರ ಅಲಿಪ್ತ ಪ್ರತೀಕವಾಗಿ ಅವರಿದ್ದರು.

ಹಿಂದುಸ್ತಾನಕ್ಕೆ ಇನ್ನೊಬ್ಬ ‘ಬಾಪು’ ಎಂದಾದರೂ ದೊರಕಬಹುದೆಂದು ಅನಿಸುವದಿಲ್ಲ. ನೈತಿಕ ಸಮತೆಯನ್ನು ಸಾಧಿಸಿ ಭಾರತವು ಪರಿಣತವಾಗುವ ಕಾಲವಿದು. ಇದನ್ನು ಸಾಧಿಸಲು ಪ್ರಾಚೀನ ಋಷಿಮುನಿಗಳನ್ನು ಕೇವಲ ಸ್ಮರಿಸಿದರಷ್ಟೇ ಸಾಲದು. ಗಾಂಧೀಜಿಯಂತೆ ಋಷಿಮುನಿಗಳ ಮಟ್ಟಕ್ಕೆ ಏರಬೇಕು.

ಭಾರತವು ಗಾಂಧೀಜಿಗೆ ಸಲ್ಲಿಸಬಹುದಾದ ಅತ್ಯುಚ್ಚ ಸನ್ಮಾನವೆಂದರೆ ಮನುಷ್ಯ ಮಾತ್ರನಾಗಿದ್ದು ಏನನ್ನು ಸಾಧಿಸಬಹುದೆಂಬುದನ್ನು ಆಚರಿಸಿ ತೋರಿಸುವ ಮೂಲಕ. ಕೇವಲ ಅವರ ವಚನಗಳನ್ನಾಗಲೀ ಅವರ ಕೃತಿಗಳನ್ನಾಗಲೀ ಮತ್ತೆ ಮತ್ತೆ ಅನ್ನುವದು ಅನುಕರಿಸುವದಕ್ಕಿಂತ ಈ ಪ್ರತ್ಯಕ್ಷ ಆಚರಣೆ ಹೆಚ್ಚಿನದು. ಅವರ ವಾಣಿಯಲ್ಲಿ ಅಡಗಿದ ಜ್ಞಾನದ ಆಳವೂ ಅವರ ಕೃತಿಗಳ ಅಂತರಾಳದಲ್ಲಿದ್ದ ಉದ್ದೇಶವೂ ಅವುಗಳ ಬಗ್ಗೆ ಒಂದು ಬಗೆಯ ಧಾರ್ಮಿಕ ಅಂಧಶ್ರದ್ಧೆ ತಳೆವುದರಿಂದ ಮಾತ್ರ ಉಳಿಯಬಲ್ಲವೆಂದು ತಿಳಿವುದು ತಪ್ಪು. ಸಕಲರೂ ಗಾಂಧೀಜಿ ಇಟ್ಟುಕೊಂಡಂತಹ ಅಚಲ ಶ್ರದ್ಧೆಯಿಂದ ತಮ ತಮಗೆ ತೋಚಿದ ರೀತಿಯಲ್ಲಿ ದೃಢಸಂಕಲ್ಪರಾಗಬೇಕು.

ಭಾರತದ ಜನರು ಗಾಂಧೀಜಿಯಿಂದ ಪರಿಶುದ್ಧ ಹೃದಯವೆಂದರೇನು ಅನುಪಮ ಸ್ವಾರ್ಥತ್ಯಾಗವೆಂದರೇನು ಎಂಬುದನ್ನು ಕಲಿಯಬಹುದಾಗಿದೆ. ಗಾಂಧೀಜಿಯ ವೈಯಕ್ತಿಕ ವರ್ತನವನ್ನು ಒಂದು ಕಾನೂನಾಗಿ ಮಾಡಿಟ್ಟುಕೊಳ್ಳುವದರಿಂದ ಅಥವಾ ಅವರ ಪಾರ್ಥಿವ ಆವೇದನ ನಿವೇದನಗಳ ಅನುಕರಣದಿಂದ ಇದನ್ನೆಲ್ಲ ಕಲಿಯಬಂದೀತೆ? ಎಂದೂ ಇಲ್ಲ. ಭಾರತೀಯರು ಇದನ್ನೆಲ್ಲ ಪರಿಶುದ್ಧ ಪ್ರಾಮಾಣಿಕತೆಯಿಂದ ಮಾತ್ರ ಕಲಿಯಬಲ್ಲರು. ಪ್ರಾಮಾಣಿಕತೆಯೇ ಗಾಂಧೀಜಿಯ ಜೀವನದಲ್ಲಿ ಅಗ್ರಸ್ಥಾನ ಪಡೆದಿತ್ತು. ಈ ಪ್ರಾಮಾಣಿಕತೆಯನ್ನು ಪ್ರಯೋಗಿಸಲು ತಕ್ಕ ಕಲ್ಪಕತೆಯೂ ಅವರಲ್ಲಿತ್ತು. ಅದನ್ನೂ ಭಾರತೀಯರು ಪಡೆಯಬೇಕು.

ಭಾರತವು ಗಾಂಧೀಜಿಯಿಂದ ಇವುಗಳನ್ನೆಲ್ಲ ಕಲಿಯುವದಾದರೆ ಇಡೀ ಪ್ರಪಂಚಕ್ಕೇ ಇವನ್ನು ಕ್ರಿಯಾಗಿ ಕಲಿಸುವ ಭಾಗ್ಯ ಅದಕ್ಕೆ ಬರಬಹುದು.

ಲಾಹೋರದಲ್ಲಿಯ ಮಹಮ್ಮದ ಶರೀಫ ಎಂಬ ಸರಕಾರೀ ನೌಕರನೊಬ್ಬನು ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾದಿಂದ ಪಾಕಿಸ್ತಾನ ಸರಕಾರಕ್ಕೆ ಬರಬೇಕಾಗಿದ್ದ ೩೫೦೦೦ ರೂಪಾಯಿಗಳನ್ನು ಸುಳ್ಳು ಸಹಿ ಮಾಡಿ ಎತ್ತಿ ಹಾಕಿದನೆಂಬ ಆರೋಪದ ಮೇಲೆ ಅವನನ್ನೂ ಅವನ ಸಂಗಾತಿಗಳಾದ ಅಬ್ದುಲ ಕ್ಯೂಮ ಮತ್ತು ನಜೀರ ಅಹಮ್ಮದ ಎಂಬ ಇನ್ನಿಬ್ಬರನ್ನೂ ಬಂಧಿಸಲಾಗಿದೆ. ಈ ಹಣವನ್ನು ೧೯೪೭ನೇ ಡಿಸೆಂಬರದಿಂದ ೧೯೪೮ನೇ ಫೆಬ್ರುವರಿ ವರೆಗೆ ೪ ಕಂತುಗಳಲ್ಲಿ ಸಂಗ್ರಹಿಸಲಾಗಿದೆಯಂತೆ.

ಗಾಂಧೀಜಿಯ ಪ್ರಾಣಾರ್ಪಣ ಮತ್ತು ಭಾರತದ ಭವಿತವ್ಯ

ಗಾಂಧೀಜಿಯ ಮರಣ ಭಾರತದ ಪ್ರಪ್ರಥಮಕ್ಕೆ ಅನೇಕ ಸಂಕೇತಗಳನ್ನು ಉಸುರಿದೆ. ಆದರೆ ಇದೀಗ ಅವುಗಳೆಲ್ಲ ಅತಿ ಘನವಾದ ಸಂಕೇತ; ಧಾರ್ಮಿಕ ಅಸಹನೆ ಶಾಸ್ತ್ರಗಳನ್ನು ಮೊತ್ತ ಶತ್ರುಗಳು ಮನುಷ್ಯನಿಗೆ ಬೇರೆ ಇಲ್ಲ. ಇವು ಅಜ್ಞಾನ ಅಹಂಕಾರಗಳಿಂದ ಉದ್ಭವಿಸುವ ಅಧಾರ್ಮಿಕ ಸತ್ವಗಳು. ಈ ಮಾತು ಇಂದು ಸ್ಪಷ್ಟವಾಗುತಿದೆ. ಗಾಂಧೀಜಿಯ ಹೃದಯ ಮೃತ್ಯುವನ್ನು ಅತಿಕ್ರಮಿಸಿ ಈ ಸತ್ಯದಿಂದ ಸ್ಪಂದಿಸುತಿದೆ. ಇದರ ಸದುಪಯೋಗವನ್ನು ಭಾರತೀಯರು, ಅದರಲ್ಲಿಯೂ ಹಿಂದುಗಳು ಪಡೆಸಿಕೊಳ್ಳುವರೋ ಇಲ್ಲವೋ ನೋಡ ಬೇಕು.

ಈ ಮಹಾತ್ಮನು ಸುರಿಸಿದ ನೆತ್ತರು ಆತನ ಮಾತೆಯು ಭಾರತದಲ್ಲಿ, ಜಗತ್ತಿನ ಆಧ್ಯಾತ್ಮಿಕ ಜನನಿ ಮತ್ತು ಗುರುವಾದ ಭಾರತದಲ್ಲಿ, ಶಾಂತಿ ಐಕ್ಯಗಳ ಸಂಪದನವನ್ನು ಕೀರಣಿಸುವಂತೆ ಆತನ ಬಲಿದಾನಕ್ಕೆ ನಾವೆಂತು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದು ಶಾಂತಚಿತ್ತದಿಂದ ವಿಚಾರ ಮಾಡುವ ಕಾಲ ಇದೀಗ ಬಂದಿದೆ. ಗಾಂಧೀಜಿ ಈ ಶಾಂತಿ ಐಕ್ಯಗಳ ಕಣಸನ್ನೆ ಕಾಣುತಿದ್ದರು.

ಹಿಂದೀಯರು ತಮ್ಮ ರಾಷ್ಟ್ರೀಯ ಜೀವನದಲ್ಲಿ ಜಾತೀಯತೆಯ ವಿಷದ ಪ್ರವೇಶವನ್ನು ಸಹಿಸಿದ್ದು ಅತಿರೇಕವಾಗಿ ಇಂದು ದೇಶದಲ್ಲಿ ಎಲ್ಲ ಬಗೆಯ ಜಾತೀಯ ಸಂಘ ಸಂಸ್ಥೆಗಳು ಹುಟ್ಟಿಕೊಂಡು ಅಧಿಕಾಧಪ್ರಾಯವಾಗಿ ಬಿಟ್ಟವೆ—ಜಾತೀಯ ಸಮಾಜಗಳು, ಆಸ್ಪತ್ರೆಗಳು, ಹಾಸ್ಟೆಲುಗಳು, ಕ್ರೀಡಾ ಸಂಘಗಳು, ಉಪಹಾರ ಗೃಹಗಳು, ಧರ್ಮನಿಧಿಗಳು, ಶಿಕ್ಷಣ ಸಂಸ್ಥೆಗಳು ಮತ್ತೂ ಏನೇನೊ ಕಾಣ ಸಿಗುತ್ತವೆ. ಅವುಗಳಲ್ಲಿ ಕೆಲವೇನೋ ಒಟ್ಟಿನ ಮೇಲೆ ಭಾರತಕ್ಕೆ ಅಪಾಯಕರವಾಗಿಲ್ಲ ನಿಜ. ಆದರೆ ಅವು ಕೂಡ ತಮ್ಮ ಸತ್ಕಾರ್ಯವನ್ನು ವಿಶಿಷ್ಟ ಜಾತೀಯ ಕ್ಷೇತ್ರಕ್ಕೆ ಸೀಮಿತಗೊಳಿಸಿ, ಭಾರತದ ಐಕ್ಯಸಾಧನೆಗೆ ಕಾಲ್ತೊಡಕಾಗಿ ಕುಳಿತಿವೆ.

ಹಿಂದುಸ್ತಾನದ ಎರಡು ಪ್ರಧಾನ ಜಾತಿಗಳು ತಮ್ಮೊಳಗೆ ಒಮ್ಮತಕ್ಕೆ ಬರಲಾರದೆ ಹೋದುದರಿಂದ ಸ್ವರಾಜ್ಯ ಸಾಧನೆಗೆ ಎಷ್ಟೋ ವಿಲಂಬ ವಾಯಿತು. ಕೊನೆಗೆ ದೇಶವನ್ನು ಎರಡೂ ಪಕ್ಷಗಳಿಗೆ ಮನಸ್ತಾಪಕರವಾಗುವಂತೆ ಎರಡು ಡೊಮಿನಿಯನ್ನುಗಳಾಗಿ ಒಡೆಯಬೇಕಾಗಿ ಬಂತು. ಆದರೆ ವಿಭಜನೆಯಂಥ ಅಗಾಧ ವಿಪತ್ತು ಕೂಡ, ನಮ್ಮಿಬ್ಬರ ಮನೆಯಲ್ಲಿ ಆದ್ದ ಗೋಡೆಯೊಂದನ್ನು ಎಬ್ಬಿಸಿದ್ದರ ಬೆನ್ನಿಗೆ ಬಂದ ಅಗಾಧ ದುರಂತಗಳು ಕೂಡ, ನಮಗೆ ಬುದ್ಧಿ ಕಲಿಸಲಾರದೆ ಹೋದವು. ಧಾರ್ಮಿಕ ದುರಭಿಮಾನವೇ ಕೊಲೆ ರಕ್ತಪಾತಗಳನ್ನು ಪ್ರೇರಿಸಿದ ಶಕ್ತಿಯೆಂದು ನಿಚ್ಚಳವಾಗಿ ತೋರಿಸಲು ಗಾಂಧೀಜಿಯ ಅಮೂಲ್ಯ ಪ್ರಾಣಗಳೇ ಬಲಿಯಾಗಬೇಕಾಯಿತು. ಈಗ ಜಾತೀಯತೆ ಜಾತಿಭೇದಗಳಲ್ಲಿ ಹುದುಗಿರುವ ದುಷ್ಟ, ಹೇಯ ಸತ್ವಗಳು ದುರಭಿಮಾನಾಂಧರಿಗೆ ಮಾತ್ರ ಕಾಣದಿರಬಹುದು.

೧೯೨೪ರಷ್ಟು ಹಿಂದೆಯೆ ಗಾಂಧೀಜಿ ಬರೆದಿದ್ದರು:

“ಹಿಂದುಸ್ತಾನದಲ್ಲಿ ಹಿಂದುಗಳು ಮಾತ್ರ ಇರಬೇಕೆಂಬ ಇಚ್ಛೆ ಹಿಂದುಗಳಿಗಿದ್ದರೆ ಅವರು ಕನಸಿನ ರಾಜ್ಯದಲ್ಲಿದ್ದಾರೆ. ಹಿಂದುಸ್ತಾನದಲ್ಲಿ ಮನೆ ಮಾಡಿರುವ ಹಿಂದುಗಳೂ ಮುಸ್ಲಿಮರೂ ಪಾರ್ಶಿಗಳೂ ಕ್ರಿಶ್ಚಿಯನ್ನರೂ ದೇಶಬಾಂಧವರು. ತಮ್ಮ ಸ್ವಂತ ಹಿತಕ್ಕಾಗಿಯಾದರೂ ಅವರೆಲ್ಲರೂ ಐಕ್ಯದಿಂದ ಬಾಳಬೇಕಾಗುವದು.”

“ಹಿಂದೂ ರಾಜ್ಯ” ದ ಭ್ರಮೆಯನ್ನು ನಿರ್ಧಾರಪೂರ್ವಕ ವಿರೋಧಿಸಿ ನಿಂತ ಪಂಡಿತ ಜವಾಹರಲಾಲರಿಗೆ ಪ್ರತಿಯೊಬ್ಬ ಹಿಂದೀಯನು ಕೃತಜ್ಞನಾಗಿರಬೇಕು.

ಧರ್ಮವೆಂಬುದು ಮಾನವ-ಮಾನವರನ್ನು ಹಿಂದುಗೂಡಿಸುವ ಶಕ್ತಿ. ಆದರೆ ಧಾರ್ಮಿಕ ಶಾಸ್ತ್ರದಿಂದ ಕೂಪ್ರಚಾಲಕ ಗುಂಪುಗಳು ಹುಟ್ಟುತ್ತವೆ. ಈ ಕೆಲ ತಿಂಗಳುಗಳಲ್ಲಿ ಹಿಂದುಗಳು ಮುಸ್ಲಿಮರು ಸಿಕ್ಖರೆಂದು ಹೇಳಿಕೊಳ್ಳುವ ಜನರು ದುರ್ಜನರಂತೆ, ಹಿಂಸ್ರಪಶುಗಳಂತೆ ಆಚರಿಸಿ ತಮ್ಮ ಧರ್ಮಕ್ಕೆ ಕಳಂಕವನ್ನೂ ತಮ್ಮ ದೇಶಮಾತೆಗೆ ಲಜ್ಜೆಯನ್ನೂ ಉಂಟುಮಾಡಿದ್ದಾರೆ.

ಅನೇಕ ವರ್ಷಗಳ ಹಿಂದೆ ಗಾಂಧೀಜಿ ಬರೆದಿದ್ದರು:

“ಧರ್ಮವೆಂದರೆ ನನಗೆ ಪ್ರೀತಿಯು ಹೆಚ್ಚು. ಆದರೆ ಹಿಂದೀಯರು ಅಧರ್ಮಿಗಳಾಗುತ್ತಿದ್ದಾರೆಂದು ನನ್ನ ಮೊದಲನೆ ದೂರು. ಇಲ್ಲಿ ನನ್ನ ಮನಸ್ಸಿನಲ್ಲಿರುವದು ಹಿಂದೂ, ಮುಸ್ಲಿಮ ಇಲ್ಲವೆ ಝುರತುಷ್ಟ ಧರ್ಮವಲ್ಲ; ಎಲ್ಲ ಧರ್ಮಗಳ ಮೂಲದಲ್ಲಿರುವ ಆ ಒಂದು ಧರ್ಮ. ಧಾರ್ಮಿಕ ಅಂಧಶ್ರದ್ಧೆಗಳು ಹಾಗೆಯೆ ಉಳಿಯಬೇಕೆಂದು ನನ್ನ ವಾದವಲ್ಲ. ನಾವು ಖಂಡಿತವಾಗಿಯೂ ಅವುಗಳ ಕೂಡ ಕೇಕಾಕೇಶಿ ಹೋರಾಡುವೆವು. ಆದರೆ ಧರ್ಮವನ್ನು ಕಡೆಗಣಿಸಿದರೆ ಅದು ಸಾಧ್ಯವಾಗದು.”

ಲೌಕಿಕ ವಾದಕ್ಕೆ ಮರಳಿದರೆ ನಮ್ಮ ಈ ದುಃಖಗಳು ದೂರವಾಗಲಾರವು. ತಪ್ಪು ಧರ್ಮದ್ದಲ್ಲ; ಸಂಪ್ರದಾಯ ಶರಣತೆಯೇ—ಅದು ಯಾವ ರೂಪವನ್ನೇ ಧರಿಸಿರಲಿ—ನಮ್ಮನ್ನು ಕೆಡಿಸಿದೆ. ಧರ್ಮವನ್ನು ನಾವು ಬಲಗೊಳಿಸಬೇಕು. ಪಂಥ ಪಂಗಡಗಳ ಕಪಿಮುಷ್ಟಿಯನ್ನು ಸಡಿಲಿಸಿದರೆ ಮಾತ್ರ ಧರ್ಮದ ಬಲ ಹೆಚ್ಚಬಲ್ಲದು.

ವಿಶ್ವಬಾಂಧವ್ಯವೇ ಧರ್ಮದ ತಿರುಳು. ನಮ್ಮ ಬಾಂಧವ್ಯಬುದ್ಧಿಯ ನಿಜವಾದ ಪರೀಕ್ಷೆ ನಮ್ಮ ನೆರೆಹೊರೆಯವರ ಬಗ್ಗೆ—ಅವರ ಮತಗಳು ನಮಗಿಂತ ಎಷ್ಟೇ ಭಿನ್ನವಾಗಿದ್ದರೂ—ನಮಗೆ ಏನೆನಿಸುವದೋ ಅದನ್ನು ಹೊಂದಿಕೊಂಡಿದೆ. ಹಿಂದುಸ್ತಾನದಲ್ಲಿ ಪಂಥ ಪಂಗಡಗಳ ಪಿಡುಗು. ಹಿಂದೂ ಧರ್ಮದಲ್ಲಿ ಜಾತಿಗಳ ಪಿಡುಗು. ತನ್ನ ಮಕ್ಕಳಲ್ಲಿ ಐಕ್ಯ ಸ್ಥಾಪನೆಯಾದ ಹೊರತು ಭರತಮಾತೆ ಪರಿಪೂರ್ಣ ಗೌರವವನ್ನು ಪಡೆಯಲಾರಳು.

ಸಾಮಾನ್ಯವಾದ ರಾಜಕೀಯ, ಆರ್ಥಿಕ, ಕಲಾತ್ಮಕ ಮತ್ತು ಭಾವನಾತ್ಮಕ ಹಿತಸಂಬಂಧಗಳನ್ನನುಸರಿಸಿ ಬೇರೆ ಬೇರೆ ಗುಂಪು ಕಟ್ಟಿಕೊಳ್ಳುವ ಮನುಷ್ಯಸಹಜವಾದ ಗುಣ ಬೇರೆ ಬೇರೆ ಜಾತೀಯ ಸಂಘಟನೆಗಳಿಂದ ಮೊಂಡಾಗುತ್ತದೆ. ಈ ಸಹಜ ಗುಂಪುಗಳು ಸಾಮಾನ್ಯವಾಗಿ ವಿವಿಧವೂ ಪರಿವರ್ತನಶೀಲವೂ ಪರಸ್ಪರವ್ಯಾಪಿಯೂ ಆಗಿರುವವು. ಲೌಕಿಕವನ್ನು ಧಾರ್ಮಿಕ ವಿಷಯಗಳಲ್ಲಿ ಕಲಬೆರಕೆ ಮಾಡಿ, ವ್ಯಕ್ತಿಗೆ ಪುರಸ್ಕಾರ ದೊರೆಯಬೇಕಾದರೆ ಜಾತಿಯ ಇಚ್ಛೆಗೆ ವಿಧೇಯನಾಗಿರಬೇಕೆಂಬ ಕರಾರು ಹಾಕುವದು ಅಸಹಜ ಮಾರ್ಗ. ಸತ್ಯವನ್ನೂ ಪರಸ್ಪರ ತಿಳವಳಿಕೆಯನ್ನೂ ಅಪೇಕ್ಷಿಸುವ ಸದ್ಬುದ್ಧಿಯುಳ್ಳಜನರಲ್ಲಿ ಮೂಲಭೂತವೂ ಶಾಶ್ವತವೂ ಆದ ಅನೈಕ್ಯ ಇರುವದು ಸಾಧ್ಯವಿಲ್ಲ. ಬೆಳಕಿಗಾಗಿ ಹಾತೊರೆಯುವವರೆಲ್ಲರೂ ಒಂದೇ. ಜಾತೀಯ ಗುಂಪುಗಳು ಅಸ್ವಾಭಾವಿಕವೂ ಅಪಾಯಕರವೂ ಆಗಿವೆ. ಅವುಗಳನ್ನು ಕಟ್ಟಿಕೊಳ್ಳುವ ಪ್ರವೃತ್ತಿಯನ್ನು ನಿರ್ನಾಮ ಮಾಡುವದು ಪ್ರತಿಯೊಬ್ಬ ಹಿಂದೀಯನ ಕರ್ತವ್ಯ.

ಭಾರತದ ವಿವಿಧ ಜಾತಿಗಳಲ್ಲಿರುವ ಭಿನ್ನತೆಗಿಂತ ಅವರ ಹಿತಸಂಬಂಧಗಳಲ್ಲಿರುವ ಸಾಮ್ಯವೇ ಹೆಚ್ಚು. ಭಾರತದ ಸಮಸ್ಯೆಗಳೂ ಸರ್ವವ್ಯಾಪಿ ಸಮಸ್ಯೆಗಳೆ—ಬಡತನ, ನಿರುದ್ಯೋಗ, ಸಾಲ, ಪರಿಹರಿಸಲು ಸಾಧ್ಯವಿದ್ದರೂ ಪರಿಹರಿಸದಿರುವ ರೋಗ ರುಜೆ, ನಿರಕ್ಷರತೆ ಮತ್ತು ಇವುಗಳ ಫಲವಾಗಿ ಬಂದೇ ಬರುವ ಅಸಾಮರ್ಥ್ಯ, ಅಂಧಶ್ರದ್ಧೆ, ಅಯೋಗ್ಯ ವಸತಿ, ಸಾರಿಗೆ ಮತ್ತು ಪೇಟೆಯ ಅನುಕೂಲತೆಗಳು ಸಾಲದಿರುವದು ಮತ್ತು ಈಗ ಗಂಟು ಬಿದ್ದಿರುವ ನಿರಾಶ್ರಿತರಿಗೆ ಪರಿಹಾರ ಮತ್ತು ಪುನರ್ವಸತಿ ಒದಗಿಸುವ ಅಗಾಧ ಕಾರ್ಯ. ಇವುಗಳಲ್ಲಿ ಯಾವುದು ಯಾವ ಜಾತಿಯನ್ನು ಮಾತ್ರ ಕಾಡಿ ಯಾವದನ್ನು ಬಿಡುತ್ತದೆ ಹೇಳಿರಿ? ಇವುಗಳನ್ನು ಬಿಡಿಸಿದರೆ ಅದರಿಂದ ಲಾಭಹೊಂದದೆ ಇರುವ ಜಾತಿ ಯಾವದು? ಸ್ವಾರ್ಥಕ್ಕಾಗಿಯಾದರೂ ಭಾರತದ ಉತ್ತರೋತ್ತರಕ್ಕಾಗಿ ಎಲ್ಲರೂ ತಮ್ಮ ಸತ್ವವನ್ನು ಒಮ್ಮತದಿಂದ ಉಪಯೋಗಿಸುವದು ಅವಶ್ಯವಿದೆ.

ಈಗ ಈಚೆಗಿನ ಕೆಲ ತಿಂಗಳುಗಳಲ್ಲಿ ಜರುಗುತಿರುವ ಮತ್ತು ಧರ್ಮಾಂಧನೊಬ್ಬನಿಂದ ಗಾಂಧೀಜಿಯ ಕೊಲೆಯಲ್ಲಿ ಪರ್ಯವಸಾನ ಹೊಂದಿದ ದುರಂತಗಳು ಜಾತೀಯ ಸಂಘಟನೆಗಳಿಂದೊದಗುವ ಭೀಷಣ ಪರಿಣಾಮಗಳನ್ನು ಕುರಿತು ಜನರಲ್ಲಿ ಹಿಂದೆಂದೂ ಇಲ್ಲದ ಜಾಗ್ರತಿಯನ್ನುಂಟುಮಾಡಿರುವಾಗ, ಇದೀಗ ಆ ಅನಾಹುತಕರ ಸಂಸ್ಥೆಗಳ ಹಿಡಿತದಿಂದ ದೇಶವನ್ನು ಬಿಡಿಸಲು ಸುಸಂಧಿ. ಹೀಗೆ ಮಾಡದೆ ಹೋದರೆ, ಗಾಂಧೀಜಿಯೂ ಅವರು ಯಾವಗೋಸ್ಕರ ಜೀವನ ಸವೆದರೂ ಅವೆಲ್ಲವೂ ನಮಗೆ ದೀಪಸ್ತಂಭದಂತೆ ಮಾರ್ಗದರ್ಶಿಯಾಗುವ ಬದಲು ಕ್ಷಿಪ್ರದಲ್ಲಿಯೇ ಮರವೆಯ ಗರ್ಭದಲ್ಲಿ ಲೀನವಾಗಿ ಹೋಗುವದು ಖಚಿತವಿದ್ದ.

ಜಾತೀಯ ಬಂಧಗಳನ್ನು ಹರಿದೊಗೆಯುವ ಹಾದಿಯಾವುದು ?

(೧) ಜಾತೀಯತೆಯಿಂದ ಭಾರತಕ್ಕೊದಗಿದ ದುಃಖಗಳನ್ನೆದುರಿಸಬೇಕು ಮತ್ತು ಒಪ್ಪಿಕೊಳ್ಳಬೇಕು. ಅಲ್ಪಸಂಖ್ಯಾಕ ಸಮಸ್ಯೆಗಳನ್ನು ಹುಟ್ಟಿಸುವ ಭಾವಗಳನ್ನು ನಮ್ಮ ಹೃದಯದಿಂದಲೂ ಬುದ್ಧಿಯಿಂದಲೂ ದೂರಮಾಡಬೇಕು. ಯಾರೇ ಯಾರ ವಿರುದ್ಧವೇ ಮಾಡಿದುದಿರಲಿ ಸಮಾಜದ್ರೋಹ, ಅನ್ಯಾಯ, ಕ್ರೂರ ಕರ್ಮಗಳನ್ನು ಖಂಡಿಸಬೇಕು.

(೨) ಬೇರೆ ಜಾತಿಗಳ ದುಷ್ಕೃತ್ಯಗಳನ್ನು ಮರೆತು ಬಿಡಬೇಕು.

“ಯಾರೂ ಮಿಂಚಿ ಹೋದ ಮಾತುಗಳನ್ನು ಎತ್ತಬಾರದು. ನಾವೆಲ್ಲರೂ ಒಬ್ಬರಲ್ಲ ಒಬ್ಬನನ್ನು ಕಳೆದುಕೊಂಡವರೆ, ಅದು ಕಾರಣ ನಮ್ಮನ್ನು ನೋಯಿಸಬಹುದಾದ ಸಂಗತಿಗಳನ್ನು ನೆನೆಯೋಣ ಬೇಡ. ಇಂದಿನಿಂದ, ಬೇರೆ ಬೇರೆ ಹಳ್ಳಿಗಳಲ್ಲಿ ವಾಸಿಸುತ್ತಿದ್ದರೂ ನಾವೆಲ್ಲ ಒಂದೇ ಜನ; ನಮ್ಮ ಹೃದಯದೊಳಗೆ ಈ ಬಾಂಧವ್ಯವನ್ನು ಎಚ್ಚರವಾಗಿಡೋಣ.”

(೩) ಜಾತೀಯ ಸಂಸ್ಥೆಗಳು ವಿಸರ್ಜಿಸಲ್ಪಡಬೇಕು, ಇಲ್ಲವೇ ಸರ್ವಜಾತಿಗಳಿಗೆ ಎಡೆ ಕೊಡಬೇಕೆಂದು ಹಟ ಹಿಡಿಯೋಣ. ಜಾತೀಯ ತಳಹದಿಯ ಮೇಲೆ ರಾಜಕೀಯ ಚಟುವಟಿಕೆ ನಡೆಸುವದನ್ನು ಸರ್ವಥಾ ಮನವಾರೆ ತ್ಯಜಿಸಬೇಕು. ಬೇರೆ ಬೇರೆ ಜಾತಿಗಳ ಹಿತ ಬೇರೆ ಬೇರೆಯೆಂಬ ಕಲ್ಪನೆ ಬರಿ ಭ್ರಮೆ, ಶುದ್ಧ ಜಾಲ. ಎಲ್ಲರೂ ಒಂದೇ ಧ್ಯೇಯಕ್ಕಾಗಿ ದುಡಿಯುವದಕ್ಕೆ ಉತ್ತೇಜನ ಕೊಡಬೇಕು.

(೪) ಜಾತೀಯ ಕ್ರೀಡಾ ಸಂಘ, ಆಟ, ಸಮಾಜಗಳನ್ನು ದೂರ ಮಾಡಬೇಕು.

(೫) ಜಾತೀಯ ಶಿಕ್ಷಣವನ್ನು ತೀಕ್ಷ್ಣವಾಗಿ ನಿರೋಧಿಸಬೇಕು. ಚಿಕ್ಕ ಮಕ್ಕಳ ಮತ್ತು ಹಿರಿ ವಿದ್ಯಾರ್ಥಿಗಳ ಮನಸಿನಲ್ಲಿ ಜಾತೀಯ ವಿಷಯವನ್ನು ತುಂಬದಂತೆ ನೋಡಿಕೊಳ್ಳಬೇಕು.

ಜಾತೀಯ ಶಿಕ್ಷಣ ಸಂಸ್ಥೆಗಳಿಗೆ, ಅವು ಯಾವ ಅಂತಸ್ತಿನವೆ ಇರಲಿ, ಕೊಡುವ ಸರಕಾರಿ ದತ್ತಿಗಳನ್ನು ಒಡನೆ ನಿಲ್ಲಿಸಿಬಿಡಬೇಕು. ಸಹಿಷ್ಣುತೆಯ ಪ್ರಚಾರದಲ್ಲಿಯೂ ಭಾರತದ ಐಕ್ಯದ ಭಾವನೆಯನ್ನು ನಿರ್ಮಿಸುವಲ್ಲಿಯೂ ವಿಶ್ವವಿದ್ಯಾಲಯಗಳ ಅಂಗ ಬಹಳ ದೊಡ್ಡದು. ಆದಕಾರಣ “ಹಿಂದು” ಅಥವಾ “ಮುಸ್ಲಿಂ” ವಿಶ್ವವಿದ್ಯಾಲಯಗಳಿರುವದನ್ನು ಸಹಿಸೋಣಬೇಡ. (“ವಿಶ್ವ” ಶಬ್ದಕ್ಕೇ ಎಲ್ಲ ಎಂಬ ಅರ್ಥವಿದೆ.)

(೬) ಒಂದು ಧರ್ಮ ಪಂಥದ ಕಡೆ ಒಲವಿಟ್ಟು ಬರೆದ ಇತಿಹಾಸ ಗ್ರಂಥಗಳನ್ನು ಕಠೋರವಾಗಿ ಪ್ರತಿಬಂಧಿಸಬೇಕು.

(೭) ವಿಶಿಷ್ಟ ಜಾತಿಯವರಿಗಷ್ಟೇ ಎಂಬ ಸಂಸ್ಥೆಗಳಿಗೆ ಸಹಾಯ ನೀಡಲು ನಿರಾಕರಿಸಬೇಕು. ಇದರಿಂದ ನಮ್ಮ ಸಮಾನ ಮಾನವ್ಯ ಭಾವನೆಗೆ ಪ್ರಮಾಣ ಕೊಟ್ಟಂತಾಗುವದು. ನಮ್ಮ ರಾಷ್ಟ್ರೀಯತೆ ಯಾವುದೇ ಪಂಗಡವನ್ನು ಮೀರಿ ನಿಲ್ಲಬೇಕು.

(೮) ರೇಲ್ವೆ ಉಪಹಾರ ಮಂದಿರಗಳಲ್ಲಿ ಜಾತೀಯ ವಿಭಾಗಗಳಿರುವದನ್ನು ಶಾಸನ ಮೂಲಕ ರದ್ದುಗೊಳಿಸಬೇಕು. ವಿಶಿಷ್ಟ ಜಾತಿಗೆ ಮಾತ್ರ ಪೂರೈಸುವ ಉಪಹಾರ ಮಂದಿರಗಳನ್ನು ಅವು ತಮ್ಮ ಜಾತೀಯ ತಲೆಪಟ್ಟಿಗಳನ್ನು ಕಿತ್ತೊಗೆಯುವವರೆಗೂ ಬಹಿಷ್ಕರಿಸಬೇಕು.

(೯) ಸರಕಾರಿ ನೌಕರಿಗಳಲ್ಲಾಗಲಿ ಖಾಸಗಿ ಉದ್ಯೋಗಗಳಲ್ಲಾಗಲಿ, ಅಂಗಡಿಗಳಲ್ಲಿ ವ್ಯವಹಾರ ಮಾಡುವಾಗಲಾಗಲಿ ಜಾತೀಯ ಭಾವನೆಗಳನ್ನು ತೊಡೆದು ಹಾಕೋಣ.

(೧೦) ಹಿಂದೀ–ಉರ್ದು ಸಮಸ್ಯೆಯಲ್ಲಿರುವ ಅಸ್ವಾಭಾವಿಕ ಜಾತೀಯ ಧ್ವನಿಯನ್ನು ಇಲ್ಲದಂತೆ ಮಾಡಬೇಕು.

(೧೧) ಪತ್ರಿಕೆಗಳು, ಹಾಟೆಲ ರಜಿಸ್ಟರುಗಳೇ ಮೊದಲಾದವುಗಳಲ್ಲಿ ಜಾತಿಯನ್ನು ಉಲ್ಲೇಖಿಸುವ ಪದ್ಧತಿಯನ್ನು ತೆಗೆದು ಹಾಕೋಣ. ಅದಷ್ಟು ಬೇಗನೆ ಜನಗಣನೆಯ ವರದಿಗಳಲ್ಲಿ ಕೂಡ ಜಾತಿಯ ಉಲ್ಲೇಖವನ್ನು ಬಿಟ್ಟುಬಿಡೋಣ. ನಾನು ಭಾರತೀಯ— ಬಸ್!

ಜನವರಿ ೨೧ ದಿನ, ತಮ್ಮ ಕೊನೆಯ ಉಪವಾಸ ಪ್ರಾರಂಭಿಸುವ ತುಸು ಮುಂಚೆ ಗಾಂಧೀಜಿ ಹೇಳಿದ್ದು

“ನಾನು ಹಿಂದೂ ಮುಸ್ಲಿಮ ಸಿಖರಲ್ಲಿ ಹೃದಯೈಕ್ಯ ಗೆಳೆತನವಾಗಬೇಕೆಂದು ಹಂಬಲಿಸುತ್ತೇನೆ. ಈ ನೊದಲು ಆದಿತ್ತು, ಇಂದು ಇಲ್ಲ. ಯಾವ ಭಾರತೀಯ ದೇಶಪ್ರೇಮಿಯೂ ಈ ಸಂಗತಿಯನ್ನು ನಿಶ್ಚಿಂತೆಯಿಂದ ನೋಡುತ್ತ ಕುಳ್ಳಿರಲಾರ.”

ಎಲ್ಲ ರೂಪದ ಜಾತೀಯತೆಯನ್ನೂ ಪರಿತ್ಯಜಿಸುವ ಮತ್ತು ಒಗ್ಗಟ್ಟಿನ ಪುನರ್ಜನ್ಮ ಹೊಂದಿದ ಭಾರತವನ್ನು ಕಟ್ಟುವ ಮೂಲಕ ನಾವು ನಮಗಾಗಿ ತಮ್ಮ ಪ್ರಾಣಗಳನ್ನು ಆಹುತಿಕೊಟ್ಟ ಹುತಾತ್ಮ ಗಾಂಧೀಜಿಯ ಯೋಗ್ಯ ಅನುಯಾಯಿಗಳೆನಿಸಿಕೊಳ್ಳೋಣ. ಇದೀಗ ಅವರ ನೆನಪಿಗೆ ನಾವು ಕಟ್ಟಬಹುದಾದ ಅತ್ಯುತ್ತಮ ಸ್ಮಾರಕ. ಆದರೆ ಇದೆಲ್ಲ ಸಾಧಿಸಬೇಕಾದರೆ, ಐಕ್ಯದ ಇಚ್ಛೆ ನಮ್ಮಲ್ಲಿರಬೇಕು. ಯಾವ ವಿಷಯಗಳಿಗೆ ಮಹತ್ವ ಕೊಡಬೇಕೋ ಅವುಗಳಿಗೇ ನಾವು ಮಹತ್ವ ಕೊಡಬೇಕು; ನಮ್ಮ “ಹಕ್ಕು”ಗಳಿಗೆ ಹೆಚ್ಚು ಗಮನ ಕೊಡುವ ಬದಲು, ಕರ್ತವ್ಯ, ಹೊಣೆಗಾರಿಕೆಗಳಿಗೆ ಕೊಡಬೇಕು.

ಜಾತಿ ಪಂಥಗಳನ್ನು ಅತಿಕ್ರಮಿಸಿ ನಿಂತ ಕೆಲವರೇ ಹಿಂದೀಯರಾದರೂ ಗಾಂಧೀಜಿಯ ಜೀವನವನ್ನೂ ಕಾರ್ಯವನ್ನೂ ಪ್ರೇರಿಸಿದ ವಿಚಾರಗಳನ್ನು ಅಭ್ಯಸಿಸಿದರೆ ಅವುಗಳನ್ನು ದೇಶಹಿತಕ್ಕಾಗಿ ಉಪಯೋಗಿಸಬಲ್ಲರು. ಕೊನೆಗೆ ನೋಡಿದರೆ ವಿಚಾರಗಳ ಪೃಥಕ್ಕರಣದಿಂದಲ್ಲದೆ ಕಾಯದೆಗಳಿಂದ ಜಗತ್ತು ಆಳಲ್ಪಡುವದಿಲ್ಲ.

(“ಥಿಯಸಾಫಿಕಲ್ ಫ್ರೀ ಟ್ರಾಕ್ಟ್ಸ” ತಾ. ೨೧. ೩. ೪೮ರಿಂದ ಆರಿಸಿ ಸಂಕ್ಷೇಪಿಸಿದ್ದು).

ಮೈಸೂರ ಪ್ರಜಾಪ್ರತಿನಿಧಿ ಸಭೆ

ಮೈಸೂರ ಸರಕಾರದ ಗೃಹಮಂತ್ರಿಗಳಾದ ಶ್ರೀ. ಮರಿಯಪ್ಪನವರು ಮಂಡಿಸಿದ ಸಾರ್ವಜನಿಕ ಸುರಕ್ಷಿತತೆಯ ಗೊತ್ತುವಳಿಯು ಅದೆಷ್ಟೋ ಊಹಾಪೋಹದ ನಂತರ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ತಾ. ೧ಕ್ಕೆ ೧೫ರ ವಿರುದ್ಧ ೩೪ ಮತಗಳಿಂದ ಸ್ವೀಕೃತವಾಯಿತು. ಮುಸ್ಲಿಂ ಲೀಗಿನವರು ಅನುಕೂಲ ಮತ ಕೊಟ್ಟರು. ಈ ಮಸೂದೆಯ ಪ್ರಕಾರ ಸಾರ್ವಜನಿಕ ಸುರಕ್ಷಿತತೆಯನ್ನು ಕಾಯ್ದುಕೊಳ್ಳಲು ಸರಕಾರಕ್ಕೆ ವಿಶೇಷಾಧಿಕಾರವು ದೊರಕುವದು.

ಪ್ರಶ್ನೋತ್ತರಗಳ ಸಮಯಕ್ಕೆ ಶಿಕ್ಷಣ ಮಂತ್ರಿಗಳು ಸಂಸ್ಥಾನದಲ್ಲೆಲ್ಲ ಬೇಗನೆ ನಿರಕ್ಷರತೆಯನ್ನು ನಿರ್ಮೂಲ ಗೊಳಿಸುವ ಏತ್ತುಗಡೆ ಮಾಡಲಾಗುವದೆಂದು ಹೇಳಿದರು. ಹೊಸ ಹೈಸ್ಕೂಲಗಳನ್ನು ಸರಕಾರವು ಪ್ರಾರಂಭಿಸುವ ಧೋರಣವನ್ನಿಟ್ಟುಕೊಂಡಿಲ್ಲವೆಂದೂ ಖಾಸಗಿ ಸಂಸ್ಥೆಗಳಿಗೆ ಎಲ್ಲ ಬಗೆಯ ಸೌಕರ್ಯ ಪ್ರೋತ್ಸಾಹ ಕೊಡಲಾಗುವದೆಂದೂ ಹೇಳಿ ಈಗ ಸಂಸ್ಥಾನದಲ್ಲಿ ೨೭ ಸರಕಾರಿ, ೪೦ ಖಾಸಗಿ ೫೭ ಮುನಸಿಪಲ್ ಹೈಸ್ಕೂಲಗಳಿವೆಯೆಂಬುದಾಗಿ ತಿಳಿಸಿದರು, ವಿಶಿಷ್ಟ ಸಂದರ್ಭದಲ್ಲಿ ಸರಕಾರಿ ಹೈಸ್ಕೂಲ ಸ್ಥಾಪಿಸುವದಾಗಿ ಭರವಸೆ ಕೊಟ್ಟರು.

ಆಮೇಲೆ ಮುಂಗಡ ಪತ್ರಿಕೆಯ ಚರ್ಚೆ ಪ್ರಾರಂಭವಾಯಿತು. ಶ್ರೀ. ದೇವರಾಜ ಅರಸರು ಮಾತನಾಡುತ್ತ ರೇಲ್ವೆ ಮಾರ್ಗ, ಟೆಲಿಫೋನ ಸೌಕರ್ಯ ಸುಧಾರಿಸಬೇಕೆಂದರು. ನೀರಿನ ಪೂರೈಕೆಯ ಬಗ್ಗೆ ಮುನಸಿಪಾಲಟಿಗಳಿಗೆ ಸಾಕಷ್ಟು ಧನ ಸಹಾಯ ಕೊಟ್ಟಿಲ್ಲವೆಂದು ಶ್ರೀ. ದೇವರಕೊಂಡಪ್ಪನವರು ಹೇಳಿದರು. ಶ್ರೀ. ಶಂಕರ ಗೌಡರು ಬಡವರನ್ನೂ ಹಳ್ಳಿಗರನ್ನೂ ಸರಕಾರವು ಅಲಕ್ಷಿಸಿದೆಯೆಂದೂ ಪ್ರಾಥಮಿಕ ಶಿಕ್ಷಣದ ಬಗ್ಗೆ ಹಳ್ಳಿಗರಿಗೆ ೫ ಆಣೆಯಂತೆ ವೆಚ್ಚಮಾಡಿದರೆ ನಗರ ವಾಸಿಗಳಿಗೆ ೪।। ರೂ. ಯಂತೆ ವೆಚ್ಚವಾಗುತ್ತಿದೆಯೆಂದೂ ಇದರಂತೆ ಗ್ರಾಮಾಭಿವೃದ್ಧಿಯ ಬಗ್ಗೆ ಒಬ್ಬ ಹಳ್ಳಿಗನಿಗೆ ೧೨ ಆಣೆ ಒಬ್ಬ ನಗರ ವಾಸಿಗೆ ೬ ರೂಪಾಯಿ ವೆಚ್ಚವಾಗುವದೆಂದೂ ಜನತಾ ಸರಕಾರಕ್ಕೆ ಇದು ಶೋಭಿಸದೆಂದೂ ಸಾಧಾರವಾಗಿ ದೂರಿದರು.

ಮುಂಬಯಿ ಪ್ರಾಂತದಲ್ಲಿ ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆದು ತೋರಿಸಿದ ರೈತರಿಗೆ ಯೋಗ್ಯ ಪಾರಿತೋಷಕ ಕೊಡತಕ್ಕದ್ದೆಂದು ಮುಂಬಯಿ ಸರಕಾರವು ನಿರ್ಧರಿಸಿದೆ. ಮಳೆಯಿಂದ ಬಂದ ಬೆಳೆ ಮತ್ತು ಕಾಲುವೆಯ ನೀರಿನಿಂದ ಬಂದ ಬೆಳೆ ಎರಡಕ್ಕೂ ಕೂಡಿ ಪ್ರತಿ ತಾಲೂಕಿಗೂ ೬ ಪಾರಿತೋಷಕಗಳನ್ನು ಇಡಲಾಗಿದೆ. ಆಯಾ ತಾಲೂಕಿನಲ್ಲಿ ಪ್ರತಿ ಎಕರೆ ಭೂಮಿಗೆ ಅತಿ ಹೆಚ್ಚು ಆಹಾರ ಧಾನ್ಯ ಬೆಳೆದು ತೋರಿಸಿದ ರೈತನಿಗೆ ಈ ಪಾರಿತೋಷಕಗಳನ್ನು ಕೊಡಲಾಗುವದು.

ರೂಪರಂಗ

ಮಿರ್ಜಾ ಸಾಹಿಬಾ

"ಮಿರ್ಜಾಸಾಹಿಬಾ" ಎಂಬುದು ಪಂಜಾಬಿನಲ್ಲಿ ಜನಪ್ರಿಯವಾದ ಒಂದು ಕಥೆ. ಇದನ್ನು ತೆಗೆದುಕೊಂಡು ಶ್ರೀ ಎಂ. ಆರ್. ನಾವಲಕರರು ಚಿತ್ರವನ್ನು ತಯಾರಿಸಿದ್ದಾರೆ. ಶ್ರೀ ಕೆ. ಅಮರನಾಥರು ಚೆನ್ನಾಗಿ ದಿಗ್ದರ್ಶನ ಮಾಡಿದ್ದಾರೆ. ದಿವಂಗತ ಪಂಡಿತ ಅಮರನಾಥರು ಸಂಗೀತ ನಿರ್ದೇಶಕರು. ಕುಮಾರ ಜಲ್ಲಾಲ ಬಡಿಯವರು ಗೀತಕಾರರು. ನೂರ್‌ಜಹಾನ್, ತ್ರಿಲೋಕ್ ಕಪೂರ್, ಗುಲಾಬ್ ಮತ್ತು ಗೋಪೆ ಇವರು ತಾರತಾರೆಯರು. ಮುಂಬಯಿಯಲ್ಲಿ ಈ ಚಿತ್ರವೀಗ ಪ್ರದರ್ಶಿಸಲ್ಪಡುತ್ತಿದೆ.

ಕಥಾಸಾರ ಹೀಗಿದೆ: ಮಿರ್ಜಾ ಮತ್ತು ಸಾಹಿಬಾ ಎಂಬವರು ಚಿಕ್ಕಂದಿನಲ್ಲಿ ಒಟ್ಟಿಗೆ ಶಾಲೆಗೆ ಹೋಗುತ್ತಿದ್ದ ಹುಡುಗ ಹುಡುಗಿಯರು. ಅವರ ಗೆಳೆತನ ಪರಿಣತವಾಗಿ ಕಾಲಕ್ರಮದಲ್ಲಿ ನರನಾರಿಯರೆಕಡ ಮಟ್ಟಕ್ಕೆ ಬಂದು ಮುಟ್ಟಿತು. "ಓದುವುದಿಲ್ಲ ಯಾಕೋ—ಬರಿದೆ ಪುಸ್ತಕ ಹಿಡಿದುಕೊಂಡಿದ್ದೀಯಲ್ಲೋ?" ಎಂದು ಸಾಹಿಬಾ ಕೇಳಿದರೆ ಮಿರ್ಜಾ ಹೇಳುತ್ತಾನೆ: "ನನಗೆ ರುಚಿಸುವ ಪುಸ್ತಕವೆಂದರೆ ನಿನ್ನ ಮುಖ. ಭಾಷೆಯ ಪ್ರಕಾಶನಶಕ್ತಿ ಮತ್ತು ಗಣಿತದ ನಿಷ್ಕರ್ಷವೃತ್ತಿ ಈ ಎರಡೂ ನಿನ್ನ ಮುಖದಲ್ಲಿವೆ. ಆದರೆ ಉಪಾಧ್ಯಾಯರ ಉಗ್ರತೆ ಮಾತ್ರ ಅಲ್ಲಿಲ್ಲ." ಇಂಥ ಸುಂದರ ಸನ್ನಿವೇಶ ಅಲ್ಲಲ್ಲಿ ಬರುತ್ತವೆ. ಅವರಿಬ್ಬರ

ಬೇಗನೆಹುಬ್ಬಳ್ಳಿಯ 'ರೂಪಂ' ಚಿತ್ರಮಂದಿರದಲ್ಲಿ ಪ್ರದರ್ಶಿಸಲಿರುವ 'ಮಿರ್ಜಾ ಸಾಹಿಬಾ'ದಲ್ಲಿ ಮುಖ್ಯ ಪಾತ್ರ ವಹಿಸಿದ ನೂರಜಹಾನ ಮತ್ತು ತ್ರಿಲೋಕ ಕಪೂರರು.

ಪ್ರಣಯ ಕುಟೀರದ ಮೇಲೆ ಕಲ್ಲೊಗೆಯಲು ಘುಮ್ಮನ್ ಎಂಬ ಶಾಲೆಯ ಕೇಡಿ ತಯಾರಾಗುತ್ತಾನೆ. ಅವನು ಅವರಿಬ್ಬರ ಬಂಧುಗಳಲ್ಲಿ ಆ ಸಂಬಂಧದ ಬಗ್ಗೆ ಅಸಮಾಧಾನ ಹುಟ್ಟುವಂತೆ ಪ್ರಚಾರ ನಡೆಸಿ ಹಾಲಿನಲ್ಲಿ ಹುಳಿಹಿಂಡಿ ಜೀವನಕ್ಕೆ ಬೆಂಕಿ ಹಚ್ಚುವ ಕೆಲಸಮಾಡುತ್ತಾನೆ. ಇದೇ ದುರಂತದ ಬೀಜ, ಈ ಕಾರಣವಾಗಿಯೇ ನಾಯಕ ನಾಯಿಕೆಯರು ಪ್ರೇಮಬಂಧವನ್ನು ಪರಸ್ಪರರಿಂದ ಕಟ್ಟಿಸಿಕೊಳ್ಳಲು ಇಹಲೋಕವನ್ನು ತ್ಯಜಿಸಬೇಕಾಗುತ್ತದೆ.

ಕಥಾವಸ್ತು ಸರಳ ಸುಂದರವಾಗಿದೆ. ಆದರೆ ವಿಷಯ ಪ್ರಕಾಶನ ಕಲೆಯಲ್ಲಿ ಗತಾನುಗತಿಕತೆ, ಪರಂಪರಾಪ್ರಿಯತೆ ಇರುವದು ಬೇಸರ ಬರುವಂತಿದೆ. ಕಥೆಯಲ್ಲಿ ಉದಾತ್ತವಿದ್ದ ಅಂಶ ಚಿತ್ರದಲ್ಲಿ ಕೆಲವೊಮ್ಮೆ ಹಾಸ್ಯಾಸ್ಪದವಾಗುವ ಸ್ಥಿತಿಗಿಳಿದಿದೆ. ಇದರ ಮೇಲೆ ತಾರ ತಾರೆಯರಿಗೆ ತಕ್ಕ ಪಾತ್ರಗಳನ್ನು ಹಂಚದಿದ್ದುದು ಮತ್ತೊಂದು ದೋಷ. ಪ್ರಸಿದ್ಧ ತಾರೆಯೊಂದು ನೂರ್ [illegible] ಆರಿಸಿ ಅವಳಿಗೆ ಸಾಹಿಬಾಳ ಪಾತ್ರ [illegible]

[illegible]

ಸಂಯ [illegible]

[illegible]

ಭಗವಾನ ಬಸವೇಶ್ವರ

[ಲೇ :— ಚಿತ್ರವಿಹಾರಿ]

ಕೊಲ್ಹಾಪೂರದ ಸುಬೋಧ ಪಿಕ್ಚರ್ಸದವರು "ಭಗವಾನ್ ಬಸವೇಶ್ವರ" ವೆಂಬ ಕನ್ನಡಚಿತ್ರವನ್ನು ಶೀಘ್ರದಲ್ಲಿಯೇ ನಿರ್ಮಿಸಲಿದ್ದಾರೆಂದು ವೃತ್ತಪತ್ರಗಳಿಂದ ತಿಳಿದು ಬಂದಿದೆ. ಕನ್ನಡ ಚಲನಚಿತ್ರ ಪ್ರಪಂಚದಲ್ಲಿಯೇ ಹೀಗೆಯೇ ಪ್ರಗತಿಯಾಗುತ್ತ ಹೋಗಲಿ. ಹೆಚ್ಚು ಹೆಚ್ಚು ಕನ್ನಡ ಚಿತ್ರಗಳು ನಿರ್ಮಿಸಲಿ—ಪ್ರದರ್ಶನಕ್ಕೆ ಬರಲಿ.

ಪ್ರಸ್ತುತ ಚಿತ್ರದ ತಯಾರಿಕೆಯು ಕೊಡಿಮತ್ತೂರಿನ ಸೆಂಟ್ರಲ್ ಸ್ಟುಡಿಯೋದಲ್ಲಿ ಭರದಿಂದ ನಡೆದಿದೆಯೆಂದೂ ತಿಳಿದು ಬಂದಿದೆ. ಶ್ರೀ ಕಾಟಕರರು ಈ ಚಿತ್ರದ ನಿರ್ಮಾತೃನಿರ್ದೇಶಕರಾಗಿದ್ದಾರೆ. ಶ್ರೀ ಬಸವೇಶ್ವರನ ಕತೆಯನ್ನು ಬರೆಯಲು ಕರ್ನಾಟಕದ ಸುಪ್ರಸಿದ್ಧ ಗ್ರಂಥಕರ್ತರೊಬ್ಬರನ್ನು ಆಯ್ದುಕೊಂಡಿದ್ದಾರೆಂದೂ ತಿಳಿದಿದೆ.

ನನ್ನ ಈ ಹಿಂದಿನ ಎರಡು ಸಂಚಿಕೆಯಲ್ಲಿ "ಇಂದಿನ ಚಲಚ್ಚಿತ್ರ" ಮತ್ತು 'ಕನ್ನಡ ಚಲಚ್ಚಿತ್ರ ಪ್ರಪಂಚ" ಈ ಎರಡು ಲೇಖಗಳಲ್ಲಿ ಇಂದಿನ ಚಲಚ್ಚಿತ್ರಗಳ ಸ್ವರೂಪ ವಿವರಣೆ ವಿವರಿಸಿದ್ದೇನೆ ಮತ್ತು ಚಿತ್ರಪಟವು ಆದರ್ಶವಾಗಲೂ ಜನಾದರಣೀಯವಾಗಲೂ ಕೆಲವು ಸೂಚನೆಗಳನ್ನು ಸೂಚಿಸಿದ್ದೇನೆ. ಅದರಂತೆ ನಮ್ಮ ಚಿತ್ರಕಾರರು ಮುನ್ನಡೆಯಲಿ.

ಪ್ರಸ್ತುತ ಚಿತ್ರಪಟದ ನಿರ್ಮಾಪಕರು ಶ್ರೀ ಭಗವಾನ ಬಸವೇಶ್ವರನ ಯೋಗ್ಯತೆಗೆ ತಕ್ಕಂತೆ ಚಿತ್ರವನ್ನು ನಿರ್ಮಿಸಲಿ. ಚಿತ್ರಪಟವು ಸರ್ವಾಂಗ ಸುಂದರವಾಗಲೆಂದು ಹಾರೈಸುವೆ.

ಪೃಥ್ವೀ ಥಿಯೇಟರ್ಸ

[illegible] ರಾಜನು ಈಗ ಹೊಸದೊಂದು [illegible] ಕಣ್ಣೆದುರಿಡುವನೆಂದು [illegible]ತ್ತದೆ. ಅದರ ಹೆಸರು "ಗದ್ದಾರ್" ೧೯೪೭ ರ ಅಗಸ್ಟ ೧೫ ರ ಸಮಯದಲ್ಲಿ ನಡೆದ ಜಾತೀಯ ಗಲಭೆಗಳಲ್ಲಿ ಸಂಭವಿಸಿದ ಕಷ್ಟನಷ್ಟಗಳ ನಿರೂಪಣ ಅಲ್ಲಿದೆ. ಪಶ್ಚಿಮ ಸಂಯುಕ್ತ ಪ್ರಾಂತವು ಸ್ಥಳ. ಶ್ರೀ ಇಂದರ್ ರಾಜ್ [illegible] ನಾಟಕಕರ್ತರು. ಪೃಥ್ವೀರಾಜನು ಅದರ ನಿರ್ಮಾಪಕ ಮತ್ತು ದಿಗ್ದರ್ಶಕ. ಉಜ್ರಾ ಮುಮತಾಜ್, ಸೋಹ್ರಾಸೇಗಲ್, ಸಜ್ಜನ್, ಕಮಲ್‌ಕಪೂರ, ವ್ಯಾಸ್, ಪುಷ್ಪ, ಪ್ರೇಮ, ಥಾವನ್ ಮುಂತಾದವರು [illegible]

ನಮೂನಾ

[illegible] "ನಮೂನಾ" ಚಿತ್ರದ [illegible] ರಂಭವನ್ನು ಅಂಧೇರಿಯ [illegible] ಎಂಡ್. ಟಿ. ಸ್ಟೂಡಿಯೋದಲ್ಲಿ ನೆರವೇರಿಸಿದರು. ಶ್ರೀಗಳಾದ ನಳಿನೀರಂಜನ್ [illegible] ಶಚೀರಂಜನ್ ಎಂಬವರು ನಿರ್ಮಾಪಕರು. ಶ್ರೀ ಶಚೀರಂಜನ್‌ರು ತಯಾರಿಕೆಯಲ್ಲಿ ಮುಖ್ಯಹೊಣೆಹೊತ್ತಿರುವರು. ಶ್ರೀ ಓರಾಸಿಂಗರು ನಿರ್ದೇಶಕರಾಗಿ [illegible]

ರಶಿಯದ ಚಿತ್ರಗಳು

[illegible]

ಇಸ್ಲಾಮಿ ರಾಷ್ಟ್ರಗಳಲ್ಲಿ ಅಲ್ಪಸಂಖ್ಯಾತರ ಪಾಡು

(೩ ನೇ ಪುಟದಿಂದ)

ಪ್ರವೇಶವಿಲ್ಲ. ವ್ಯಾಪಾರಿಗಳು ಕೂಡ ಕ್ರಿಶ್ಚನ್ನರನ್ನು ಕೆಲಸದಿಂದ ಹೊರಗೆ ಹಾಕಬೇಕೆಂದು ಒತ್ತಾಯಪಡಿಸಲಾಗುತಿದೆ. ಕ್ರಿಶ್ಚನ್ ಧರ್ಮಕ್ಕೆ ಹೊಸತಾಗಿ ಧರ್ಮಾಂತರ ಹೊಂದಿ[illegible] ಪಾದಂತೂ ಹೇಳಲಾಸಲ್ಲವೆಂದು ಅವರು ಹೇಳಿದರು. ಈ ಕ್ರಿಶ್ಚನ್ನರು ವಿದೇಶಿಯರಿರದೆ ಮುಸ್ಲಿಮರಿಗಿಂತಲೂ ಮೊದಲು ಇಜಿಪ್ತದಲ್ಲಿದ್ದ "ಕೋಪ್ಟ" ಪಂಥಾನುಯಾಯಿಗಳು. ಅವರ ರಾಷ್ಟ್ರಪ್ರೇಮ ನಿಸ್ಸಂದಿಗ್ಧವಾಗಿದೆ. ಅವರ ಸಂಖ್ಯೆಯೂ ೧೧ ಲಕ್ಷವಿದೆ. ಇಜಿಪ್ತದ ಒಟ್ಟು ಜನಸಂಖ್ಯೆ ೧೭೫ ಲಕ್ಷವಿರುವದರಿಂದ ಕ್ರಿಶ್ಚನ್ನರನ್ನು ಅಸ್ವಲ್ಪ ಸಂಖ್ಯಾಕರೆನ್ನಬರುವದಿಲ್ಲ. ನಾಹಸ ಪಾಶಾರ ವಫ್ದ ಪಕ್ಷದವರು ರಾಜಕಾರಣದಲ್ಲಿ ಧಾರ್ಮಿಕ ಪರಿಭೇದವಿರಕೂಡದೆಲ್ಲವೆಂದು ಬೋಧಿಸುತಿದ್ದರೂ ಈಚೆಗೆ ಅವರ ಅನುಯಾಯಿಗಳ ಬಲ ಕುಗ್ಗಿ "ಅಖಿಲ ಇಸ್ಲಾಮ"ದ ಹುಚ್ಚು ಇಜಿಪ್ತದಲ್ಲಿಯೂ ಉಚ್ಛ್ರಾಯಕ್ಕೆ ಬಂದಿದೆ. ಯಹೂದ್ಯರಂತೂ ಪಾಲಿಸ್ತಾನದ ಜಗಳ ಪ್ರಾರಂಭವಾದ ಮೇಲೆ ಪ್ರಾಣಭಯವಿಲ್ಲದೆ ಓಡಾಡುವಂತೆಯೆ ಇಲ್ಲ.

ಪಾಕಿಸ್ತಾನದಿಂದ ಹೊರ ಪಯಣ

ಈ ಉದಾಹರಣೆಗಳನ್ನು ಎಷ್ಟು ಬೇಕಾದರೂ ಬೆಳೆಸಬಹುದು. ಇಸ್ಲಾಮಿ ರಾಷ್ಟ್ರಗಳಲ್ಲಿ ಅವು ಸ್ವತಂತ್ರವಾದಂದಿನಿಂದ ಎಲ್ಲ ಅಲ್ಪಸಂಖ್ಯಾಕರ ಸ್ಥಿತಿಯು ಕೆಡುತ್ತ ಬಂದಿದೆ. ಯಹೂದ್ಯರಂತೂ ಇದಕ್ಕೆ ಮೊದಲನೆ ಆಹುತಿಗಳಾದರು. ಪಾಕಿಸ್ತಾನ ಸ್ಥಾಪನೆಯಾದೊಡನೆ ಅಲ್ಲಿಂದ ಹೆಚ್ಚು ಕಡಿಮೆ ಎಲ್ಲ ಹಿಂದೀ ಯಹೂದ್ಯರು ಹೊರಟುಹೋದುದು ಇಸ್ಲಾಮಿ ರಾಷ್ಟ್ರಗಳ ಬಗ್ಗೆ ಅವರಿಗಿರುವ ಭೀತಿಗೆ ತೀರ ಈಚೆಗಿನ ಉದಾಹರಣೆಯಾಗಿದೆ. ಇಂಥ ವಿಪನ್ನ ಪರಿಸ್ಥಿತಿಯಲ್ಲಿರುವ ಯಹೂದ್ಯ ಯುವಕರು ಪಾಲಿಸ್ತಾನವನ್ನು ಯಹೂದ್ಯ ರಾಜ್ಯವಾಗಿ ಮಾಡುವ ಛಲದಿಂದ ಪ್ರಾಣಕೊಡಲು ಸಿದ್ಧರಾಗುವದರಲ್ಲಿ ಆಶ್ಚರ್ಯವೇನಿದೆ?

ಹಿಟ್ಲರನಿಂದ ಪೀಡಿತರಾದ ಯುರೋಪಿನ ಯಹೂದ್ಯರೇ ಪಾಲಿಸ್ತಾನದಲ್ಲಿ ಮುಕುರುತಿದ್ದಾರೆಂಬ ಭ್ರಾಂತಿ ಅನೇಕರಿಗಿದೆ. ಆದರೆ ಬ್ಯಾಲಫೋರ ಘೋಷಣೆಯಾದಂದಿನಿಂದ ಸಿರಿಯಾದ ಯಹೂದ್ಯರಲ್ಲಿ ಅರ್ಧಕ್ಕರ್ಧ ಮತ್ತು ಯೆಮೆನದ ಯಹೂದ್ಯರಲ್ಲಿ ನೂರಕ್ಕೆ ೪೦ ರಷ್ಟು ಜನ ಪಾಲಿಸ್ತಾನಕ್ಕೆ ವಲಸೆ ಹೋದರು. ಇದಲ್ಲದೆ ತುರ್ಕಿ, ಇರಾಕ, ಇರಾಣ, ಉತ್ತರ ಆಫ್ರಿಕೆ ಮೊದಲಾದ ಇಸ್ಲಾಮಿ ಪ್ರದೇಶಗಳಿಂದ ಯಹೂದ್ಯರು ಬಗೆಬಗೆಯ ಉಪಾಯ ಹೂಡಿ ಪಾಲಿಸ್ತಾನಕ್ಕೆ ವಲಸೆ ಬರುತ್ತಿದ್ದರು. ಮುಸ್ಲಿಂ ಆಳಿಕೆಯಲ್ಲಿ ಎಲ್ಲಿಯೂ ಅವರಿಗೆ ಸ್ವಾಭಿಮಾನಪೂರ್ವಕ ಬಾಳುವದು ಅಸಾಧ್ಯವೆಂದೆನಿಸಿರಬೇಕು.

ಅಮೇರಿಕೆ ಬ್ರಿಟನ್ನುಗಳಲ್ಲಿ ಅನೇಕ ಯಹೂದ್ಯ ಪಕ್ಷಪಾತಿಗಳಿದ್ದಾರೆ. ವಿಚಿತ್ರವೆಂದರೆ ಅವರಲ್ಲಿ ಅಧಿಕಾಂಶ ಜನರು ಪ್ರಗತಿಶೀಲರು, ಶುದ್ಧ ಪ್ರಜಾತಂತ್ರವಾದಿಗಳು. ಅವರಲ್ಲಿ ಭಾರತದ ವಿಭಜನೆಯನ್ನು ವಿರೋಧಿಸಿದ ಸಿನೇಟರ ಪೆಲ್ಲರರಂಥವರೂ ಇದ್ದಾರೆ. ಅವರೇ ಪಾಲಿಸ್ತಾನದ ವಿಭಜನೆಯನ್ನು ಬೇಡಿ ಯಹೂದ್ಯ ರಾಜ್ಯ ಸ್ಥಾಪನೆ ಮಾಡಬೇಕೆಂದು ವಾದಿಸುವವರಲ್ಲಿ ಎಲ್ಲರಿಗಿಂತ ಮುಂದಾಗಿರುವದನ್ನು ನೋಡಿ ಅನೇಕರು ಆಶ್ಚರ್ಯಪಡಬಹುದು. ಆದರೆ ಅವರು ಮೇಲಿನ ಪರಿಸ್ಥಿತಿಯನ್ನರಿತೇ ಹೀಗೆ ಮಾತಾಡುತಿದ್ದಾರೆ. ಹಿಂದುಸ್ತಾನದ ವಿಭಜನೆಯ ಹಟಹಿಡಿದ ಪಾಕಿಸ್ತಾನಿಗಳು ಪಾಲಿಸ್ತಾನ ವಿಭಜನೆಯನ್ನು ವಿರೋಧಿಸಿದ್ದಕ್ಕಿಂತ ಇದೇನು ವಿಚಿತ್ರವಲ್ಲ.

[illegible]

ಕಾಶ್ಮೀರ ರಂಗದಲ್ಲಿ ಹಿಂದೀಯರ ಮೇಲ್ಮೆ

[illegible] ಗ್ರಾಮದಿಂದ [illegible] ಮುನ್ನುಗ್ಗಿ ಟಟ್ವಾಲ ಎಂಬ ನಗರವನ್ನು [illegible] ಪಿಸಿದೆ. ಟಟ್ವಾಲವು ದಾಳಿಗಾರರ [illegible] ಠಾಣ್ಯವಾದ ಮುಝಫರಾಬಾದದಿಂದ [illegible] ೧೪ ಮೈಲು ದೂರದಲ್ಲಿದೆ. ಉತ್ತರಕ್ಕೆ [illegible] ಕಡೆಗೆ ಮತ್ತು ಪಶ್ಚಿಮಕ್ಕೆ [illegible] ದಕ್ಕೆ ಹೋಗುವ ದಾರಿಗಳು ಸಂಧಿಸುವ [illegible] ಕಟ್ಟಿನ ಸ್ಥಳದಲ್ಲಿ ಈ ಟಟ್ವಾಲ ನಗರ [illegible]. ಇಲ್ಲಿ ಅಪಾರ ಮದ್ದು ಗುಂಡಿನ ಸಂಗ್ರಹ[illegible] ಜಪ್ತಮಾಡಲಾಯಿತು.

ಹಿಂದೀ ಸೈನಿಕರು ಹಿಂದೆವಾರದಿಂ[illegible]ಖವಾಗಿ ದಾಳಿ ನಡೆಸಿ ೨೫ ಮೈಲು [illegible] ಟಟ್ವಾಲವನ್ನು ಪ್ರವೇಶಿಸಿದರು.

ವಧೂವರ[illegible]

(೬ ನೇ ಪುಟದಿಂದ)

೪ ವಿದ್ಯೆ, ಉದ್ದೇಗಳು, ಉದ್ಯೋಗ, [illegible]ಮ್ಸು, ಗಳಿಕೆ ಮತ್ತು ಉಳಿಕೆ.

೫ ಸಾರ್ವಜನಿಕ ಚಟುವಟಿಕೆಗೆ [illegible] ಧರ್ಮಶ್ರದ್ಧೆ.

೬ ನಗರವಾಸಿಯೋ ಗ್ರಾಮ[illegible] ಎಂಬದರ ಉಲ್ಲೇಖ.

೭ ಎಷ್ಟನೆಯ ಮದುವೆ ಎಷ್ಟು [illegible] ಎಂಬ ಪ್ರಶ್ನೆ ಮತ್ತು ಗೆಳೆಯ ಗೆಳತಿಯರ ಸ್ಥೂಲ ವಿವರ.

೮ ತಾಯ್ತಂದೆಯರ ಅಸ್ತಿತ್ವ, ಅವರ ಪರಸ್ಪರ ಜೀವನದ ಸ್ಥೂಲ ಪರಿಚಯ ಮತ್ತು (ವಧು ಇಳಿವ ವರನ ಮೇಲೆ) ಅವರ ಅಧಿಕಾರ ಮತ್ತು ಪ್ರಭಾವ.

೯ ಮದುವೆಯ ಬಗ್ಗೆ ಅವರ ಅಭಿಪ್ರಾಯ.

೧೦ ಆಸಕ್ತಿ ಅಭಿರುಚಿಗಳು.

ವಧುವಿಗೆ ವಿಶೇಷ ಪ್ರಶ್ನೆ

(೧) ಆಸೆ ಅನುಕೂಲಗಳನ್ನು ಹೊಂದಿಸಿಕೊಳ್ಳುವ ಸಂಸ್ಕಾರದ ಪ್ರಮಾಣ.

(೨) ಗೃಹಕೃತ್ಯದ ಅನುಭವ.

ಅಪರಿಚಿತರು ಇಲ್ಲವೆ ಅಲ್ಪಪರಿಚಿ[illegible]ದ ಸಂಭಾವ್ಯ ವಧೂವರರು ಈ [illegible] ಪರಸ್ಪರ ಪರಿಚಯ [illegible] ನಾಗರಿಕ ಅನುಕೂಲತೆ, ಅಗ[illegible]ದ ಪೂರ್ವ ಸಿದ್ಧತೆಗಳ, ಗೌ[illegible] ಸಾಧನ.

ಅಂದವಾದ ಗಡಿಯಾರ

7¾"×11" ಸಾಯಿಜ ೧೫ ಜುವೆಲ್ಸ ರೋಲ್ಡ ಗೋಲ್ಡ ಬೆಂಟ ಕೇಸ ಜಜ್ಜು Rs. 85-0-0

ಗೋಲ ಅಥವಾ ಚೌಕ ಕೈಗೆ ಒಪ್ಪುವ ಕ್ರೋಮು ಗಡಿಯಾರ Rs. 30-0-0

"ಇಂಗರಸೋಲ" ಟೈಂಪೀಸು ದೊಡ್ಡದು (೪೦ ತಾಸಿಗೊಮ್ಮೆ ಕೀಲಿ ಕೊಡುವದೂ.) Rs. 24-0-0

"Westclock" ಪಾಕೆಟ ವಾಚು Rs. 25-0-0

"ಪಾರ್ಕರ" ಮೆಜರ ವೈ ಕುಮೆಟೆಕ ಫೌಂಟೆನಪೆನ್ನು [illegible]

ಈಗಲ್ ಪೆನ್ನು [illegible]

ಎಸ್. ಎಲ್. ಧಾರಪ್ಪ & ಸನ್ಸ, [illegible] (ಕೆನರಾ)

[illegible] ಮಜದೂರ ಕಾಂಗ್ರೆಸ್ಸಿ[illegible]

ಪ್ರಾತಿನಿಧಿಕ

ಭಾರತ ಸರಕಾರದ ತೀರ್ಮಾನ

ಹಿಂದಿನ ಬಾರಿ ಈ ವಿಭಾಗದಲ್ಲಿ ಸೂಚಿಸಿ [illegible] ಸರಕಾರವು ರಾಷ್ಟ್ರೀಯ ಮಜದೂರ ಕಾಂಗ್ರೆಸ್ಸೆ [illegible] ಪ್ರಾತಿನಿಧಿಕವೆಂಬ ನಿರ್ಣಯಕ್ಕೆ ಬಂದಿದೆ. ಹೀಗೆ ಈ ವರೆಗೆ ಅ. ಭಾ. ಟ್ರೇಡ ಯೂನಿಯನ್ ಕಾಂಗ್ರೆಸ್ಸು ಹೊತ್ತಿದ್ದ ಹಿಂದೀ ಕೂಲಿಕಾರರ ಅದ್ವಿತೀಯ ಸಂಘವೆಂಬ ಬಿರುದನ್ನು ಅದಿಂದು ರಾಷ್ಟ್ರೀಯ ಮಜದೂರ ಕಾಂಗ್ರೆಸ್ಸಿಗೆ ಬಿಟ್ಟುಕೊಡಬೇಕಾಯಿತು. ಅದನ್ನನುಸರಿಸಿ ಜೂನ ೧೭ ಕ್ಕೆ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಸೇರಲಿರುವ ಅಂತರ್ ರಾಷ್ಟ್ರೀಯ ಕೂಲಿಕಾರ ಪರಿಷತ್ತಿಗೆ ಮಜದೂರ ಕಾಂಗ್ರೆಸ್ಸಿನ ಪ್ರತಿನಿಧಿಗಳೇ ಹೋಗುವರು. ಸಂಯುಕ್ತ ಪ್ರಾಂತದ ಮಂತ್ರಿಗಳಾದ ಸಂಪೂರ್ಣಾನಂದರೇ ಮಜದೂರ ಕಾಂಗ್ರೆಸ್ಸಿನಿಂದ ಈ ಬಗ್ಗೆ ಆರಿಸಲ್ಪಡಬಹುದು. ಹಿಂದಿನ ಬಾರಿ ಇಂಥ ಸಮ್ಮೇಲನಕ್ಕೆ ಶ್ರೀ. ಎಸ್. ಎ. ಡಾಂಗೆ ಮೊದಲಾದವರು ಹೋಗಿದ್ದರು. ಆಗ ಅವರು ಸಾಕಷ್ಟು ಕಮ್ಯುನಿಸ್ಟ ಪ್ರಚಾರವನ್ನು ಮಾಡಿದ್ದರು.

* * *

ರಾಷ್ಟ್ರೀಯ ಮಜದೂರ ಕಾಂಗ್ರೆಸ್ಸಿನ ಉಚ್ಛ್ರಾಯವೆಲ್ಲ ಕಾಂಗ್ರೆಸ್ ಸರಕಾರಗಳ ಕೈವಾಡದಿಂದ ಸಾಧ್ಯವಾಯಿತೆಂದು ಕಮ್ಯುನಿಸ್ಟರೂ ಸಾಮ್ಯವಾದಿಗಳೂ ದೂರುತ್ತಾರೆ. ಈ ಮಾತನ್ನು ಪೂರ್ಣ ಅಲ್ಲಗಳೆಯುವದು ಸಾಧ್ಯವಿಲ್ಲ. ಆದರೆ "ಇಂಡಿಯನ್ ಸೋಶಿಯಲ್ ರಿಫಾರ್ಮರ" ಪತ್ರಿಕೆ ಬರೆದಂತೆ ಪ್ರತಿಯೊಂದು ಪಕ್ಷದ ಸರಕಾರವೂ ತನ್ನ ಪಕ್ಷವನ್ನು ಬಲಗೊಳಿಸಲೆಂದೇ ಪ್ರಯತ್ನಿಸುತ್ತದೆ. ಇದಕ್ಕೆ ವಿರೋಧಪಡುತ್ತಿರುವ ಸಾಮ್ಯವಾದಿಗಳೂ ಸರಕಾರವನ್ನು ವಶಪಡಿಸಿಕೊಂಡು ಕೂಲಿಕಾರ ಹಿತ ಸಾಧಿಸಬೇಕೆನ್ನುವರು. ಅಂದ ಮೇಲೆ ಕಾಂಗ್ರೆಸ್ ಸರಕಾರಗಳು ಮಜದೂರ ಕಾಂಗ್ರೆಸ್ಸಿಗೆ ಬೆಂಬಲವಿತ್ತರೆ ಅಂಥ ಅಪರಾಧವೇನೂ ಅಲ್ಲ. ಇದಲ್ಲದೆ ಈಚೆಗೆ ಕೂಲಿಕಾರರು ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಕಮ್ಯುನಿಸ್ಟ ವಾತಾವರಣಕ್ಕೆ ರೋಸಿ ಹೋಗಿ ಬೇರೆ ಪಕ್ಷಗಳ ಕಡೆ ಸರಿಯುತ್ತಿರುವದು ಕಂಡು ಬರುತ್ತದೆ. ಪೆರಂಬೂರಿನಲ್ಲಿ ನಡೆದ ಎಂ. ಎಸ್. ಎಂ. ರೇಲ್ವೆ ಕೂಲಿಕಾರ ಸಮ್ಮೇಲನದಲ್ಲಿ ಕಮ್ಯುನಿಸ್ಟರು ಮುಗ್ಗು ಮುಕ್ಕಿ ಮಜದೂರ ಕಾಂಗ್ರೆಸ್ಸಿಗೆ ಜಯ ಸಿಕ್ಕಿದ್ದು ಇತ್ತೀಚೆಗಿನ ಉದಾಹರಣೆ. ಸೌತ್ ಇಂಡಿಯನ್ ರೇಲ್ವೆಯ ಎಂಜಿನ ಡ್ರೈವರ ಮೊದಲಾದವರು ಕಮ್ಯುನಿಸ್ಟ ಪ್ರಚೋದನೆಯಿಂದ ಹೂಡಿದ ಸಂಪು ನಿರರ್ಥಕವಾಗಿ ಅವರೀಗ ಕೆಲಸಕ್ಕೆ ಮರುಳುತಿರುವದು ಕಮ್ಯುನಿಸ್ಟರನ್ನು ಆ ರೇಲ್ವೆಯ ಕೂಲಿಕಾರ ಸಂಘದಿಂದಲೂ ಉಚ್ಚಾಟನೆ ಮಾಡಲು ಕಾರಣವಾಗಬಹುದು.

* * *

ಯುದ್ಧ ಕಾಲದಲ್ಲಿ ಬ್ರಿಟಿಶರೊಡನೆ ಮಾಡಿಕೊಂಡ ದೇಶಘಾತಕ ಸಂಧಿಯ ಬಲದಿಂದ ತಾವು ಕೂಲಿಕಾರರಲ್ಲಿ ಗಳಿಸಿದ್ದ ಪ್ರತಿಷ್ಠೆ ಮಾಯವಾಗುತಿರುವದನ್ನು ನೋಡಿ ಕಮ್ಯುನಿಸ್ಟರೀಗ ಅರಾಜಕತೆಯನ್ನು ಹಬ್ಬಿಸಲು ಹಿಂಸಾಚಾರವನ್ನುಪಯೋಗಿಸುತಿದ್ದಾರೆ. ಉತ್ತರ ಮಲಬಾರಿನಲ್ಲಿಯೂ ದಕ್ಷಿಣ ಕನ್ನಡದ ದಕ್ಷಿಣಭಾಗದಲ್ಲಿಯೂ ಅವರು ಕೂಟಯುದ್ಧ ಚಟುವಟಿಕೆಗಳನ್ನೇ ನಡೆಸಿದ್ದಾರೆ. ಮಲಬಾರಿನಲ್ಲಿ ಅವರು ಪೋಲೀಸರೊಡನೆ ಯುದ್ಧವನ್ನೇ ಮಾಡಿದರು. ದಕ್ಷಿಣ ಕನ್ನಡದ ಶ್ರೀ ಹೊಳ್ಳರನ್ನು ಪೋಲೀಸರು ಬಂಧಿಸಿ ಒಯ್ಯುತಿದ್ದಾಗ ಮುಂಜೇಶ್ವರದಲ್ಲಿ ಕಮ್ಯುನಿಸ್ಟ ಜನಜಂಗುಳಿ ರೇಲ್ವೆಯ ಮೇಲೆ ದಾಳಿಮಾಡಿ ಅವರನ್ನು ಬಿಡಿಸಿಕೊಂಡು ಹೋಯಿತು. ಕಾಯದೆ ಸುವ್ಯವಸ್ಥೆಗಳೆಂದರೆ ಕಮ್ಯುನಿಸ್ಟರಿಗೆ ಯಾವಾಗಲೂ ಕುಪದಾರ್ಥಗಳೇ ಆಗಿದ್ದವು. ಶಾಂತವಾತಾವರಣದಲ್ಲಿ ತಮ್ಮ ಬೇಳೆ ಬೇಯುವದು ಕಠಿಣವೆಂದು ಅವರಿಗೆ ಗೊತ್ತು. ಅರಾಜಕತೆಯೇ ಅವರ ಆದರ್ಶಗೆಳೆಯ. ದೇಶದಲ್ಲಿರುವ ವಿಪನ್ನ ಪರಿಸ್ಥಿತಿಯಿಂದ ಕಂಗೆಟ್ಟ ಜನಸಾಮಾನ್ಯರನ್ನು ಅವರು ತಾತ್ಕಾಲಿಕವಾಗಿ ಆಕರ್ಷಿಸಬಹುದು. ಆದರೆ ಅದರಿಂದ ಜನರ ಕಂಗಾಲ್ತನ ಇನ್ನೂ ಹೆಚ್ಚುವದಲ್ಲದೆ ಸುಧಾರಿಸದು. ಕಮ್ಯುನಿಸ್ಟರು ಈಗಿರುವ ಭಾರತವನ್ನು ಕೆಡಹಿ ತಿರುಗಿ ಕಟ್ಟಬೇಕಾದರೆ ಇನ್ನು ಕನಿಷ್ಠ ೨೫ ವರ್ಷಬೇಕು. ಅವರು ತೋರಿಸುವ ಸ್ವರ್ಗಸುಖ ನಿಜವಾಗಿ ಬರುವದೇ ಆದರೂ ಅದಕ್ಕಿಂತ ಮೊದಲು ಕಾಲು ಶತಮಾನದ ಯಮಯಾತನೆಗೆ ಜನರು ಒಳಗಾಗಬೇಕು. ಶಾಂತ ವಾತಾವರಣವಿದ್ದರೆ ಜನರ ಪರಿಸ್ಥಿತಿ ತಾನಾಗಿ ಸುಧಾರಿಸುವದು. ಆದ್ದರಿಂದ ಬಡಬಗ್ಗ ಕೂಲಿಕಾರರು ಮುಂದಿನ ಜನ್ಮದ ಸುಖಕ್ಕಾಗಿ ಈ ಜನ್ಮದಲ್ಲಿ ಧಾರಣೆ ಪಾರಣೆ ಮಾಡುವವರಂತೆ ೨೫ ವರ್ಷದ ನಂತರದ ಸಂಶಯಾಸ್ಪದ ಸುಖ ಸಂತೋಷಕ್ಕಾಗಿ ಇಂದು ಕಷ್ಟ ನಿಷ್ಠುರಗಳನ್ನನುಭವಿಸಲು ಸಿದ್ಧರಾಗಲಾರರು.

ನೇಯಿಗೆಯ ಶಿಕ್ಷಣ

ಸೊಲ್ಲಾಪುರದಲ್ಲಿ ಸರಕಾರದ ಯೋಜನೆ

ಮುಂಬಯಿ ಸರಕಾರವು ೧೯೪೬ ರಿಂದ ಸೊಲ್ಲಾಪುರದಲ್ಲಿ ಪಾವರಲೂಮಿನ ಮುಖಾಂತರ ನೇಯುಗೆಯನ್ನು ಕಲಿಸುವ ಸಂಸ್ಥೆಯನ್ನು [illegible] ಒಂದೇ [illegible] ಪ್ರಾಯೋಗಿಕ ಶಿಕ್ಷಣವನ್ನು ಬೌದ್ಧಿಕ ಶಿಕ್ಷಣವನ್ನು ಕೊಡುವ ಏರ್ಪಾಡಿರುವದಲ್ಲದೆ, ಬಣ್ಣ ಹಾಕುವದು, ಹುಳುವುಗಳನ್ನು ಹಾಕುವದು, ಇವೇ ಮೊದಲಾದವುಗಳ ಬಗ್ಗೆಯೂ ಶಿಕ್ಷಣ ಕೊಡಲಾಗುವದು. ಈ ಶಿಕ್ಷಣ ಪಡೆದವರು ಸ್ವತಂತ್ರವಾಗಿ ತಮ್ಮದೇ ಸಣ್ಣ ಕಾರಖಾನೆಯನ್ನು ಹಾಕಿ ನಡೆಯಿಸಿಕೊಳ್ಳಬಹುದು ಅಥವಾ ಯಾವದೇ ಬಟ್ಟೆಯ ಗಿರಣಿಯಲ್ಲಿ, ಜಾಬರ ಸುಪರವಾಯಿಜರರಾಗಿ ನೌಕರಿಯ [illegible] ಸೇರಿಸಿಕೊಳ್ಳಬಹುದು.

ಪ್ರತಿ ವರ್ಷ ೩೦ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶವಿದೆ. ಶಿಕ್ಷಣದ ಅವಧಿ ಒಂದು ವರ್ಷ. ಮರಾಠಿಯ ಮುಖಾಂತರ ಶಿಕ್ಷಣ ಕೊಡಲಾಗುವದು. ಫೀ ಕೊಡುವ ಅವಶ್ಯವಿಲ್ಲ. ಯೋಗ್ಯ [illegible]ಗಳಿಗೆ ಪ್ರತಿ ತಿಂಗಳಿಗೆ ೧೦ ರೂ. ಗಳಂತೆ ೬ ವಿದ್ಯಾರ್ಥಿವೇತನ ಕೊಡುವವ್ಯವಸ್ಥೆಯಿದೆ.

ಈ ಸಂಸ್ಥೆಯು ಜೂನ ೭ ನೇ ತಾ. ರಿಂದ [illegible]. ಇದರ ಪ್ರಯೋ[illegible] ಸುಪರಿಂಟೆಂಡೆಂಟ ಪಾವರಲೂಮ ವೀವ್ಹಿಂಗ ಇನ್‌ಸ್ಟಿಟ್ಯೂಟ, ಖಜೀನದಾರ ಬಿಲ್ಡಿಂಗ, ಸಿದ್ಧೇಶ್ವರಪೇಠ ಸೊಲ್ಲಾಪೂರ.

ಹಿಂದುಸ್ತಾನ ಪಾಕಿಸ್ತಾನಗಳ ಒಪ್ಪಂದ

ಕರಾಚಿಯಲ್ಲಿ ಸೇರಿದ ಹಿಂದುಸ್ತಾನ ಪಾಕಿಸ್ತಾನ ಪರಿಷತ್ತಿನಲ್ಲಿ ಅವಶ್ಯಕ ಸರಕುಗಳ ಪೂರೈಕೆಯ ಬಗ್ಗೆ ಅಲ್ಪಾವಧಿ ಒಪ್ಪಂದಕ್ಕೆ ಹಿಂದುಸ್ತಾನ ಪಾಕಿಸ್ತಾನಗಳು ತಾ.೨೬ಕ್ಕೆ ಸಹಿ ಹಾಕಿದವು. ೧೯೪೮ ರ ಜುಲೈ ೧ ರಿಂದ ಒಂದು ವರ್ಷದ ವರೆಗೆ ಒಪ್ಪಂದದ ಅವಧಿ ಇರುವದು.

ಈ ಒಪ್ಪಂದದ ಮೇರೆಗೆ ಇದ್ದಲಿ, ಬಟ್ಟೆ, ಕಾಗದ, ತೊಗಲು, ವಾರ್ನಿಶ್ ಮುಂತಾದ ಆವಶ್ಯಕ ಸಾಮಾನುಗಳನ್ನು ಹಿಂದುಸ್ತಾನವು ಪೂರೈಸತಕ್ಕದ್ದೆಂದೂ ಇದಕ್ಕೆ ಪ್ರತಿಯಾಗಿ ಪಾಕಿಸ್ತಾನವು ಹಿಂದುಸ್ತಾನಕ್ಕೆ ಕಚ್ಚಾ ಸಣಬು, ಕಚ್ಚಾ ಅರಳೆ, ಆಹಾರ ಧಾನ್ಯ ಇವೇ ಮೊದಲಾದ ಪದಾರ್ಥಗಳನ್ನು ಪೂರೈಸತಕ್ಕದ್ದೆಂದೂ ಗೊತ್ತಾಗಿದೆ. ಈ ಒಪ್ಪಂದಕ್ಕೆ ಎರಡೂ ಸರಕಾರಗಳು ಒಪ್ಪಿಗೆ ಕೊಡಬೇಕಾಗಿದೆ.

ಅಖಿಲ ಭಾರತ ಕಲಾ ಪರಿಷತ್ತು

ಹೊರಸೇ ಅ. ಭಾ. ಕಲಾ ಪರಿಷತ್ತು ಮುಂಬಯಿಯಲ್ಲಿ ಜೂನ ೧೯ ಕ್ಕೆ ಸೇರಲಿದೆ ಭಾವೀ ಅ. ಭಾ. ಸರಕಾರಿ ಕಲಾ ಸಂಘದ ಬಗ್ಗೆ ಈ ಅಧಿವೇಶನದಲ್ಲಿ ಚರ್ಚಿಸಲಾಗುವದು. ಸರಕಾರಕ್ಕೆ ಕಲೆಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿ ಸಲಹೆ ಕೊಡುವದು ಸಂಚಾರೀ ಪ್ರದರ್ಶನಗಳನ್ನೇರ್ಪಡಿಸುವದೇ ಮೊದಲಾದ ಉದ್ದೇಶಪೂರ್ತಿಗಾಗಿ ಈ ಸಂಘ ಕೆಲಸ ಮಾಡುವದು.

ಈ ಅಧಿವೇಶನಕ್ಕೆ ಅಸಾಮು ಗವರ್ನರರಾದ ಸರ ಅಕಬರ ಹೈದರಿ, ಆಧುನಿಕ ಭಾರತೀಯ ಚಿತ್ರಕಲೆಯ ಜನಕ[illegible] ಡಾ. ಅವನೀಂದ್ರನಾಥ ಠಾಕೂರ, ವಿಶ್ವಭಾರತಿಯ ಕಲಾಭವನದ ಪ್ರಿನ್ಸಿಪಾಲರಾದ ಶ್ರೀ ನಂದಲಾಲ ಬೋಸ, ಶ್ರೀ ಎಂ. ಆರ್. ಜಯಕರ ಮೊದಲಾದವರು [illegible] ಮುಂಬಯಿಯ ಮುಖ್ಯ ಮಂತ್ರಿಗಳಾದ ಶ್ರೀ ಬಿ. ಜಿ. ಖೇರರು ಅದನ್ನು ಉದ್ಘಾಟಿಸಲಿರುವರು.

ಸಂಸ್ಥಾನಗಳ ನಿವೃತ್ತಿ

ಸರದಾರ ಪಟೇಲರ ೫ ತಿಂಗಳ ಕಾರ್ಯ

ಜನೇವರಿ ೧ ರಿಂದ ಮೇ ೨೮ ರವರೆಗೆ ಸರದಾರ ಪಟೇಲರ ಕೌಶಲದ ಪರಿಣಾಮವಾಗಿ ಎಷ್ಟೋ ಹಿಂದೀ ಸಂಸ್ಥಾನಗಳು ಲೀನವಾದವು, ಉಳಿದೆಷ್ಟೋ ಒಕ್ಕೂಟ ರಚಿಸಿಕೊಂಡವು. ಅವುಗಳ ವಿವರವನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಲೀನವಾದ ಸಂಸ್ಥಾನಗಳು

ಹೆಸರು	ಸಂಖ್ಯೆ	ವಿಸ್ತಾರ ಚ. ಮೈಲು	ಜನಸಂಖ್ಯೆ
೧. ಓಡಿಸಾ ಪ್ರಾಂತದಲ್ಲಿ ಆಯಗಡ, ಅಯಮಲ್ಲಿಕ, ಬಾಮರಾ, ಬಾರಾಕಬಾ, ಢೇನಕನಲ, ಹಸಪಲ್ಲಾ, ಗಂಗಾಪುರ, ಹಿಂಡೋಲ, ಕಾಕಾಹಾಡಿ, ಖರಸಾವನ, ಖಾಂಡಪಾರಾ, ನರಸಿಂಹಪುರ, ನಯಾಗಡ, ನೀಲಗಿರಿ, ಪಾಲಹಾರಾ, ಪಟನಾ, ರಾಮರಾಖಾಯಿ, ರಾನಪುರ, ಸರಕಲಾ, ಸೋನಪುರ, ತಾಲಚರ, ಟಿಗಕೇಖಾ, ಸಾನಪುರ, ತಾಲಚಿ, ಟಿನರಿಯಾ.	೨೫	೧೮೦೦೦	೪೦.೫೫,೮೦೦
೨. ಮಧ್ಯಪ್ರಾಂತ-ವರ್ಹಾಡದಲ್ಲಿ ಬಸ್ತರ, ಜಾಸಪುರ, ಕಂಕೇರ, ಚಂಗಭಕರ, ಕವರ್ಧಾ, ಖೈರಾಗಡ, ಕೋರಿಯಾ, ನಂದಗಾವ, ರಾಯಗಡ, ಸಾಕತೀ, ಸಾರನಗಡ, ಸುರಗುಜಾ, ಉದಯಪುರ, ಮಕರಾಯ, ರಿಯಾ.	೧೫	೩೮೧೫೧	೪೦,೭೪,೦೦೦
೩. ಪೂರ್ವ ಪಂಜಾಬದಲ್ಲಿ ಲೋಹಾರೂ	೧	೨೨೬	೨೮,೦೦೦
೪. ಮದ್ರಾಸ ಪ್ರಾಂತದಲ್ಲಿ ಬಂಗನಪಳ್ಳಿ, ಪುದುಕೋಟೆ	೨	೧೪೪೪	೪,೮೩,೦೦೦
೫. ಮುಂಬಯಿ ಪ್ರಾಂತದಲ್ಲಿ ಅಕ್ಕಲಕೋಟೆ, ಔಂಧ, ಕುರಂದವಾಡ (ಹಿರಿ ಮತ್ತು ಕಿರಿ), ಭೋರ, ಸಾವಂತವಾಡಿ, ಜಂಜೀರ, ಮಿರಜ (ಹಿರಿ ಮತ್ತು ಕಿರಿ), ಜಮಖಂಡಿ, ಜತ್, ಮುಧೋಳ, ಫಲ್ಟನ, ರಾಮದುರ್ಗ, ಸಾಂಗಲಿ, ಸವಣೂರ, ಬಲನೌರ, ಬಾಸಡಾ, ಬರಿಯಾ, ಖಂಭಾತ ಛೋಟಾ, ಉದಯಪುರ ಜೋಹರ, ಲೂವಾವಡಾ, ವಮಪುರ, ರಾಜಪಿಪ್ಪಲ, ಸಾಚಿನ, ಸಂತ, ಇಕರ, ರಾಜಪುರ, ವಿಜಯನಗರ ದಾತಾ, ಪಾಲನಪುರ, ಸೋರೋಹಿ ಮತ್ತು ಗುಜರಾತದ ಜಾಗಿರಿ ಹಾಗು ತಾಲೂಕುದಾರಿಗಳು.	೩೦೫	೩೪೮೮೪	೪೩,೧೭,೦೦೦
೬. ಹಿಮಾಚಲ ಪ್ರದೇಶವೆಂಬ ಹೊಸ ಪ್ರಾಂತದಲ್ಲಿ ವಾಘುಲ, ವಾಘುಸಾಟ, ಬಲಸನ, ಬುಶಹ, ಭುಜ್ಜಿ, ಬೀಜಾ, ದರಕೋಟ, ಧಾಮಿ, ಜಭಲ, ಕಲಸಿಯಾ, ಕೆವುಂಥಲ, ಕುಮಾರಸೇನ, ಕುನಿಹರ, ಕುಥರ, ಮಂಗಲ, ಮೆಹಲೋಗ, ನಾಲಾಗಡ, ಸಗರಿ, ಸಿರಮುರ, ಥೋರೋಚ, ಮಂಡಿ, ಸುಕೇತ ಚಂಬಾ.	೨೪	೧೧೨೫೪	೧೦,೪೬,೦೦೦

ಒಕ್ಕೂಟ ರಚಿಸಿಕೊಂಡ ಸಂಸ್ಥಾನಗಳು

ಹೆಸರು	ಸಂಖ್ಯೆ	ವಿಸ್ತಾರ ಚ. ಮೈಲು	ಜನಸಂಖ್ಯೆ
೧. ಸೌರಾಷ್ಟ್ರ ಒಕ್ಕೂಟ ನವಾನಗರ, ಭಾವನಗರ, ಪೋರಬಂದರ, ಧರಂಗಧರಾ, ಮೋರವಿ ಗೊಂಡಲ, ಜಫರಾಬಾದ, ಬಿಕಾನೇರ, ಪಲಿತಾನಾ, ಧರೋಲ, ಲಿವಡಿ, ರಾಜಕೋಟ, ಬಧವನ, ಲಖತರ, ಖಯಾಲಾ, ಚೂಡಾ ವಾಲಾ, ಜಸಾದಾನ, ಅಮರನಗರ, ಥಾನಾ, ದೇವಲಿ, ವಾದಿಯಾ, ಲಾಥಿ, ಮೀಲಾ, ಬಾಜಾನಾ, ವೀರಪುರ, ಮೋಲಿಯಾ, ಕೋಟಾ ಸಂಗಾನಿ, ಜತ್ತುರ, ಜಿಲಖಾ, ಪಟ್ಟೀ ಇತ್ಯಾದಿ.	೪೪೯	೩೧೯೪೬	೩೫,೦೯,೦೦೦
೨. ಮತ್ಸ್ಯ ಒಕ್ಕೂಟ ಅಲ್ವಾರ, ಭರತಪುರ, ಧೋಲಪುರ, ಕರೋಲಿ.	೪	೭೫೩೬	೧೮,೩೮,೦೦೦
೩. ರಾಜಸ್ಥಾನ ಒಕ್ಕೂಟ ಬಾಂಸವಾಡಾ, ಬುಂದಿ, ಡೂಂಗರಪುರ, ಝಾಲಾವಾರ, ಕಿಶನಗಡ, ಕೋಟಾ, ಪ್ರತಾಪಗಡ, ಶಾಹಪುರ, ಟೋಕ.	೯	೧೬೮೦೭	೨೩,೫೪,೦೦೦
೪. ವಿಂಧ್ಯ ಪ್ರದೇಶ ಒಕ್ಕೂಟ ಅಜಯಗಡ, ಬಾವನಿ, ಬರಾಂಧಾ, ಬೀಜಾವರ, ಛತ್ರಪುರ, ಚರಾವಾರಿ, ದತಿಯಾನೆಹೆರ, ಮಗೋದ, ಓರಛಾ, ಪನ್ನಾ, ರೇವಾ, ಸಮಥರ, ಅಲೀಪುರ, ಬಾಕಾ, ಪಹಾಡಿ, ಬೇಲಿ, ಭಾಯಿಸೌರ, ವೀಹಟ, ಬಿಜನಾ, ಧುರವಾಯಿ, ಗರೀಲಿ, ಗೌರೀಹರ, ಜಾಸೊ, ಜಿಗನಿ, ಕಾಂತಾ, ರೇಕೋಲ, ಖನಿಯಾಧಾನಾ, ಕೋಠಿ, ಲಗಾಸಿ, ನಯೇಗಾವನ, ರೇವಾಹ, ಪಹರಾ, ಪಲದೇವ, ನಯಾಗಾಂವ, ಸರೀಲಾ, ತರಾಬ, ಸೋಹಾವಾಲ, ತೋರಿ, ಫತೇಪುರ.	೩೫	೨೪೫೯೮	೩೫,೬೯,೦೦೦
೫. ಪೂರ್ವ ಪಂಜಾಬ ಒಕ್ಕೂಟ ಪತಿಯಾಲಾ, ಕಪುರಥಲಾ, ನಾಭಾ, ಜಿಂದ, ಫರೀದಕೋಟ, ಮಾಲೇರಕೋಟಲಾ, ನಾಲಗಡ, ಕಲ್ಸಿಯಾ.	೮	೧೦೦೦೦	೩೫,೦೦,೦೦೦
೬. ಮಧ್ಯ ಭಾರತ ಒಕ್ಕೂಟ ಗವಾಲಿಯರ, ಇಂದೂರ, ಧಾರ, ಖಿಲಚಿಪುರ ಇತ್ಯಾದಿ ಮಾಲವಾ ಸಂಸ್ಥಾನಗಳು	೨೨	೪೬೦೦೦	೭೩,೦೦,೦೦೦

ಕರ್ನಾಟಕ

ಧಾರವಾಡ

ಹುಬ್ಬಳ್ಳಿ ಅಂಜುಮನ್ ತರಕ್ಕಿಯೇ ಉರ್ದುವಿನ ಸಾಧಾರಣ ಸಭೆ ಜನಾಬ ಅಹಮ ಸಾಹೇಬ ಜಮಾದಾರ ಪ್ರಿನ್ಸಿಪಾಲ ಇಸ್ಲಾಮಿಯಾ ಅಂಗ್ಲೋ ಉರ್ದು ಹಾಯಸ್ಕೂಲ ಬೆಳಗಾವ ಇವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಗಾಂಧೀಜಿಯ ನಿಧನದ ಬಗ್ಗೆ ದುಃಖ ವ್ಯಕ್ತಪಡಿಸಲ್ಪಟ್ಟ ನಂತರ ಹುಬ್ಬಳ್ಳಿ ಮುನಿಸಿಪಾಲಿಟಿ ಶಾಲೆಗಳಲ್ಲಿ ಈಗಿದ್ದ ಉರ್ದು ಕನ್ನಡ ಬದಲು ಕನ್ನಡ ಉರ್ದು ಮಾಡಬಾರದು, ಮದ್ರಾಸ ಸರಕಾರದಂತೆ ಮುಂಬಯಿ ಸರಕಾರವೂ ಹಿಂದುಸ್ಥಾನಿಯೇ ರಾಷ್ಟ್ರಭಾಷೆ ದೇವನಾಗರಿ ಮತ್ತು ಉರ್ದು ರಾಷ್ಟ್ರಲಿಪಿಯಾಗಿರಬೇಕೆಂಬ ಧೋರಣ ಸ್ವೀಕರಿಸಬೇಕೆಂದೂ ಕೇಳಿಕೊಳ್ಳಲಾಯಿತು.

ಧಾರವಾಡ ಜಿಲ್ಲಾ ಕಾಂಗ್ರೆಸ ಸಮಿತಿಯ ಸಭೆ ಸೇರಿ ಅಥಾವೆ ಪತ್ರಿಕೆ ವರದಿಗಳು ಸ್ವೀಕೃತವಾದವು. ಶ್ರೀ ಗುಡ್ಲೆಪ್ಪ ಹಳ್ಳಿಕೇರಿಯವರೇ ಮತ್ತೆ ಸರ್ವಾನುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಬಿ. ಬಿ. ಕಲ್ಲಾ ಇವರು ಪ್ರಧಾನ ಕಾರ್ಯದರ್ಶಿಗಳು. ಹೈದರಾಬಾದ ಪರಿಸ್ಥಿತಿಯ ಬಗ್ಗೆ ವಿಚಾರವಾಗಿ ಗಡಿ ಪ್ರದೇಶದಲ್ಲಿಯ ಜನರಿಗೆ ಯುದ್ಧ ಶಿಕ್ಷಣ ಕೊಡಬೇಕೆಂದು ಕೇಳಿಕೊಳ್ಳಲಾಯಿತು. ಜೋಗ ವಿದ್ಯುಚ್ಛಕ್ತಿಯನ್ನು ತರಬೇಕೆಂದು ಸರಕಾರಕ್ಕೆ ಬಿನ್ನವಿಸಿಕೊಳ್ಳಲಾಯಿತು.

ಧಾರವಾಡ ಜಿಲ್ಲಾ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿ ಜೂನ ೧೮ ರ ವರೆಗೆ ಒಟ್ಟಿಗೆ ೫೪೪೮-೫-೯ ಕೂಡಿದೆಯೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಹುಬ್ಬಳ್ಳಿಯಲ್ಲಿ ಕಳೆದ ಅಕ್ಟೋಬರದಲ್ಲಿ ಅಬ್ದುಲ್‌ಕರೀಮ ಎಂಬವನನ್ನು ಸಣ್ಣಮಲ್ಲೇಶಿ ರಾಯಪ್ಪ ಚಾಕಲಬ್ಬಿ ಹಾಗು ಗಂಗಪ್ಪ ಬಸಪ್ಪ ಇವರು ಕಟ್ಟಿಗಿಯಿಂದ ಹೊಡೆದದ್ದರಿಂದ ಅವನು ಮರಣ ಹೊಂದಿದ್ದನಷ್ಟೆ ಆ ಬಗ್ಗೆ ಖಟ್ಲೆ ನಡೆದು ಜಿಲ್ಲಾ ನ್ಯಾಯಾಧೀಶರು ಸಣ್ಣಮಲ್ಲೇಶಿಗೆ ೫ ವರ್ಷ ಕಠಿನ ಶಿಕ್ಷೆ ಕೊಟ್ಟು ೨ ನೇ ಆರೋಪಿ ಅವನಿಗೆ ಸಹಾಯ ಮಾಡಿದ್ದು ಸಿದ್ಧವಾಗದ್ದರಿಂದ ಅವನ ಬಿಡುಗಡೆ ಮಾಡಿದರು.

ಕುರ್ತಕೋಟಿಯ ಶ್ರೀ ರಾಯನಗೌಡರು ತಮ್ಮ ಹಾಗು ತಮ್ಮ ಮೈಲಾರಗೌಡರ ಮಕ್ಕಳ ಮುಂಜವಿ ನಿಮಿತ್ತ ಗ್ರಾಮೋದ್ಧಾರ ಸಮಿತಿಯಿಂದ ಸ್ಥಾಪಿತವಾದ ಹಳ್ಳಿ ದವಾಖಾನೆಗೆ ೫೦೦ ರೂ. ಕಾಣಿಕೆ ಕೊಟ್ಟರು. ವಟುಗಳ ಮೆರವಣಿಗೆಯನ್ನು ಹಳ್ಳಿಯ ಹೆಮ್ಮೆಯ ಕುರುಹಾದ ಹಳೆ ಬಂಡಿಯ ಮೇಲೆಯೆ! ಅವರು ತೆಗೆದಿದ್ದರು.

ಕರ್ನಾಟಕ ಏಕೀಕರಣ ಕ್ರಿಯಾ ಸಮಿತಿಯ ಸಭೆ ೧೪ ನೇ ತಾರೀಕು ಮಧ್ಯಾಹ್ನ ೩ ಗಂಟೆಗೆ ಹುಬ್ಬಳ್ಳಿಯಲ್ಲಿ ಮಹಾ ಸಮಿತಿಯ ಕಚೇರಿಯಲ್ಲಿ ಕೂಡುವದು. ಕಾರ್ಯದ ವರದಿ, ಮಹಾಸಮಿತಿಯ ಘಟನೆಯ ಸ್ವೀಕಾರ ಭಾಷಾನ್ವಯ ಪ್ರಾಂತರಚನೆಯ ಬಗ್ಗೆ ರಾಜೇಂದ್ರಪ್ರಸಾದರ ಸಮಿತಿಯ ಪರಿಶೀಲನೆ ಮೈಸೂರು ಸಮಿತಿಯ ಕಾರ್ಯದ ಪರಿಶೀಲನೆ ಮೊದಲಾದ್ದು ನಡೆಯುವದು.

ಹುಬ್ಬಳ್ಳಿಯಲ್ಲಿ ರೇಲ್ವೆ ಕೆಲಸಗಾರರ ವತಿಯಿಂದ ಮತ್ತು ನಾಗರಿಕರ ವತಿಯಿಂದ ೩೧ ನೇ ತಾರೀಕು ರಾತ್ರಿ ದುರ್ಗದ ಬಯಲಿನಲ್ಲಿ ಶ್ರೀ. ಶಂಭೂರಾವ ಜೋಶಿ ವಕೀಲರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿದ್ದಿತು. ಆಹಾರ ಧಾನ್ಯಗಳ ಧಾರಣೆಗಳು ಮಿತಿಮೀರಿ ಏರಿದ್ದನ್ನು ವಿಚಾರಿಸುವದೆ ಸಭೆಯ ಮುಖ್ಯ ಉದ್ದೇಶವಾಗಿದ್ದಿತು. ಶ್ರೀ. ವಿ. ಎನ್ ನಾರಾಯಣನ್, ನಗರ, ಎಂ. ಎಚ್. ಕುಲಕರ್ಣಿಯವರು ಮಾತಾಡಿದ ಬಳಿಕ, ವ್ಯಾಪಾರಸ್ಥರ ಬದಿಯಲ್ಲಿದ್ದ ಸಂಗ್ರಹವನ್ನು ಸರಕಾರದವರು ವಶಪಡಿಸಿಕೊಂಡು ಬಡವರಲ್ಲಿ ಹಂಚಬೇಕೆಂಬ ಗೊತ್ತುವಳಿ ಸರ್ವಾನುಮತದಿಂದ ಸ್ವೀಕೃತವಾಯಿತು.

ಧಾರವಾಡದಲ್ಲಿಯ ಶ್ರೀ. ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಯ ಅಧ್ಯಾಪಕರ ಕಳೆದ ವರ್ಷದ ಸಂಬಳ ನಿಧಿಗೆ ಕೆಲ ಮಹನೀಯರಿಂದ ೮೧೩ ರೂಪಾಯಿಗಳು ಕೂಡಿದ್ದು ಸಂಘವು ಹಣ ಕೊಟ್ಟವರಿಗೆಲ್ಲ ಕೃತಜ್ಞತೆಯನ್ನು ಸಲ್ಲಿಸಿದೆ.

ನಿಡಗುಂದಿಯ ಹತ್ತರ ಗಡಿಗೆ ಹೊಂದಿರುವ ಹೈದ್ರಾಬಾದ ಸಂಸ್ಥಾನದ ಕರಮುಡಿ ಗ್ರಾಮದಲ್ಲಿ ೨೩ ಕ್ಕೆ ೧೨ ಜನ ಪೋಲೀಸರು ಮಾಧವರಾವ ದೇಸಾಯಿ ಇವರ ಮನೆ ನುಗ್ಗಿ ಗೊಂದಲ ಹಾಕಿದ್ದಲ್ಲದೆ ಅವರ ಕಮತಿಗ ಮರಿಗನೆಡನನ್ನು ಹೊಡೆದು ಮನೆಯಲ್ಲಿಯ ಗೋದಿ ಒಯ್ದಿರುತ್ತಾರೆ. ಮಾಧವರಾಯರು ಕಾಂಗ್ರೆಸ್ಸಿಗರಿಗೆ ಸಹಾಯ ಮಾಡಿದ್ದರೆಂಬ ವರದಿ ಕಾರಣವಂತೆ.

ವಿಜಾಪೂರ

ವಿಜಾಪೂರದ ವಿಜಯ ಕಾಲೇಜಿಗೆ ತೊರವಿಯ ಶ್ರೀ ಶಿವಪ್ಪನವರು ಬಗಲಿ ಇವರು ೫೦೦೧ ರೂ. ಕೊಡುವ ವಾಗ್ದಾನ ಮಾಡಿ ೧೦೦೧ ರೂ. ಕೊಟ್ಟಿದ್ದರು. ಆದರೆ ಅವರು ಆಕಸ್ಮಾತ್ ತೀರಿಕೊಂಡದ್ದರಿಂದ ಅವರ ಪತ್ನಿ ಸುಂದರಾಬಾಯಿ ಮತ್ತು ದತ್ತಕಪುತ್ರ ಸಿದ್ದನಗವಡ ಇವರು ಶ್ರೀ ಶಿವಯೋಗಿಗಳ ಸನ್ನಿಧಿಯಲ್ಲಿ ಉಳಿದ ೪೦೦೦ ರೂ. ಗಳನ್ನು ಕೊಟ್ಟರು.

ಹುನ್ನೂರಲ್ಲಿ ೨೫ ಕ್ಕೆ ಶ್ರೀ ಗುರುಪಾದಪ್ಪ ಹನಗಂಡಿ ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಫೆಬ್ರುಅರಿಯಿಂದ ಜಮಖಂಡಿ ಸಂಸ್ಥಾನಕ್ಕೆ ನೂಲಿನ ಕೋಟಾ ಬಂದಿಲ್ಲ, ೧೦೦ ಕ್ಕೆ ೨೦ ರಷ್ಟು ನೂಲು ಕೈಮಗ್ಗದವರಿಗೆ ಕೊಡಬೇಕೆಂಬುದೂ ಚಾರಿಯಲ್ಲಿ ಬಂದಿಲ್ಲ ಇವೆರಡನ್ನೂ ಕೂಡಲೆ ಜಾರಿಯಲ್ಲಿ ತಂದು ನೂಲನ್ನು ಒದವಿಸಬೇಕು ಮೊದಲಾದ ಗೊತ್ತುವಳಿ ಸ್ವೀಕೃತವಾದವು.

೨೮ ನೇ ತಾರೀಕಿಗೆ ಬಿಸಕೊಟಗಿಯಲ್ಲಿ ಬೆಂಕಿಯ ಅನಾಹುತ ಸಂಭವಿಸಿಲಮಾಣಿ ತಾಂಡೆಯ ೨೭ ಗುಡಿಸಲುಗಳು ಸುಟ್ಟು ೬-೭ ಸಾವಿರ ರೂಪಾಯಿ ಹಾನಿಯಾಗಿದೆಯಲ್ಲದೆ ೭ ವರ್ಷದ ಹುಡಿಗೆಯೊಂದು ಹಾಗು ೩ ಕುರಿಗಳು ಸತ್ತವು.

೨೯ ಕ್ಕೆ ಬೈಸೊರ ಅಡವೆಯಲ್ಲಿ ಮೊಗಲಾಯಿ ಪುಂಡರು ೪೦೦ ರೂಪಾಯಿ ಬೆಲೆ ಬಾಳುವ ಒಂದು ಎತ್ತನ್ನು ಗುಂಡಿಕ್ಕಿ ಕೊಂದರು.

ಗುಡೂರಲ್ಲಿಯ ಮುಸಲ್ಮಾನರು ಸಭೆಸೇರಿ ಒಕ್ಕೂಟ ಸರಕಾರಕ್ಕೆ ತಮ್ಮ ನಿಷ್ಠೆ ವ್ಯಕ್ತಪಡಿಸಿದ್ದಲ್ಲದೆ ಹೈದ್ರಾಬಾದ ಸಂಸ್ಥಾನದಲ್ಲಿ ಈಗ ನಡೆದಿರುವ ರಜಾಕಾರರ ದಬ್ಬಾಳಿಕೆ ಅತಿಕ್ರೂರ ಹಾಗು ಹೇಯವಾಗಿದೆಯೆಂದು ಖಂಡಿಸಿರುವರು. ಪ್ರಜಾರಾಜ್ಯದಲ್ಲಿಯೆ ತಮ್ಮ ನಂಬಿಗೆಯಿದ್ದುದನ್ನು ಅಲ್ಲಿ ವ್ಯಕ್ತಮಾಡಿ ಹೈದ್ರಾಬಾದ ಸಂಸ್ಥಾನ ಒಕ್ಕೂಟದಲ್ಲಿ ಸೇರಬೇಕೆಂದು ಕೇಳಿಕೊಳ್ಳಲಾಯಿತು.

ದಕ್ಷಿಣ ಕನ್ನಡ

ಮಂಗಳೂರ ಥಿಯಾಸಾಫಿಕಲ್ ಸೊಸಾಯಿಟಿಯ ನೇತೃತ್ವದಲ್ಲಿ ೨೭ ಕ್ಕೆ ಬುದ್ಧದಿನಾಚರಣೆ ನಡೆಯಿತು. ರಾಮಕೃಷ್ಣ ಮಠದ ವಿಮಲಾನಂದಜಿಯವರು ಅಧ್ಯಕ್ಷತೆ ವಹಿಸಿದ್ದರು. ಡಾ. ಸಿ. ಆರ್. ಕಾಮತರು ಬುದ್ಧನ ಜೀವನ ಹಾಗು ತತ್ವಗಳನ್ನು ಪ್ರತಿಪಾದಿಸಿದರು.

ಮಂಗಳೂರಿನ ಬೋಳಾರದಲ್ಲಿರುವ ಮಾರಿಗುಡಿಯಲ್ಲಿ ಇದೇ ತಾ. ೨೮ರಿಂದ ಕೋಳಿ, ಕುರಿ, ಹಂದಿ ಮುಂತಾದ ಪ್ರಾಣಿ ಬಲಿ ಕೊಡುವದನ್ನು ನಿಲ್ಲಿಸಲಾಗಿದೆ. ಈ ಬಗ್ಗೆ ವೆಚ್ಚ ಮಾಡುತಿದ್ದ ಭಕ್ತರು ಹಣವನ್ನು ಭಂಡಾರಕ್ಕೆ ಒಪ್ಪಿಸಬೇಕೆಂದು ಬಿನ್ನವಿಸಲಾಗಿದೆ.

೨೧ ರಿಂದ ಮಂಗಳೂರು ತೇರು ಬೀದಿಯ ಒಂದು ಅಟ್ಟದಲ್ಲಿ ರೊಕ್ಕ ಹಚ್ಚಿ ಇಸ್ಪೀಟು ಆಡುತಿದ್ದನೆಂದು ಪೋಲೀಸರಿಂದ ಬಂಧಿಸಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟ ಸುಜೀರ ನರಸಿಂಹ ವೆಂಕಟೇಶ ನಾಯಕರಿಗೆ ೭೫ ರೂ. ಉಳಿದ ೮ ಜನರಿಗೆ ತಲಾ ೨೫ ರೂ. ದಂಡ ವಿಧಿಸಲಾಯಿತು. ಜೂಜುಗಾರರನ್ನು ಪತ್ತೆ ಹಚ್ಚಿದ್ದಕ್ಕಾಗಿ ಪೋಲೀಸ ಇನಸ್ಪೆಕ್ಟರ ಕೆ.ಪಿ. ಅಚ್ಯುತ ಅಯ್ಯರರಿಗೆ ೫೦ ರೂಪಾಯಿ ಬಹುಮಾನ ಕೊಡಬೇಕೆಂದು ಮ್ಯಾಜಿಸ್ಟ್ರೇಟರು ಉಲ್ಲೇಖಿಸಿರುವರು.

ದರೆಗಡ್ಡೆ ಬೋ. ಎ. ಶಾಲಾ ವಾರ್ಷಿಕ ಹೆತ್ತವರ ಕೂಟವೂ ಮಕ್ಕಳ ಹಬ್ಬವೂ ಕಳೆದ ೨೨ ನೇ ತಾರೀಕಿಗೆ ಕಾರ್ಕಳ ರೇಂಜ ಶಾಲಾ ಡೆ. ಇ. ಶ್ರೀ ದೇಜು ಉಜ್ವಲ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಶಾಲಾ ಮಕ್ಕಳ ಚಿಕ್ಕ ಚಿಕ್ಕ ಪ್ರಹಸನ ಭಾಷಣ ಇತ್ಯಾದಿಗಳು ಮನೋರಂಜಕವಾಗಿದ್ದವು.

ಹರಿಹರದಲ್ಲಿ ಅಮಲದಾರರ ಮನೆಯ ಬಳಿಯಲ್ಲಿರುವ ೨ ಬೇವಿನ ಮರಗಳಲ್ಲಿ ಒಂದರಲ್ಲಿ ಹಾಲು ಸುರಿಯುತಿದ್ದು ಜನರು ಬಂದು ಹಣ್ಣುಕಾಯಿ ಮಾಡಿಸಿಕೊಂಡು ಹೋಗುತಿರುವರು.

ಬೆಳಗಾವಿ

ಮಿರಜಿ ಪರಿಹಾರ ಸಲಹೆ ಸಮಿತಿಯು ಮಿರಜಿ ಆಡಳಿತಾಧಿಕಾರಿಗಳಾದ ಶ್ರೀ ಬಿ.ಡಿ.ಮುಜಾವರ ಇವರ ಅಧ್ಯಕ್ಷತೆಯಲ್ಲಿ ಸೇರಿ ೨೩ ಸಂತ್ರಸ್ತರ ಪ್ರಕರಣಗಳನ್ನು ಪರಿಶೀಲಿಸಿ ೬೩೩೧ ರೂಪಾಯಿಗಳನ್ನು ಪರಿಹಾರ ಧನವೆಂದೂ ೮೫ ಸಾವಿರ ರೂಪಾಯಿಗಳನ್ನು ಸಾಲವೆಂದು ಮಂಜೂರ ಮಾಡಿತು. ಪ್ರತಿ ಸೋಮವಾರ ಹಾಗು ಗುರುವಾರ ಸಮಿತಿಯು ಸಭೆ ಸೇರುವದು.

ಖಾನಾಪುರದಲ್ಲಿ ಕರ್ನಾಟಕ ಸಮಾಜವಾದಿ ಪಕ್ಷದ ೨ ನೆಯ ಸಮ್ಮೇಲನ ಶ್ರೀ ತಿರುಮಲರಾಯರ ಅಧ್ಯಕ್ಷತೆಯಲ್ಲಿ ಕಳೆದ ೨೬.೨೭ ಕ್ಕೆ ಸೇರಿತ್ತು. ಜಯಪ್ರಕಾಶ ನಾರಾಯಣರು ಸಮ್ಮೇಲನವನ್ನು ಪ್ರಾರಂಭಿಸಿದರು. ಸಮಾಜವಾದಿ ಧುರೀಣರು ಭಾಷಣ ಮಾಡಿದರು. ಮುಂಬಯಿ ಸರಕಾರದ ಸಾರ್ವಜನಿಕ ಸಂರಕ್ಷಣೆ ಕಾಯದೆಯನ್ನು ವಿರೋಧಿಸುವ, ಗರುಡಶರ್ಮರ ಮೇಲೆ ಹಾಕಿದ ಗಡಿಪಾರು ಆಜ್ಞೆಯನ್ನು ರದ್ದುಪಡಿಸಬೇಕೆನ್ನುವ, ಕರ್ನಾಟಕ ಏಕೀಕರಣಕ್ಕೆ ಬೆಂಬಲವೀಯುವ ಗೊತ್ತುವಳಿಗಳು ಸ್ವೀಕೃತವಾದವು.

ಸಾಂಗಲಿ, ವಾಡಿ ಮತ್ತು ಮಿರಜಿಯ ೧೫೭ ಸಂತ್ರಸ್ತರಿಗೆ ಈ ವರೆಗೆ ೧೯೯೭೦೦ ರೂಪಾಯಿ ಪರಿಹಾರ ಕೊಡಲಾಗಿದೆ. ಈ ಪ್ರದೇಶದಲ್ಲಿ ೧೪೩ ಸಂತ್ರಸ್ತರಿಗೆ ೭೮೬೧೫೦ ರೂ. ಸಾಲ ಕೊಡಲಾಗಿದೆ.

ಖಾನಾಪುರ ತಾಲೂಕಿನ ತೆರಗುಳಿಯ ಬಡಕುರುಬನ್ನಾಗಡಿ ಇವನಿಗೆ ಖಾನಾಪುರದ ಪೋಲೀಸ ಬಸನಗೌಡ ಶಿವನಗೌಡ ಪಾಟೀಲ ಮತ್ತು ಶಿರೋಲಿ ಪೋಲೀಸ ಪಾಟೀಲ ಹಾಗು ದಾಖಲ್ಯಾ ಸನದಿ ಮೊದಲಾದವರು ಕೂಡಿ ಬೆದರಿಸಿ ೧೫೦ ರೂ. ಲಂಚ ತೆಗೆದುಕೊಂಡಿರುತ್ತಾರೆಂದು ಖಟ್ಲೆ ನಡೆದಿತ್ತು. ಆದರೆ ಅ. ಸೆಶನ್ಸ ಜಜ್ಜರು ಆರೋಪಿಗಳನ್ನು ನಿರ್ದೋಷಿಗಳೆಂದು ಬಿಡುಗಡೆ ಮಾಡಿದರು.

ಹೈದರಾಬಾದ ಸಮತಾವಾದಿ ಪಕ್ಷದ ಕಾರ್ಯದರ್ಶಿ ಶ್ರೀ ಎಸ್. ಜಿ. ಮಹಾದೇವಸಿಂಗರು ಬೆಳಗಾವಿಯಲ್ಲಿ ಮಾತಾಡುತ್ತಾ ಹಿಂದುಸ್ತಾನವು ತಮಗೆ ಶಸ್ತ್ರಾಸ್ತ್ರಗಳನ್ನು ಪೂರಯಿಸಿದರೆ ಹೈದರಾಬಾದದ ಇತಿಶ್ರೀಯನ್ನು ಮಾಡಿ ಬಿಡುವದಾಗಿ ಹೇಳಿದರು. ಸಂಸ್ಥಾನದಲ್ಲಿ ೨ ಲಕ್ಷ ರಜಾಕಾರರಿದ್ದು ೨೫ ಸಾವಿರ ಜನರಿಗೆ ಶಸ್ತ್ರಾಸ್ತ್ರಗಳನ್ನು ಪೂರಯಿಸಲಾಗಿದೆ. ನಿಜಾಮ ಸೈನಿಕರ ಸಂಖ್ಯೆ ೨೫ ಸಾವಿರ ಇದೆ ಎಂದೂ ಅವರು ಹೇಳಿದರು.

ಉತ್ತರ ಕನ್ನಡ

ರೈತರು ಮುಂಬಯಿಯ ತುಂಬಾ ವಹಗಳಲ್ಲಿ ಭಾಗವಹಿಸಿ ರಾಜಸತ್ತೆಯನ್ನು ಪಡೆಯಕೊಳ್ಳಬೇಕು ಎಂದು ಮುಂಬಯಿ ಕಾಂಗ್ರೆಸ ಮುಖಂಡರೂ ಭಾರತ ಸೇವಕ ಸಂಘದ ಸದಸ್ಯರೂ ಆಗಿರುವ ಶ್ರೀ. ದಿನಕರ ದೇಸಾಯಿಯವರು ಕಾರವಾರ ಜಿಲ್ಲೆಯ ರೈತ ಪರಿಷತ್ತಿನಲ್ಲಿ ಮಾತನಾಡುತ್ತ ಹೇಳಿದರು. ಜಿಲ್ಲಾ ರೈತ ಧುರೀಣರಾದ ಹೊನ್ನಪ್ಪ ನಾಯಕರು ಅಧ್ಯಕ್ಷತೆ ವಹಿಸಿದ್ದರು. ಸಮಾಜವಾದಿ ಪಂಥದ ಪರವಾಗಿ ಪರಿಷತ್ತು ಸೇರಿದ್ದಿತು. ಬೆವರು ಸುರಿಸುವವರೆ ಭೂಒಡೆಯರಾಗುವದು ಅವಶ್ಯವಿದ್ದರೆ ಕಾನೂನು ಮಾಡಿದ ಭೂಮಿಯ ಒಡೆಯರಾಗುವಂತೆ ಮುಂಬಯಿ ಸರಕಾರದ ಪಂಚವಾರ್ಷಿಕ ಯೋಜನೆಯೊಂದನ್ನು ಮಾಡಲೇ ಬೇಕೆಂದು ಕೇಳಿಕೊಳ್ಳಲಾಯಿತು.

ಕ್ಯಾನರಾ ಕಾಲೇಜ ಸೊಸಾಯಿಟಿಯವರು ೧೯೪೫ ಮೇ ದಿಂದ ಈ ವರೆಗೆ ಆದ ಕಾರ್ಯದ ವರದಿಯನ್ನು ಪ್ರಸಿದ್ಧಿಸಿದ್ದಾರೆ. ವಸೂಲು ಬಂದ ನಿಧಿ ೧೦೯೫೦೦ ರೂ. ಬಿಲ್ಡಿಂಗ ಕಟ್ಟಡ ಕಟ್ಟುವದು ಪ್ರಾರಂಭವಾಗಿದೆ.

ಬಳ್ಳಾರಿ

ನಾರಾಯಣ ದೇವರ ಕೆರೆ ಗ್ರೂಪ ಕಾಂಗ್ರೆಸ ಸಮಿತಿಗೆ ಶ್ರೀ ವಾರಣಾಶಿ ನಾರಾಯಣರು ಅಧ್ಯಕ್ಷರಾಗಿಯೂ ಶ್ರೀ ಅಕ್ಕಿ ಲಕ್ಷ್ಮೀನಾರಾಯಣಾಚಾರ್ಯರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ.

ತಾ. ೨೨ ರಿಂದ ೨೪ ರ ವರೆಗೆ ಸೋಮಲಾಪುರ ನಾಗಲಾಪುರ ಕೆರೆವಳ್ಳಿ ಕೊಸಗನಳ್ಳಿ ಎಳಂಜಿ ಮತ್ತು ಸುತ್ತು ಮುತ್ತಲಿನ ಮುಂತಾದ ಗ್ರಾಮಗಳನ್ನು ಸಂದರ್ಶಿಸಿ ಪ್ರಚಾರಕಾರ್ಯ ಮಾಡಲಾಯಿತು. ಈ ಹಳ್ಳಿಗಳಲ್ಲಿ ಕನ್ನಡವೇ ಪ್ರಚಾರದಲ್ಲಿದ್ದು ಕನ್ನಡ ನಾಡಿನಲ್ಲಿಯೆ ಸೇರಬೇಕೆಂಬ ಹಂಬಲ ಇಲ್ಲಿಯ ಜನರಿಗೆ ಹೆಚ್ಚಾಗಿ ಇದೆ.

ಕನ್ನಡ ಸಂಸ್ಥಾನ

ಉಡುಪಿಯ ಪುತ್ತಿಗೆ ಮಠಾಧೀಶರಾದ ಶ್ರೀ ಸುಜ್ಞಾನೇಂದ್ರತೀರ್ಥ ಶ್ರೀಪಾದಂಗಳು ಶಿವಮೊಗ್ಗೆಯ ಕರ್ನಾಟಕ ಸಂಘದಲ್ಲಿ ಕಳೆದ ವಾರ ಭಾಷಣ ಮಾಡುತ್ತ ಭಾರತದ ಹಿರಿಮೆಯ ದೃಷ್ಟಿಯಿಂದ ಸಂಸ್ಕೃತವೆ ಭಾರತದ ರಾಜಭಾಷೆ ಮತ್ತು ರಾಷ್ಟ್ರಭಾಷೆಯಾಗಬೇಕೆಂದೂ ಅದು ಸುಲಭವಾಗಿದ್ದು ೫-೬ ತಿಂಗಳುಗಳಲ್ಲಿ ಅದರ ಸಾಧಾರಣ ಜ್ಞಾನ ಸಂಪಾದಿಸಬಹುದೆಂದೂ ಹೇಳಿದರು.

TRADE MARK I.T.L.

ಪ್ರಸಿದ್ಧ ಐ. ಟಿ. ಎಲ್. ಔಷಧಗಳು

ಪ್ರಖ್ಯಾತ ಡಾಕ್ಟರು ಮತ್ತು ರಸಾಯನಿಕ ವಿಜ್ಞಾನಿಗಳಿಂದ ತಯಾರಿಸಿದ ಅನುಭವಸಿದ್ಧ ಔಷಧಗಳು

೧. ಗ್ರಾಯಿಪ ವಾಯಿರಪ— ಮಕ್ಕಳ ಅಪಚನ, ಹಲ್ಲು ಬರುವಾಗ ಆಗುವ ಭೇದಿ, ವಾಂತಿ, ಕೆಮ್ಮು ಇವುಗಳಿಗೆ ಫಲಕಾರಿ.
೨. ಅಸ್ಥಮಲಿನ್— ದಮ್ಮಿನ ಮತ್ತು ಪುಪ್ಪಸ ಈ ವಿಕಾರಗಳನ್ನು ಶಮನ ಮಾಡಿ ಪೂರ್ಣ ಗುಣಪಡಿಸುವ ರಸಾಯನ.
೩. ಸಿಯಾಂಕ್ಯೋ— ನೆಗಡಿ, ಥಂಡಿಜ್ವರ, ಇನ್‌ಫ್ಲುಯೆಂಜಾ ಇವುಗಳಿಗೆ ಅಪ್ರತಿಮ ಔಷಧ.
೪. ಲೈಸಾಲ್— ಉತ್ತಮ ಕ್ರಿಮಿನಾಶಕ ದ್ರಾವಕ. ದನಗಳ ಉಣ್ಣೆಗಳನ್ನು ಮತ್ತು ತಗಣೆಗಳನ್ನು ನಾಶಪಡಿಸುತ್ತದೆ.
೫. ಸೆಡಾಟಿನ್— ಹೆಂಗಸರ ಮುಟ್ಟಿನದೋಷ, ಗರ್ಭರೋಗ ಮತ್ತು ಇತರ ಶೂಲೆಗಳಿಗೆ ಉತ್ತಮ ಔಷಧ.
೬. ಸಾಮ್ನಿಟಾಲ್— ತಲೆ ನೋವು, ವಾತ, ಜ್ವರದ ತಾಪ, ಮೈನೋವು ಇವುಗಳನ್ನು ಕೆಲವು ನಿಮಿಷಗಳಲ್ಲಿ ಹೋಗಲಾಡಿಸುವ ಮಾತ್ರೆಗಳು.
೭. ವಿಟೋಫೆರಿನ್— ಜೀವನ ಸತ್ವ ಕಬ್ಬಿಣ ಇತರ ಖನಿಜ ಮಿಶ್ರವಾದ ರುಚಿಕರವಾದ ಶಕ್ತಿವರ್ಧಕ.
೮. ಮಾಲ್ಟೋಲ್ಯಾಕ್ಸ— ಮಲಬದ್ಧತೆಗೆ ಉತ್ತಮ. ರುಚಿಕರವಾದ ಮಿಶ್ರಣ.
೯. ಸಾರ್ಸಾಪರಿಲಾ— ಎಲ್ಲಾ ತರದ ರಕ್ತ ಶುದ್ಧಿಯನ್ನು ಮಾಡುವ ರಕ್ತದೋಷಾಂತಕ.

ಎಲ್ಲಾ ಔಷಧಿ ಅಂಗಡಿಗಳಲ್ಲಿ ದೊರೆಯುತ್ತದೆ

ತಯಾರಕರು:---
ಮೈಸೂರ ಇಂಡಸ್ಟ್ರಿಯಲ್ & ಟೆಸ್ಟಿಂಗ್ ಲೆಬೊರೇಟರಿ, ಲಿ. ಬೆಂಗಳೂರ

ಮಾರಾಟದ ಏಜಂಟರು— } ದಿ ಕರ್ನಾಟಕ & ಡೆಕ್ಕನ ಏಜನ್ಸೀಜ, ಹುಬ್ಬಳ್ಳಿ

ಹಿಂದುಸ್ತಾನ

ಮುಂಬಯಿ

ಸಾರಂಗಪೂರದ ಮಾಣಿಕಲಾಲ ಹರಿಲಾಲ ಕಾರಖಾನೆಯಲ್ಲಿ ಅರಳೆ ಹಿಂಜುವ ಕೋಣೆಯಲ್ಲಿ ಬೆಂಕಿ ಹತ್ತಿ ೫೦ ಸಾವಿರ ರೂಪಾಯಿ ಹಾನಿ ತಟ್ಟಿದೆ.

ಗಾಣಗಾಪೂರದ ನಿಲ್ದಾಣದ ಅತ್ಯಾಚಾರಗಳನ್ನು ಮುಚ್ಚಿಕೊಳ್ಳಲು ನಿಜಾಂ ಸರಕಾರವು ಹೊರಡಿಸಿದ ಪ್ರಕಟನೆಯು ಸುಳ್ಳಿನ ಕಂತೆಯೆಂದು ಸಿದ್ಧಗೊಳಿಸುವ ಸಂಗತಿಗಳನ್ನು ಮುಂಬಯಿ ಸರಕಾರವು ಸಂಗ್ರಹಿಸಿರುವ ಬಗ್ಗೆ ಸರಕಾರಿ ಪ್ರಕಟನೆ ಹೊರಟಿದೆ.

ಹಿಂದುಸ್ತಾನ ಸರಕಾರದ ಜವಳಿ ಕಮಿಶನರರು ಒಂದು ಪ್ರಕಟನೆ ಹೊರಡಿಸಿ ಮುಂಬಯಿಂದ ಜವಳಿಯನ್ನು ಬೇರೆ ಕಡೆಗೆ ಕಳಿಸುವ ಬಗ್ಗೆ ಅಪ್ಪಣೆ ಚೀಟಿ ಪಡೆಯಲು ಕೊಡಬೇಕಾದ ಅರ್ಜಿಯ ಮೂರು ಪ್ರತಿಗಳನ್ನು ಸಾದರ ಪಡಿಸುವ ಹೊಸ ಆಜ್ಞೆಯು ಜೂನ ೭ ರಿಂದ ಜಾರಿಯಲ್ಲಿ ಬರುವದೆಂದು ಸಾರಿದ್ದಾರೆ.

ಕರ್ನಾಟಕದವರಾದ ಶ್ರೀ. ನಾಡಿಗ ಕೃಷ್ಣಮೂರ್ತಿಯವರು ಕೊಲಂಬಿಯಾ ವಿಶ್ವವಿದ್ಯಾಲಯದ ಪತ್ರಿಕಾವ್ಯವಸಾಯದ ಎಂ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರೆಂದು ತಂತಿ ಬಂದಿದೆ.

೧೭ ಗುಜರಾತ ಸಂಸ್ಥಾನಗಳ ವಿಲೀನೀಕರಣದ ಪರಿಣಾಮವಾಗಿ ಮುಂಬಯಿ ಪ್ರಾಂತದಲ್ಲಿ ರಾಧನಪುರ ಮತ್ತು ಪಾಲನಪುರ ಎಂಬ ಎರಡು ಜಿಲ್ಹೆಗಳನ್ನು ಹೊಸದಾಗಿ ರಚಿಸಲಾಗುವವೆಂದು ಗುಜರಾತ ಪ್ರಾಂತಿಕ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾದ ಶ್ರೀ. ಕನ್ನಯ್ಯಾಲಾಲ ದೇಸಾಯಿಯವರು ತಾ. ೨೮ಕ್ಕೆ ಸುರತದಲ್ಲಿ ಹೇಳಿದರು.

ಜಪಾನಿ ವಾಣಿಜ್ಯ ಶಿಷ್ಟಮಂಡಳವು ಮುಂಬಯಿಯಲ್ಲಿ ಹದಿನೈದು ದಿನಗಳ ವರೆಗೆ ವಾಸವಾಗಿತ್ತು. ಆ ಮಂಡಳದವರು ೩ ಕೋಟಿ ರೂ. ಬೆಲೆಯ ೮೫ ಸಾವಿರ ಬೇಲು ಅರಳೆಯನ್ನು ಕೊಂಡರಾಗಿ ತಿಳಿಯುತ್ತದೆ.

ಮದ್ರಾಸ

ಹೊಸಘಟನೆಯ ಮೇರೆಗೆ ನಡೆವ ಚುನಾವಣೆಗಾಗಿ ಮದ್ರಾಸ ಸರಕಾರವು ಪ್ರಾಂತದಲ್ಲಿ ಚುನಾವಣೆ ಕಮಿಶನರರನ್ನು ನೇಮಿಸಲು ನಿರ್ಧರಿಸಿದೆ. ಮತದಾನ ಪದ್ಧತಿಯು ಘೋಷಿಸಲ್ಪಟ್ಟ ಕೂಡಲೆ ಚುನಾವಣೆಯ ಕೆಲಸ ಪ್ರಾರಂಭವಾಗುವದು.

ಮದ್ರಾಸ ಸರಕಾರವು ಮಂತ್ರಿಗಳ ಹಾಗೂ ಅಧಿಕಾರಿಗಳ ಸಂಚಾರದ ಅನುಕೂಲತೆಗಾಗಿ ೩।। ಲಕ್ಷ ರೂಪಾಯಿ ಕೊಟ್ಟು ಒಂದು ವಿಮಾನವನ್ನು ಇಂಗ್ಲಂಡದಿಂದ ಕೊಂಡಿದೆ. ಈ ವಿಮಾನಕ್ಕೆ ಹಣಮಂತ ಎಂದು ಹೆಸರಿಡಲಾಗಿದೆ.

ಮದ್ರಾಸ ಪ್ರಾಂತದಲ್ಲಿಯ ೯೮ ಕಮ್ಯುನಿಸ್ಟರು ತಮ್ಮ ಮೇಲಿನ ವಾರಂಟನ್ನು ತಪ್ಪಿಸಿಕೊಂಡು ತಿರುಗುತ್ತಿದ್ದಾರೆ. ಈ ಪ್ರಾಂತದ ಸಾರ್ವಜನಿಕರು ಇವರಿಗೆ ಆಶ್ರಯಕೊಡಕೂಡದೆಂದು ಮದ್ರಾಸ ಸರಕಾರವು ಪ್ರಕಟನೆ ಹೊರಡಿಸಿದೆ. ಈ ಆರೋಪಿಗಳ ಹೆಸರುಗಳನ್ನು ಪ್ರಕಟಿಸಲಾಗಿದೆ. ಇವರಲ್ಲಿ ಶ್ರೀಗಳಾದ ಕೆ. ಆನಂದ ನಂಬಿಯಾರ, ಪಿ. ವೆಂಕಟೇಶ್ವರಲು (ಎಂ. ಎಲ್. ಎ.) ಎಂ. ಕಲ್ಯಾಣಸುಂದರಂ ಈ. ಎ. ಶಂಕರನ್ ನಂಬೂದ್ರಿಪಾದ, ಕೆ. ಸಿ. ಗೋಪಾಲನ್ ಇವರು ಪ್ರಮುಖರಾಗಿದ್ದಾರೆ.

ಸಮಿಪದಲ್ಲಿ ಸೇರಿದ ಪಿಲ್ಲುಪುರಂ ಎರೋಡ ಮತ್ತು ತ್ರಿಚನಾಪಳ್ಳಿ ಜಂಕ್ಶನ್‌ಗಳಲ್ಲಿ ಅನೇಕ ಡ್ರಾಯವ್ಹರ ಮತ್ತು ಫಾಯರಮನ್ನರು ಕೆಲಸಕ್ಕೆ ಹಿಂದಿರುಗಿರುವದರಿಂದ ಎಸ್. ಆಯ್. ರೇಲ್ವೆಯ ಜನರಲ್ ಮ್ಯಾನೇಜರರು ಒಂದು ಪ್ರಕಟನೆ ಹೊರಡಿಸಿದ್ದಾರೆ. ಇದರಿಂದ ತ್ರಿಚನಾಪಳ್ಳಿ ಮತ್ತು ಕೊಯಿಮತ್ತೂರುಗಳ ನಡುವೆ ಗಾಡಿಗಳ ಓಡಾಟವನ್ನು ಪ್ರಾರಂಭಿಸಲಾಗುವದು.

ಮದ್ರಾಸದ ಒಂದು ಸಾರ್ವಜನಿಕ ಸಭೆಯಲ್ಲಿ ತಾ. ೩೧ಕ್ಕೆ ಭಾಷಣ ಮಾಡುತ್ತ, ಡಾ. ಪಟ್ಟಾಭಿ ಸಾಧ್ಯವಿದ್ದಮಟ್ಟಿಗೆ ಹೈದರಾಬಾದದ ಪ್ರಶ್ನೆಯನ್ನು ಮಾತುಕತೆಗಳ ಮುಖಾಂತರವೇ ಬಿಡಿಸಲಾಗುವದು. ಅನಿವಾರ್ಯವೆನಿಸಿದರೆ ಯುದ್ಧವನ್ನು ಅವಲಂಬಿಸಬೇಕಾಗುವದು. ಅಂತಹ ಪ್ರಸಂಗವೇ ಬಂದಲ್ಲಿ ನಿಜಾಮರಲ್ಲಿ ಹತ್ತು ದಿನ

ಹೊಸದಿಲ್ಲಿ

ಹಳೆದಿಲ್ಲಿಯ ಕಿಂಗ್ಸವೇ ನಿರಾಶ್ರಿತರ ಶಿಬಿರದಲ್ಲಿ ಬೆಂಕಿ ಹತ್ತಿ ೧೦ ಸಾವಿರ ಜನರು ನೆಲೆದಪ್ಪಿ ನಿಂತಿದ್ದಾರೆ. ಇದರಿಂದ ೩೦೦ ಡೇರೆಗಳು ಇಪ್ಪತ್ತು ಬರಾಕುಗಳು ಸುಟ್ಟವು ವಿದ್ಯುತ್ತಿನ ಅಪಘಾತದ ಪರಿಣಾಮವಾಗಿ ಬೆಂಕಿ ಹತ್ತಿತೆಂದೂ ಗಾಳಿಬೀಸಿದ್ದರಿಂದ ಬೆಂಕಿ ಹಬ್ಬಿತೆಂದೂ ತಿಳಿದುಬಂದಿದೆ. ನಿರಾಶ್ರಿತರಿಗೆ ಶಾಲೆ ಕಾಲೇಜುಗಳಲ್ಲಿ ವಸತಿ ಕಲ್ಪಿಸುವ ವ್ಯವಸ್ಥೆ ನಡೆದಿದ್ದು ಸಾರ್ವಜನಿಕರು ನಿರಾಶ್ರಿತರಿಗೆ ಹಂಚಲು ಆಹಾರ ಧಾನ್ಯ ದಿಲ್ಲಿ ನಗರ ಭವನಕ್ಕೆ ತಂದುಕೊಡಬೇಕೆಂದು ನಿರಾಶ್ರಿತ ಕಮಿಶನರರು ಬಿನ್ನವಿಸಿದ್ದಾರೆ.

ಭಾರತ ಸರಕಾರವು ಜುನಾಗಡ ಸಂಸ್ಥಾನದಲ್ಲಿ ಜನರ ವಿಶ್ವಾಸಕ್ಕೆ ಪಾತ್ರರಾದ ೫ ಸದಸ್ಯರನ್ನೊಳಗೊಂಡ ಕಾರ್ಯಕಾರಿಮಂಡಲ ಒಂದನ್ನು ರಚಿಸಲು ನಿರ್ಧರಿಸಿದೆಯೆಂದು ಅಧಿಕೃತ ಪ್ರಕಟನೆ ಹೊರಟಿದೆ. ಮಂಡಳದ ಅಧ್ಯಕ್ಷರು ಆಡಳಿತಗಾರರೆಂದು ಕೆಲಸ ಮಾಡುವರು. ಸದಸ್ಯರಲ್ಲಿ ಎಲ್ಲ ಖಾತೆಗಳನ್ನು ಹಂಚಲಾಗುವದು. ಮಹತ್ವದ ಧೋರಣವನ್ನು ಮಂಡಳವೇ ನಿರ್ಧರಿಸುವದು ಮುಂತಾಗಿ ಭಾರತ ಸರಕಾರದ ಸಂಸ್ಥಾನ ಶಾಖೆಯನ ಪ್ರಕಟನೆ ಹೊರಟಿದೆ.

ಹಿಂದುಸ್ತಾನ ಸಂಸ್ಥಾನ ಶಾಖೆಯವರು ಒಂದು ಪ್ರಕಟನೆ ಹೊರಡಿಸಿ ಪ್ರಜೆಗಳೂ ಸಂಸ್ಥಾನಾಧಿಪತಿಗಳೂ ಸ್ವಸಂತೋಷದಿಂದ ವಿಲೀನೀಕರಣಕ್ಕೆ ಒಪ್ಪಿದರೆ ಮಾತ್ರ ಒಕ್ಕೂಟದ ಪ್ರದೇಶದಲ್ಲಿ ಸೇರಬಹುದೆಂದೂ ಈ ಬಗ್ಗೆ ಇಲ್ಲದ ಒತ್ತಾಯ ತರಲಾಗುವದಿಲ್ಲವೆಂದೂ ಸ್ಪಷ್ಟಪಡಿಸಿದ್ದಾರೆ. ಈ ಬಗೆಯ ಸ್ಪಷ್ಟೀಕರಣವನ್ನು ಈ ಮೊದಲು ಅನೇಕ ಸಲ ಕೊಡಲಾಗಿದೆ.

ಕೇಂದ್ರ ಔದ್ಯೋಗಿಕ ಸಲಹೆ ಸಮಿತಿಯನ್ನು ನೇಮಿಸುವ ಪೂರ್ವಭಾವಿಯಾಗಿ ಹಿಂದುಸ್ತಾನ ಸರಕಾರದವರು ಯೋಗ್ಯ ಕೂಲಿ, ಬಂಡವಲಿನ ಮೇಲೆ ಯೋಗ್ಯ ಲಾಭ, ಕಾದಿಟ್ಟ ನಿಧಿ ಇವುಗಳನ್ನು ನಿರ್ಧರಿಸಲು ತಜ್ಞರ ಒಂದು ಸಮಿತಿಯನ್ನು ನೇಮಿಸಿದ್ದಾರೆ.

ಬಟ್ಟೆಯ ಪರಿಸ್ಥಿತಿಯು ಜೂನ ಮಧ್ಯದೊಳಗೆ ಸುಧಾರಿಸದಿದ್ದರೆ ಹಿಂದುಸ್ತಾನ ಸರಕಾರವು ಸೂಕ್ತ ಉಪಾಯ ಕೈಕೊಂಡು ಜನತೆಗೆ ಯೋಗ್ಯ ಬೆಲೆಯಲ್ಲಿ ಬಟ್ಟೆ ಸಿಗುವಂತೆ ವ್ಯವಸ್ಥೆ ಮಾಡುವದಾಗಿ ಪ್ರಾಂತಿಕ ಸರಕಾರಗಳಿಗೆ ತಿಳಿಸಿದೆಯೆಂದು ಗೊತ್ತಾಗಿದೆ.

ಡಾ. ಜೀವರಾಜ ಮೇಥಾ ಮತ್ತು ಡಾ. ಎಂ. ಡಿ. ಡಿ. ಗಿಲ್ಡರರು ತಾ. ೨೯ಕ್ಕೆ ಡೆಹರಾಡೂನದಲ್ಲಿ ಸರದಾರ ಪಟೇಲರನ್ನು ಪರೀಕ್ಷಿಸಿ ಅವರ ಪ್ರಕೃತಿ ಸಮಾಧಾನಕರವೆಂದೂ ಶಕ್ತಿ ಬಂದಿದೆಯೆಂದೂ ಅಭಿಪ್ರಾಯ ಪಟ್ಟರು. ಆದರೂ ಶ್ರಮದ ಕೆಲಸ ಮಾಡದಿರಲು ಸಲಹೆ ಕೊಟ್ಟಿದ್ದಾರೆ.

ಸಂಸ್ಥಾನ ಶಾಖೆಯ ಕಾರ್ಯದರ್ಶಿ ಶ್ರೀ. ವಿ. ಪಿ. ಮೆನನ್‌ರು ಲಾರ್ಡ ಮತ್ತು ಲೇಡಿ ಮೌಂಟಬ್ಯಾಟನ್ನರಿಗೆ ತಾ. ೩೦ ರಂದು ಬೀಳ್ಕೊಡುವ ಸಮಾರಂಭ ಏರ್ಪಡಿಸಿದ್ದರು. ಮುಖ್ಯ ಮಂತ್ರಿ ಘಟನಾ ಸಮಿತಿಯ ಪ್ರತಿಷ್ಠಿತರೇಮೊದಲಾದ ಅಧಿಕಾರಿಗಳು ಸಮಾರಂಭಕ್ಕೆ ಆಗಮಿಸಿದ್ದರು.

ನ್ಯಾಶನಲ್ ಸೇವಿಂಗ್ಸ ಸರ್ಟಿಫಿಕೇಟುಗಳ ಮಾರಾಟವನ್ನು ಅಧಿಕೃತ ಏಜಂಟರಿಂದ ಸಾಗಿಸುವದನ್ನು ಜೂನ ೧ ರಿಂದ ನಿಲ್ಲಿಸಿಬಿಡಲು ಹಿಂದುಸ್ತಾನ ಸರಕಾರವು ನಿರ್ಧರಿಸಿದೆ. ಅದ್ದರಿಂದ ಅಧಿಕೃತ ಏಜಂಟರಾರೂ ಸರ್ಟಿಫೀಕೇಟುಗಳನ್ನು ಮಾರತಕ್ಕದ್ದಲ್ಲ; ಮಾರಿದ್ದಾದರೆ ಅವರಿಗೆ ಕಮಿಶನ ಸಿಗಲಾರದು. ಎಂದು ಸರಕಾರದ ಪ್ರಕಟನೆ ಹೊರಟಿದೆ.

ಮಹಾತ್ಮಾ ಗಾಂಧಿಯವರ ಕೊಲೆಯ ಖಟ್ಲೆಯಲ್ಲಿ ೧೨ ಆರೋಪಿಗಳಿದ್ದು ಅವರಲ್ಲಿ ಮೂವರು ತಲೆಮರಸಿಕೊಂಡು ಓಡಾಡುತ್ತಿರುವರೆಂದು ತಿಳಿಯುತ್ತದೆ. ಜಿ. ಎಸ್. ದಂತವಾಡೆ, ಗಂಗಾಧರ ರಾವ ಜಾಧವ ಮತ್ತು ಸೂರ್ಯದೇವ ಶರ್ಮ ಎಂದು ಅವರ ಹೆಸರುಗಳುಂಟು. ಓರ್ವರು ಮಾಫೀ ಸಾಕ್ಷೀದಾರರಾಗುವರೆಂದು ತಿಳಿಯುತ್ತದೆ.

ಯುದ್ಧಮಾಡುವ ಸಾಮರ್ಥ್ಯ ಕೂಡ ಇಲ್ಲವೆಂಬುದನ್ನೂ ಕಾಲಮಾನ ಪರಿಸ್ಥಿತಿಯು ನಮಗೇ ಅನುಕೂಲವಿರುವದೆಂಬುದನ್ನೂ ಜನರು ಅರಿತುಕೊಳ್ಳಬೇಕು ಎಂದು ಮುಂತಾಗಿ ಹೇಳಿದರು.

ಯುಕ್ತಪ್ರಾಂತ

ಕಾಂಗ್ರೆಸ ಶಿಸ್ತನ್ನು ಮೀರಿದ್ದಕ್ಕಾಗಿ ಸಂಯುಕ್ತಪ್ರಾಂತ ಕಾಂಗ್ರೆಸ ಸಮಿತಿಯು ೧೦೦ಕ್ಕಿಂತ ಹೆಚ್ಚು ಕಾಂಗ್ರೆಸ್ಸಿಗರಿಗೆ ಸ್ಪಷ್ಟೀಕರಣ ಕೇಳಿದೆ. ಕಳೆದ ಜಿಲ್ಹಾ ಲೋಕಲ್ ಬೋರ್ಡ ಚುನಾವಣೆಯಲ್ಲಿ ಹಲವು ಕಾಂಗ್ರೆಸಿಗರು ಕಾಂಗ್ರೆಸ ಉಮೇದವಾರರನ್ನು ವಿರೋಧಿಸಿದರೆಂಬ ಆರೋಪದ ಬಗ್ಗೆ ವರದಿಯನ್ನು ಕಳುಹಲು ಜಿಲ್ಹಾ ಕಾಂಗ್ರೆಸ ಸಮಿತಿಗಳಿಗೆ ಅಪ್ಪಣೆ ವಿಧಿಸಲಾಗಿದೆ.

ಯುಕ್ತಪ್ರಾಂತದ ಮುಸ್ಲಿಂಲೀಗಿನ ವಿಶೇಷ ಸಭೆಯಲ್ಲಿ ಹಿಂದುಸ್ತಾನದ ಮುಸ್ಲಿಂಲೀಗು ಕೇವಲ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿಷಯಗಳ ಮಟ್ಟಿಗೆ ಇರತಕ್ಕದ್ದೆಂದೂ ರಾಜಕಾರಣದಿಂದ ಅದು ಸಂಪೂರ್ಣ ನಿವೃತ್ತವಾಗಬೇಕೆಂದೂ ಯುಕ್ತಪ್ರಾಂತದ ಶಾಸನ ಸಭೆಯ ಮುಸ್ಲಿಂಲೀಗ ಪಕ್ಷವು ವಿಸರ್ಜನೆಹೊಂದಿದ್ದು ಯೋಗ್ಯವೆಂದೂ ತೀರ್ಮಾನಿಸಲಾಯಿತು.

ಹಿಂದೀ ಸಂಸ್ಥಾನ

ಇಂದೂರಿನಲ್ಲಿ ೭೬೦ ರೋಗಿಗಳನ್ನು ಇಟ್ಟುಕೊಳ್ಳಲು ಅನುಕೂಲವಾಗುವಂತಹ ಮತ್ತು ಅತ್ಯಾಧುನಿಕ ಉಪಕರಣಗಳಿಂದ ಸುಸಜ್ಜಿತವಾದ ಆಸ್ಪತ್ರೆಯೊಂದನ್ನು ಕಟ್ಟಿಸ

ಮಧ್ಯಪ್ರಾಂತ

ನಿಜಾಮ ಸೈನ್ಯದಲ್ಲಿ ಹೈದರಾಬಾದ ಸಂಸ್ಥಾನದವರಲ್ಲದವರನ್ನು ಭರತಿಮಾಡುತ್ತಿದ್ದ ಬಗ್ಗೆ ಪುರಾವೆಸಿಕ್ಕಿವೆಯೆಂದು ಮಧ್ಯಪ್ರಾಂತ ಸರಕಾರದ ಪತ್ರಿಕಾ ಪ್ರಕಟನೆ ಹೊರಟಿದೆ.

ಮಧ್ಯಪ್ರಾಂತ ವರ್‍ಹಾಡ ಸರಕಾರದವರು ವೃತ್ತಪತ್ರ, ಮಾಸಿಕ, ಹಸ್ತಪತ್ರಿಕೆ ಮೊದಲಾದವುಗಳಲ್ಲಿ ಔಷಧಗಳ ಬಗ್ಗೆ ಪ್ರಕಟವಾಗುವ ಆಕ್ಷೇಪಾರ್ಹ ಜಾಹೀರಾತುಗಳನ್ನು ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ನಿಯಂತ್ರಿಸಲು ಇದೇ ಜೂನ ೧ರಿಂದ ಜಾರಿಯಲ್ಲಿ ಬರುವಂತೆ ಒಂದು ಕಾನೂನನ್ನು ಪಾಸು ಮಾಡಿದ್ದಾರೆ. ಯಾವದೇ ಸಾರ್ವಜನಿಕ ಸ್ಥಳ ಇಲ್ಲವೆ ಅಂಗಡಿಯಲ್ಲಿ ಆಕ್ಷೇಪಾರ್ಹ ಜಾಹೀರಾತುಗಳನ್ನು ಪ್ರದರ್ಶಿಸಕೂಡದೆಂದೂ ಆ ಕಾನೂನು ವಿಧಿಸುತ್ತದೆ.

ಲಿದ್ದಾರೆ. ಅಲ್ಲದೆ ಈ ಆಸ್ಪತ್ರೆಯಲ್ಲಿ ಗಾಂಧಿ ಸ್ಮಾರಕ ಮೆಡಿಕಲ್ ಕಾಲೇಜಿನಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಸಂಶೋಧನ ಕಾರ್ಯ ನಡೆಸುವದರಲ್ಲಿಯೂ ಸಹಾಯ ಮಾಡುವದು. ಈ ಆಸ್ಪತ್ರೆಯ ಕಟ್ಟಡದ ಶಂಕು ಸ್ಥಾಪನೆಗಾಗಿ ಹಿಂದುಸ್ತಾನ ಸರಕಾರದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ ಕೌರರನ್ನು ಆಮಂತ್ರಿಸಲಾಗಿದೆ.

M. G. Regd. No 1888 "ಚಿರಾಯು" Estd. 1946

ಶ್ರೀ ಮಾರುತಿ ಕಾಂಪಿಟಿಷನ್ ನಂ. ೩೭

588 ವಿಶ್ವೇಶ್ವರಪುರಂ, ಬೆಂಗಳೂರು ನಗರ.

ಗೆಲ್ಲಿರಿ 3000 ರೂಪಾಯಿ

ಸರಿ ಉತ್ತರಕ್ಕೆ 2000 ರೂ. ೧, ೨ ಮತ್ತು ೩ ತಪ್ಪಿಗೆ 850 ರೂ. ಮೊದಲು ತಲುಪುವ ಸರಿ ಉತ್ತರಕ್ಕೆ 150 ರೂ. ಪೋಸ್ಟ್ ಮಾಡಬಹುದಾದ ಕಡೇ ದಿನ 16–6–48, ಉತ್ತರ ಬಹುಮಾನ 24–6–48.

1	ರ	ಗು	WIN	2 ಮೊ
ರ	RUPEES		OVER 300	
3 ಮ		OFFERED	4 ನ	00
5 ನೆ				6
	7 ಗು			ಮ

[ಆಧಾರಗಳು]

(ಯ. ಬಲಕ್ಕೆ) ೧ ಮೇರೆ, ಗಡಿ. ೩ ಮನುಷ್ಯನಿಗೆ... ಆತಿಯಾದರೆ ನಾನು ತಾನೆಂಬ ತಾರತಮ್ಯ ಇರುವುದೇ? ೫ ಯಾರಿಗೂ ಕುಂಟು...ಗಳನ್ನು ಹೇಳಬಾರದು. ೭ ಯುದ್ಧದಲ್ಲಿ ಶತ್ರುವಿನ ಹೊಡೆತ ತಪ್ಪಿಸಿಕೊಳ್ಳಲು ಸಮಯಾನುಸಾರ ಸಿಕ್ಕುವ...ಗಳಲ್ಲಿ ಅಣಗುವರು.

(ಮೇ. ಕೆಳಕ್ಕೆ) ೧.... ವಾಸಪ್ರಾಪ್ತಿಯಾಗಬೇಕಾದರೂ ಅವರವರು ಮಾಡಿದ ಫಲಾಫಲಗಳೇ ಕಾರಣ. ೨... ಇದನ್ನು ಉಳಿಸಿಕೊಳ್ಳಬೇಕಾದ್ದು ಪ್ರತಿಯೊಬ್ಬ ಮಾನವನಿಗೂ ಧರ್ಮ. ೪... ಮುಖವು ನೋಡುವ ಇತರರಿಗೆ ಅಸಹ್ಯ ಮಾಡುವುದಿಲ್ಲ. ೬... ವಾಗಿ ಮಾಡಿದ ಪ್ರತಿಫಲವನ್ನು ನಾವೇ ಅನುಭವಿಸುತ್ತೇವೆ.

(ಕಟ್ಟಳೆ) ಪ್ರವೇಶ ಧನ ಉತ್ತರ ತುಂಬಿದ ಚದುರ ೧ ಕ್ಕೆ ೧ ರೂ. ೩ ಕ್ಕೆ ೨ ರೂ. ೧೦ ಕ್ಕೆ ೬ ರೂ. ಯಂತೆ ಎಷ್ಟು ಸೆಟ್ಟುಗಳಾದರೂ ಬಿಳಿ ಕಾಗದದಲ್ಲಿ ದುಂಡಕ್ಷರಗಳಿಂದ ಶಾಯಿಯಲ್ಲಿ ಬರೆದು ಉತ್ತರಕ್ಕಾಗಿ ೧ ಆಣೆ ಸ್ಟಾಂಪಿಟ್ಟು ಪ್ರವೇಶ ಧನ ಮನಿಯಾರ್ಡರ ಮಾಡಿದ ರಸೀತಿ ಅಥವಾ ಕ್ರಾಸು ಮಾಡಿದ ಪೋಸ್ಟಲ್ ಆರ್ಡರ್‌ನೊಂದಿಗೆಯಾಗಲಿ ಕಳಿಸದಿದ್ದಲ್ಲಿ ತಿರಸ್ಕರಿಸಲಾಗುತ್ತೆ. ಮನಿಯಾರ್ಡರ್ ಫಾರಂ ಕೆಳಗಡೆ ಪೂರ್ತಿ ವಿಳಾಸ ಬರೆಯಿರಿ. ಮಿಕ್ಕ ರೂಲ್ಸು ಯಥಾ ಪ್ರಕಾರ.

೧೦೦೦ ರೂಪಾಯಿ ಬಕ್ಷೀಸು

ಈ ಕೆಳಗಿನ ಔಷಧಿಗಳಲ್ಲಿ ಗುಣವಿಲ್ಲೆಂದು ಸಿದ್ಧ ಮಾಡಿಕೊಟ್ಟಲ್ಲಿ

೧೦೦೦ ರೂ. ಇನಾಮು

ಶ್ರೀ. ಬಸವರಾಜ ಮೆಡಿಕಲ್ ಫಾರ್ಮಸಿ, ಬೆಳಗಾವ

ನಪುಂಸಕತ್ವಾರಿ ಗುಳಿಗೆ

(ಷಂಢತ್ವವಿನಾಶಕ ಗುಳಿಗೆಗಳು, ಕಿಮ್ಮತ್ತು ೫ ರೂ. ಅಂ. ವೆ. ಬೇರೆ)

ಮಿತಿ ಮೀರಿದ ಕಾಮುಕ ಜೀವನ, ಸ್ವಪ್ನಾವಸ್ಥೆ, ಮುಷ್ಟಿ ಮೈಥುನದ ಪರಿಣಾಮ ಹಾಗು ಅನೈಸರ್ಗಿಕ ಅಭ್ಯಾಸ ಮತ್ತು ಧಾತುಕ್ಷೀಣತೆ ಮುಂತಾದ ಯಾವದೇ ಕಾರಣದಿಂದ ಬಂದ ನಪುಂಸಕತ್ವ ಇಂದ್ರಿಯ ಶಿಥಿಲತೆ ನಾಶ ಮಾಡಿ ನವಜೀವನ ಮತ್ತು ಹೊಸ ಪುರುಷತ್ವ ಪ್ರಾಪ್ತ ಮಾಡಿ ಕೊಡುತ್ತಿದೆ. ಈ ಔಷಧ ಸೇವನೆಯಿಂದ ನಿರ್ಬಲ ಮತ್ತು ಶಿಥಿಲವಾದ ನರಗಳನ್ನು ಸಶಕ್ತವನ್ನಾಗಿ ಮಾಡಿ ೧/೪ ಕಡಕಿನಾಶವಾಗಿ ವೀರ್ಯ ವೃದ್ಧಿಯಾಗುವದು. ಪಚನ ಶಕ್ತಿ ಸುಧಾರಿಸಿ ಜಠರಾಗ್ನಿ ಉಜ್ವಲ ಮಾಡುತ್ತದೆ. ಬದ್ಧಕೋಷ್ಟ, ಅಜೀರ್ಣ, ಅಪಚನಾದಿ ವಿಕಾರಗಳನ್ನು ದೂರ ಮಾಡಿ ನಿಯಮಿತ ಮಲಶುದ್ಧಿ ಮಾಡುತ್ತದೆ. ಶಾರೀರಕ ಮತ್ತು ಮಾನಸಿಕ ಅಶಕ್ತತೆಯನ್ನು ಹೋಗಲಾಡಿಸಿ ಜ್ಞಾನತಂತು ಸತೇಜವನ್ನಾಗಿ ಮಾಡಿ ನವಜೀವನ ಪ್ರಾಪ್ತ ಮಾಡಿ ಕೊಡುತ್ತದೆ. ಎಷ್ಟೋ ಔಷಧಿಗಳನ್ನು ತೆಗೆದುಕೊಂಡು ನಿರಾಶರಾದ ಪುರಷರು ಸನ್ ೧೯೨೫ ರಿಂದ ಈ ಔಷಧದಿಂದ ಏಳು ದಿವಸಗಳಲ್ಲಿ ಪೂರ್ಣ ಗುಣ ಹೊಂದಿರುವರು. ಈ ವಿಷಯವಾಗಿ ಆದ ಎಲ್ಲ ಪತ್ರ ವ್ಯವಹಾರವನ್ನು ಗುಪ್ತವಾಗಿರಿಸಲ್ಪಡುವದು. ಅನುಪಾನ ಪತ್ರಿಕೆ ಔಷಧದ ಕೂಡ ಪಥ್ಯ ಏನೂ ಇಲ್ಲ.

ಪತ್ತೆ— ವೈದರಾಜ ಎ.ಬಿ. ಶಿದನಾಳ

ಮನೆ ನಂಬರ ೧೩೬೮ (ಕೆ.ವಿ.) ಬಸವನಗಲ್ಲಿ ಬೆಳಗಾವಿ.



ಜ್ಯೋತಿಷಿ— ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ.

ಜೂನ ೭ ರಿಂದ ೧೩ ರ ವರೆಗೆ

ಮೇಷ

ಪ್ರಕೃತಿ ಉತ್ತಮ. ಮಕ್ಕಳಲ್ಲಿ ಒಬ್ಬರ ಬಹಳ ಉನ್ನತಿ, ರತಿಸುಖ ಅನುಕೂಲ. ಉಳಿದ ವಿಷಯಗಳಲ್ಲಿ ಹೆಂಡತಿ ಮನಸ್ಸಿನವಿರುದ್ಧ ವರ್ತಿಸುವಳು ಉಳಿದ ಪ್ರಾಪಂಚಿಕ ಸುಖ ಬಹಳ ಉತ್ತಮ ಸಂತ ಮಹಾಂತರ ಭೆಟ್ಟಿ ಮತ್ತು ಸಹವಾಸ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಮತ್ತು ಒಳ್ಳೆ ಪ್ರತಿಷ್ಠೆ. ಲಾಭ ತುಂಬ ಮತ್ತು ವಿಶೇಷ ಪ್ರಿಯ ವಸ್ತುಗಳ ಸಂಗ್ರಹ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲ ಸ್ಥಿತಿ. ಮಿತ್ರರು ಬಹಳ ತೊಂದರೆ ಕೊಡುವವರು. ಮನಸ್ಸು ಉದ್ವಿಗ್ನಗೊಳ್ಳುವದು. ಪ್ರವಾಸಾದಿ ಕೆಲಸ ಬಹಳ ಉತ್ತಮ. ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೭, ೮, ೯, ೧೩ ಅನುಕೂಲ.

ವೃಷಭ

ಪ್ರಕೃತಿ ಮತ್ತು ಪ್ರಾಪಂಚಿಕಸುಖ ಉತ್ತಮ. ಪ್ರಿಯ ಮತ್ತು ಪೂಜ್ಯ ಜನರ ಸಹವಾಸ. ಸಂಗ್ರಹದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ಕೆಲ ವಿಷಯಗಳಲ್ಲಿ ನಿರರ್ಥಕ ವೆಚ್ಚ ಬಂಧುವರ್ಗದವರಲ್ಲಿ ಮತ್ತು ಮಕ್ಕಳಲ್ಲಿ ಉನ್ನತಿ. ಸ್ವಪ್ನ ಬಿದ್ದಂತೆ ಪ್ರತ್ಯಕ್ಷ ಕೃತಿ ಸಂಭವಿಸುವ ಚಮತ್ಕಾರ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಆದರೆ ಮನಸ್ಸು ಶೋಧಿಸದಿದ್ದಂಥ ಕ್ಷುಲ್ಲಕ ವಾಸನೆಯನ್ನು ತಾಳಿ ಆ ಬಗ್ಗೆ ಮನಸ್ಸು ಚಂಚಲವಾಗುವದು ಮತ್ತು ಗಾಬರಿಗೊಳ್ಳುವದು ಪ್ರವಾಸಾದಿ ಕೆಲಸ ಹಿತದ್ದು. ಕೃತ್ತಿಕೆಯ ಕೊನೆಯ ೩ ಮತ್ತು ರೋಹಿಣಿಯ ಮೊದಲನೆ ೩ ಚರಣಗಳಿಗೆ ತೊಂದರೆಯೆ. ತಾ. ೭, ೮, ೯, ೧೦ ಅನುಕೂಲ.

ಮಿಥುನ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಗೊಂದಲವುಂಟಾಗುವಂತಹ ಕೆಲ ಆಗಂತುಕ ಪ್ರಸಂಗಗಳು. ಉದ್ಯೋಗದಲ್ಲಿ ಪ್ರಗತಿ ಕಡಿಮೆ. ಆದರೆ ಪ್ರತಿಷ್ಠೆ ಮತ್ತು ಲಾಭ ಅನುಕೂಲ. ಪ್ರತಿಯೊಂದರಲ್ಲಿಯೂ ಕಲ್ಪನಾತೀತ ಮಿತ್ರ ಸಹಾಯ. ಸರಿಬಾರದ ಸಂಗತಿ ಮಾಡುವತ್ತ ಮನಸ್ಸಿನ ಓಟ. ಸರಕಾರಿ ಕೆಲಸದಲ್ಲಿ ದುಷ್ಟ ಮತ್ತು ಲಂಚಗುಳಿ ಅಧಿಕಾರಿಗಳ ಕಡೆಯಿಂದ ಬಹಳ ತೊಂದರೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವಿಜಯ ಬಹಳ. ಆದರೆ ಆ ಮಾನದಿಂದ ವೆಚ್ಚ ಮತ್ತು ತೊಂದರೆ ವಿಪರೀತ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಆರಿದ್ರೆಯ ಕೊನೆಯ ೩ ಮತ್ತು ಪುನರ್ವಸುವಿನ ಮೊದಲನೆ ೩ ಚರಣಗಳಿಗೆ ತೊಂದರೆ ಬಹಳ. ತಾ. ೮, ೯, ೧೩, ಅನುಕೂಲ.

ಕರ್ಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ. ಆದರೂ ಹೆಂಡತಿಯು ಭಿಡೆಭಾರಣ ಹಿಡಿಯದೆ ದುರುತ್ತರ ಕೊಡುತ್ತ ಸಾಗುವದರಿಂದ ಮನಸ್ಸು ಬಹಳ ಬೇಜಾರಗೊಳ್ಳುವದು. ಮನೆಯ ಇಲ್ಲವೆ ಊರಿನ ತೊಂದರೆ ಬೆಳೆದು ನಿರರ್ಥಕವಾಗಿ ಅಡ್ಡಾಡುವ ಇಚ್ಛೆ. ಉದ್ಯೋಗದಲ್ಲಿ ಪ್ರಗತಿ ಕಡಿಮೆ ಆದರೆ ಪ್ರತಿಷ್ಠೆ ಮತ್ತು ಲಾಭ ಅದಕ್ಕಿಂತ ಅನುಕೂಲ. ಸಾಲಗಾರರ ತಗಾದೆ ಬಹಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಎರಡನೆಯವರ ಠೀವಿಯಲ್ಲಿ ಬೆಳೆವುದರಿಂದ ಆಯುತ್ತ ಸಮಯಕ್ಕೆ ಬಹು ಫಜೀತಿ ಮತ್ತು ಮೋರೆ ಸಪ್ಪಗೆ ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಪುಷ್ಯದ ಕೊನೆಯ ೩ ಮತ್ತು ಆಶ್ಲೇಷಾದ ಮೊದಲನೆ ೩ ಚರಣಗಳಿಗೆ ತೊಂದರೆ ಬಹಳ. ತಾ. ೭, ೧೨, ೧೩ ಅನುಕೂಲ.

ಸಿಂಹ

ಹೆಂಡತಿಯ ಪ್ರಕೃತಿಯ ಹೊರತು ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಆಪ್ತರಲ್ಲಿ ಪೂಜ್ಯ ಸ್ತ್ರೀಯರ ಸಹವಾಸ, ನಿಮ್ಮ ಮಹತ್ವ ಬೆಳೆಯುವದಕ್ಕೆ ಬಹಳ ವೆಚ್ಚ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ಜವರವರಲ್ಲಿ ಸಮಾಜಕಂಟಕರಾದ ಜನರ ಸಹಾಯದ ಅವಶ್ಯಕತೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಮಿತ್ರರಲ್ಲಿ ಮತ್ತು ಬಂಧುವರ್ಗದವರಲ್ಲಿ ಉನ್ನತಿ ಮತ್ತು ಮಂಗಲ ಕಾರ್ಯಗಳು. ಪ್ರವಾಸಾದಿ ಕೆಲಸ ಹಿತದ್ದು. ಸರಕಾರೀ ನೌಕರರಲ್ಲಿ ಸುಖ ಮತ್ತು ಭಾಗ್ಯವೃದ್ಧಿಯ ಯೋಗ ಹೆಚ್ಚು. ಮಘಾದ ಕೊನೆಯ ೩ ಮತ್ತು ಪೂರ್ವಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ ೭, ೮, ೯, ೧೩ ಅನುಕೂಲ.

ಕನ್ಯಾ

ಎಲ್ಲರ ಪ್ರಕೃತಿ ಉತ್ತಮ ಆದರೆ ನಿಮ್ಮ ನಿಮ್ಮಲ್ಲಿ ಮತಭೇದ ಶಿಖರಕ್ಕೆ ಮುಟ್ಟುವದು. ಎಲುಬಿಲ್ಲದ ನಾಲಿಗೆಯಂತೆ ಮಾತಾಡುವದು. ಬಂಧುವರ್ಗದವರಲ್ಲಿ ವಿಶೇಷ ವಿರೋಧ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ ಆದರೆ ಅವಶ್ಯಕ ಸಂಗತಿ ಅರ್ಥಕ್ಕೆ ಉಳಿದು ಏನೇನೋ ಮಾಡಬೇಕೆಂಬ ಹುಚ್ಚುತನ. ವೆಚ್ಚ ವಿಪರೀತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಆದರೆ ದುಡ್ಡು ವೆಚ್ಚ ಮಾಡಬೇಕಾದಲ್ಲಿ ರೂಪಾಯಿ ವೆಚ್ಚ ಮಾಡುವ ಸರತಿ. ಪ್ರವಾಸಾದಿ ಕೆಲಸ ಹಿತದ್ದು. ಉತ್ತರಾದ ಕೊನೆಯ ೩ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೭, ೮, ೯, ೧೦ ಅನುಕೂಲ.

ತುಲಾ

ಮಕ್ಕಳ ವರ್ತನೆಯ ದಗದಗಿ ಹತ್ತುವಂತಹದು ಮತ್ತು ಲೋಕಾಪವಾದ ಕೇಳಬೇಕಾದುದು ಗ್ರೈರಶಿಸ್ತು. ಆದರೆ ಪ್ರಕೃತಿ ಹೆಂಡತಿ ಮತ್ತು ಉಳಿದ ಪ್ರಾಪಂಚಿಕ ಸುಖ ಬಹಳ ಉತ್ತಮ. ಅವಚಿತ ಲಾಭದ ಇಲ್ಲವೆ ಪರಿಷ್ಕಾರ ಅಥವಾ ಆಶ್ರಯದಾತರ ಕೃಪೆಯಿಂದ ಕೈಗೊಂಡು ದುಘಂಟ ಕೆಲಸ ಯಶಸ್ವಿಯಾಗುವದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪೂರ್ಣ ಅನುಕೂಲತೆ. ಒಬ್ಬ ಮಿತ್ರರು ದೂರ ಸ್ಥಳಾಂತರ ಹೊಂದುವದರಿಂದ ವಿರಹ. ಪ್ರವಾಸಾದಿ ಕೆಲಸ ಹಿತದ್ದು. ಸ್ವಾತಿಯ ಕೊನೆಯ ೩ ಮತ್ತು ವಿಶಾಖಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೮, ೯, ೧೨, ೧೩ ಅನುಕೂಲ.

ವೃಶ್ಚಿಕ

ಹೆಂಡತಿಗಿಂತ ನಿಮ್ಮ ಪ್ರಕೃತಿ ಹೆಚ್ಚು ಅನುಕೂಲ ಪ್ರಾಪಂಚಿಕ ಸುಖ ಉತ್ತಮ. ಪರಸ್ತ್ರೀಯ ಬಗ್ಗೆ ವಿಚಾರಣೆ ನಡೆಸಿದ ಸತ್ಯ ಮತ್ತು ಸುಳ್ಳು ಬೊಬ್ಬಾಟ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅತ್ಯುತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವಿಜಯ. ಸಭೆಯಲ್ಲಿ ಇಲ್ಲವೆ ಬೌದ್ಧಿಕ ಸ್ಪರ್ಧೆಯಲ್ಲಿ ಪ್ರತಿಪಕ್ಷಿಗಳ ಮೇಲೆ ಮೇಲುಗೈ ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಹೆಚ್ಚು ಅನುಕೂಲ. ಅನುರಾಧೆಯ ಕೊನೆಯ ೩ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು ತಾ. ೭, ೧೧, ೧೨, ೧೩ ಅನುಕೂಲ.

ಧನು

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಮಕ್ಕಳ ಉನ್ನತಿ ಇಲ್ಲವೆ ವರ್ತನೆಯ ಬಗ್ಗೆ ಬಹಳ ಚಿಂತೆ ಹಚ್ಚುವಂಥ ಪ್ರಸಂಗ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲವೆಂದು ಹೇಳಬಹುದು. ಉದ್ಯೋಗದಲ್ಲಿ ಪ್ರಗತಿ ಸಾಮಾನ್ಯ. ಆದರೆ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಮಿತ್ರರಿಂದ ಸಹಾಯ. ಆದರೆ ಶತ್ರುಗಳಿಂದ ಸಹಾನುಭೂತಿ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಮೂಲಾದ ಕೊನೆಯ ೩ ಮತ್ತು ಪೂರ್ವಾಷಾಢಾದ ಮೊದಲನೇ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೮, ೯, ೧೨, ೧೩ ಅನುಕೂಲ.

ಮಕರ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ. ಆದರೆ ಹೆಂಡತಿ ಮನಸ್ಸಿನ ವಿರುದ್ಧ ಕೆಲಸದಲ್ಲಿ ಅತಿ ವೆಚ್ಚ ಮಾಡುವಳು ಉದ್ಯೋಗದಲ್ಲಿ ಲಾಭ ಅನುಕೂಲ. ಆದರೆ ಪ್ರಗತಿ ಮತ್ತು ಪ್ರತಿಷ್ಠೆ ಬಹಳ ಕಡಿಮೆ. ಅದರಲ್ಲಿಯೂ ನೌಕರರಿಗೆ ಸ್ವಲ್ಪ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯಪಕ್ಷಗಳಲ್ಲಿ ಸಮಾನ ಸ್ಥಿತಿ ಆದರೆ ಒಬ್ಬ ಹೆಣ್ಣುಮಗಳು ಹೇತುವಾಗಿ ಶತ್ರುತ್ವ ಮಾರುವ ಯೋಗ ಮನೆಯಲ್ಲಿ ಭೂತ ಸಂಚಾರ ದಂಥ ಕೆಲ ಚಮತ್ಕಾರ ಸಂಭವಿಸುವ ಯೋಗ. ಪ್ರವಾಸಾದಿ ಕೆಲಸ ಅತಿ ತೊಂದರೆಯದು ಆದರೆ ಉತ್ತರಾಷಾಢಾದ ಕೊನೆಯ ೩ ಮತ್ತು ಶ್ರವಣದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ ೭, ೧೦, ೧೧ ಅನುಕೂಲ.

ಕುಂಭ

ಪ್ರಕೃತಿ ಸಾಧಾರಣವೆ ಬಂಧುವರ್ಗದವರೊಡನೆ ಪ್ರತ್ಯಕ್ಷ ವೈರ ಬೆಳೆವಂಥ ಸಂಗತಿಗಳು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ ಆದರೆ ಪ್ರತಿಯೊಂದರಲ್ಲಿ ಹೆಂಡತಿಯ ಮೇಲುಗೈ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅತ್ಯಧಿಕ ಹಣಾಧಿಕಾರದ ಕೆಲವೊಂದು ವಸ್ತು ಅಂಗಡಿಯವ ಇಲ್ಲವೆ ಮನೆಯಲ್ಲಿ ಯಾವನೊಬ್ಬ ಹೊತ್ತುಕೊಂಡು ಹೋಗುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಪ್ರವಾಸಾದಿ ಕೆಲಸ ಮನಸ್ಸಿನಂತೆ, ಶತತಾರಿಕೆಯ ಕೊನೆಯ ೩ ಮತ್ತು ಪೂರ್ವಾಭಾದ್ರಪದದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೮, ೯, ೧೩ ಅನುಕೂಲ.

ಮೀನ

ಪ್ರಕೃತಿ ಉತ್ತಮ ಆಗಂತುಕ ಉದ್ಭವಿಸುವ ಸಂಗತಿಗಳಿಂದ ಅಲ್ಪ ಸ್ವಲ್ಪ ತೊಂದರೆಯಾದರೂ ಪ್ರಾಪಂಚಿಕ ಸುಖ ಉತ್ತಮ. ಆಪ್ತರಲ್ಲಿ ಒಬ್ಬ ದೊಡ್ಡ ವ್ಯಕ್ತಿಯ ಸಹವಾಸ. ಉದ್ಯೋಗದಲ್ಲಿ ಪ್ರಗತಿ ಸಾಮಾನ್ಯ ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಸಾರ್ವಜನಿಕ ಕೆಲಸದಲ್ಲಿ ಬಹಳ ತೋರಿಕೆಯ ಮಾನ. ಮಿತ್ರಸುಖ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ವಿಜಯ ದೊರೆತು ಶತ್ರುಗಳು ಚಿಂದಾಪಿಂದಿಯಾಗುವರು ಪ್ರವಾಸಾದಿ ಕೆಲಸ ಅಪೇಕ್ಷೆಗಿಂತ ಹೆಚ್ಚು ಅನುಕೂಲ. ಉತ್ತರಾಭಾದ್ರಪದದ ಕೊನೆಯ ೩ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೭, ೧೦, ೧೧, ೧೨ ಅನುಕೂಲ.

ಹರಟೆ

ಸೀಸೆಯಲ್ಲಿ ಸಿಕ್ಕದ ಸಿದ್ಧೌಷಧಿಗಳು

ಅರ್ಥಾತ್

ಸುಲಭ ಚಿಕಿತ್ಸೆ

ಲೇ— ಶ್ರೀ ಬಿ. ಎಚ್. ಶ್ರೀಧರ ಎಂ. ಎ.

ಜರ್ಮನಿಯಲ್ಲಿ ಹಿಂದೆ ಒಬ್ಬ ಡಾಕ್ಟರನಿದ್ದನಂತೆ ಅವನಿಗೊಂದು ಕಾಗುವಿತ್ತು. ಆ ಮಗು ವರ್ಷಗಟ್ಟಲೆ ಕಾಹಿಲೆಯಿಂದ ನರಳುತ್ತಿದ್ದು ಔಷಧ ಕುಡಿಯುವುದೇ ಅದಕ್ಕೆ ಹಿಂಸೆಯಾದೀತು ಎನಿಸಿ ಡಾಕ್ಟರನು ಬಹಳ ಕಾಲ ಸಂಶೋಧ ನಡೆಸಿದ ಆಗ ಅವನು "ಹೋಮಿಯೋಪೆಥಿ" ಪದ್ಧತಿಯನ್ನು ರೂಪಿಸಿ ಅದರ ಪ್ರಕಾರ ಚಿಕ್ಕ ಚಿಕ್ಕ ಸಕ್ಕರೆ ಗುಳಿಗೆಗಳನ್ನು ತಯಾರಿಸಿ ತನ್ನ ಮಗುವಿಗೆ ಕೊಟ್ಟು ಅದರ ರೋಗವನ್ನು ಗುಣಪಡಿಸಲು ಶಕ್ತನಾದನು. ಇದು ಔಷಧ ಕುಡಿಯುವ ಕಷ್ಟವನ್ನು ಕಡಿಮೆ ಮಾಡುವ ಪ್ರಯತ್ನಗಳಲ್ಲಿ ಮೊದಲನೆಯದು.

ಆದರೆ ಮೇಲಿನ ಔಷಧವನ್ನು ಕಾಸು ಕೊಟ್ಟು ಅಂಗಡಿಯಿಂದ ಕೊಳ್ಳಬೇಕು; ಬಾಟಲಿಯಲ್ಲಿ ಇಲ್ಲವೆ ಪೊಟ್ಟಣಗಳಲ್ಲಿ ತುಂಬಿಟ್ಟುಕೊಳ್ಳಬೇಕು- ಇಷ್ಟೆಲ್ಲ ತೊಂದರೆಗಳಿವೆ ನಮ್ಮ ಪುಣ್ಯಭೂಮಿಯಾದ ಭರತಖಂಡದಲ್ಲಿ ಅನೇಕ ಜನ ಯತಿತತಿಚಕ್ರವರ್ತಿಗಳೂ ದಾಸದಾಸಾನುದಾಸರೂ ತಮ್ಮ ಅವಿಶ್ರಾಂತಶ್ರಮದಿಂದ, ಅಸಂಖ್ಯ ವರ್ಷಗಳ ತಪೋಬಲದಿಂದ, ಆತ್ಮಶಕ್ತಿಯನ್ನು ನೀರು ಮಾಡಿ ಮೇಲೆ ವಿವರಿಸಿದ ಯಾವ ತೊಂದರೆಗಳೂ ಇಲ್ಲದ ಅತ್ಯಂತ ಸುಲಭವಾದ ಚಿಕಿತ್ಸಾ ಪದ್ಧತಿಯನ್ನು ನಮಗೆ ಕಲಿಸಿ ಹೋಗಿದ್ದಾರೆ. ತತ್ವಶಾಸ್ತ್ರಜ್ಞರ ನಾಡೆಂದು ಹೆಸರಾದ ಇಲ್ಲಿ ಈ ಅಮೂಲ್ಯ ಸಿದ್ಧೌಷಧಗಳು ಬೆಲೆಯಿಲ್ಲದೆ ಸಿಕ್ಕುತ್ತಿರುವಾಗ, ನಮ್ಮಲ್ಲಿ ಇತರ ಅಲೋಪಥಿ ಆಪಥಿ ಈಪಥಿ ಔಷಧಗಳಿಗೆ ಮಾರುಕಟ್ಟೆ ಸಿಕ್ಕೀತೆ? ಸ್ಪರ್ಧೆಯೂ ನಿರ್ಮೂಲ್ಯ ವ್ಯಾಪಾರದ ಮುಂದೆ ನಿಲ್ಲದು. ಅಂತಹ ಔಷಧಗಳ ಪಟ್ಟಿಯನ್ನು ತೆಗೆದು ನೋಡಿದರೆ ಧನ್ವಂತರಿಗಾದರೂ ಒಮ್ಮೆ ತನ್ನ ಔಷಧ ತಯಾರಿಕೆಯ ಅನುಭವದ ಬಗ್ಗೆ ಸಂಶಯವುಂಟಾಗಬಹುದು. ಒಂದು ಔಷಧ ನೋಡಿರಿ—

> ಶರೀರೇ ಜರ್ಜರೀಭೂತೇ
> ವ್ಯಾಧಿಗ್ರಸ್ತೇ ಕಳೇಬರೇ
> ಔಷಧಂ ಜಾಹ್ನವೀತೋಯಂ
> ವೈದ್ಯೋ ನಾರಾಯಣೋ ಹರಿಃ

ಶರೀರ ಜರ್ಜರಿತವಾದಾಗ ಗಂಗೋದಕದ ಒಂದು ಗುಟುಕನ್ನು ಕುಡಿದು ಬಿಟ್ಟರೆ ಆರೋಗ್ಯ ಉಂಟಾಗುವುದೆಂದು ನಿತ್ಯವೂ ಈ ನಾಡಿನಲ್ಲಿ ಅನೇಕ ಜನರು ವಿಗ್ರಹ ತೊಳೆದ ನೀರನ್ನು ಕುಡಿಯುತ್ತಿದ್ದಾರೆ— ಕಟ್ಟಿ ಬಟ್ಟೆಯಿಲ್ಲದೆ ಅಂಗೈ ಮೇಲೆ ಸುರಿದುಕೊಂಡು!

ಮೇಲಿನ ನೀರು ಕುಡಿವ ವಿಧಾನವು ಆಧುನಿಕ ನಿಸರ್ಗ ಚಿಕಿತ್ಸೆಗೆ ಮೂಲವೆನಿಸಿದ ಪ್ರಾಚೀನ ಭಾರತೀಯ ಸಿದ್ಧಾಂತಕ್ಕೆ ಸೇರಿದ್ದು. ಅದರ ಪ್ರಕಾರ ಜಲಪಾನ, ತೀರ್ಥಸ್ನಾನ, ಮೃತ್ತಿಕಾ ಸ್ನಾನ, ಭಸ್ಮ ವಿಲೇಪನ ಮುಂತಾದ ಪ್ರಯೋಗಗಳು ಪರಿಣಾಮಕಾರಿಗಳೆಂದು ಹೇಳಲಾಗಿದೆ. ಸಾಕ್ಷಾತ್ ಶಿವನನ್ನು ಭಸ್ಮೋದ್ಧೂಲಿತ ವಿಗ್ರಹನೆಂದು ವರ್ಣಿಸಲಾಗಿದೆ. ಬೀದಿಯ ಬೈರಾಗಿಗಳಂತೂ ಸ್ವತಃ ನಿಸರ್ಗ ಚಿಕಿತ್ಸೆಯ ಸಾಕಾರ ಸ್ವರೂಪರೇ. ಒಂದು ತುಳಸೀದಳ ತಿಂದು ಬಿಡುವುದು, ಊದಿ ಮಂತ್ರಿಸಿ ಹಣೆಗೆ ಹಚ್ಚಿಕೊಳ್ಳುವುದು ಇವೆಲ್ಲ ಹಿಂದೂಸ್ತಾನದಲ್ಲಿ ಹಳೆಯ ಕಾಲದಲ್ಲೇ ಪ್ರಾರಂಭವಾದ ಸುಲಭ ಚಿಕಿತ್ಸಾ ಚಳವಳದ ಬೀಜಗಳೆಂದೇ ತಿಳಿಯಬೇಕು.

> "ಅಕಾಲ ಮೃತ್ಯುಹರಣಂ
> ಸರ್ವವ್ಯಾಧಿ ನಿವಾರಣಂ
> ಸರ್ವಪಾಪೋಪಶಮನಂ
> ವಿಷ್ಣು ಪಾದೋದಕಂ ಶುಭಂ"

—ಎಂದರೆ, ಗಂಗಾಸ್ನಾನ, ತುಂಗಾಪಾನ, ಎನ್ನುವುದು ನಮ್ಮಲ್ಲಿ ರೂಢಿಯ ಗಾದೆ. ಮೊದಲು ಇಂಗ್ಲೀಷು ಕಲಿತ ಕೆಲ ಮಂದಿ ಇದು ಬರಿ ಹುಚ್ಚು ಎಂದರು. ಆದರೆ ಇತ್ತೀಚೆಗೆ ಕೆಲವು ವಿಜ್ಞಾನಿಗಳು ಗಂಗೆಯ ಜಲದಲ್ಲಿ ಕೆಲವು ಕ್ಷಾರಗಳಿದ್ದು ಅವುಗಳ ಗುಣದಿಂದ ಶರೀರದ ಎಷ್ಟೋ ಕಾಹಿಲೆಗಳು ವಾಸಿಯಾಗುವುವೆಂದು ಕಂಡು ಹಿಡಿದಿದ್ದಾರೆ. ಹೀಗೆ New proofs for old heorems— ಹಳೆಯ ಸಿದ್ಧಾಂತಗಳಿಗೆ ಎಷ್ಟೋ ಹೊಸ ಪ್ರಮಾಣಗಳು ಸಿಕ್ಕುತ್ತವೆ. ಸೆಗಣಿಯಲ್ಲಿ ಕ್ರಿಮಿನಾಶಕ ಗುಣವಿದೆ ಎಂಬುದು ಈಗ ಗೊತ್ತಾದುದು ಇದಕ್ಕೆ ಮುಖ್ಯ ನಿದರ್ಶನ.

ದರಿದ್ರ ಬದ್ಧಿಯವರ ದೇಶವಾದ ಇಲ್ಲಿ ಅಗ್ಗ ಬೆಲೆಯ ವಸ್ತುಗಳಿಗೆ ಜನರು ಬಾಯಿ ನೀರು ಕರೆಯುತ್ತ ಕಾಯುತ್ತ, ಪುಕ್ಕಟೆ ಸಿಗುವ ವಸ್ತುಗಳು ಅಗ್ಗದರದ ವಸ್ತುಗಳಿಗಿಂತ ಶ್ರೇಷ್ಠವೆಂಬ ತತ್ವಕ್ಕೆ ಕೆಲವು ಸಾವಿರ ವರ್ಷಗಳ ಹಿಂದೆ ಬಂದು ಮುಟ್ಟಿದರು. ಅಲ್ಲಿಂದ ಪುಕ್ಕಟೆ ಸಿಕ್ಕರೂ ಹೋಮಾರಿತನವನ್ನು ಬಿಟ್ಟು ಕಾಯಕ್ಲೇಶವನ್ನು ಕೈಕೊಂಡು ಬಳಸಬೇಕಾದ ಹಿಂದೆ ಹೇಳಿದ ಸ್ನಾನ, ಪಾನ, ಲೇಪನಾದಿ ನಿಸರ್ಗ ಚಿಕಿತ್ಸಾ ವಿಧಾನಗಳನ್ನು ದೂರಕ್ಕಟ್ಟಿ, ವಿಚಾರವನ್ನು ಮುಂಬರಿಸಿ ಅತಿಸುಲಭ ಚಿಕಿತ್ಸೆಗಳನ್ನು ಕಂಡು ಹಿಡಿಯಲು ತಜ್ಞರು ಸಮರ್ಥರಾದರು. ಈ ಚಿಕಿತ್ಸೆಗಳಲ್ಲಿ ದೃಶ್ಯಸ್ಪೃಶ್ಯವಸ್ತುಗಳ ಬಳಕೆಯೇ ಅನಗತ್ಯ. ಅವು ಕೇವಲ ಧ್ವನಿಮೂಲ್ಯವುಳ್ಳವು. ಉಚ್ಚಾರಣ ಮಾತ್ರದಿಂದ ಬಾಯಲ್ಲೇ ಕೆಲವು ದ್ರಾವಕಗಳು ತಯಾರಾಗಿ ಅವುಗಳ ಪಾನದಿಂದ ನಿಮಿಷಾರ್ಧದಲ್ಲಿ ಅಪೇಕ್ಷಿತ ಪರಿಣಾಮ ಉಂಟಾಗುವದು. ಉದಾಹರಣೆಗಾಗಿ ಸಹಸ್ರನಾಮ ಪಾರಾಯಣ ಕೇವಲ ನಾಮೋಚ್ಚಾರಣ ಮಾತ್ರದಿಂದ "ಭಕ್ತಿಸುಧೆ" ಎಂಬ ದ್ರಾವಕ ತಯಾರಾಗಿ ಅದರ ಸೇವನೆಯಿಂದ ದೈಹಿಕ, ಮಾನಸಿಕ,

—೧೬ನೆಯ ಪುಟಕ್ಕೆ

Reg No. B. 3748

Licensed to Post without Prepayment

ಪುಸ್ತಕ ಪರಿಚಯ

(ನಮಗೆ ಬಂದ ಎಲ್ಲ ಪುಸ್ತಕಗಳನ್ನು ಸಾದರದಿಂದ ಸ್ವೀಕರಿಸಿದ ಉಲ್ಲೇಖ ಮಾಡುವೆವಾದರೂ ಆ ಎಲ್ಲವುಗಳ ವಿಮರ್ಶೆ ಮಾಡಿಯೇ ತೀರುವೆವೆಂದು ಗ್ರಹಿಸಕೂಡದಾಗಿ ಈ ಮೂಲಕ ತಿಳಿಸಬಯಸುತ್ತೇವೆ. —ಸಂ.)

ಬಾಪೂಜಿಗೆ ಬಾಷ್ಪಾಂಜಲಿ

ಬರೆದವರು ಶ್ರೀ ಕುವೆಂಪು. ಪ್ರಕಾಶಕರು ಕಾವ್ಯಾಲಯ, ಮೈಸೂರು. ಪುಟ ಸಂಖ್ಯೆ ೨೦, ಬೆಲೆ ಎಂಟಾಣೆ.

ಶ್ರೀ ಕುವೆಂಪುರವರು ಗಾಂಧಿಯುಗದ ಬಗ್ಗೆ ಹೇಳಿದ್ದು ಮತ್ತು ಹಾಡಿದ್ದನ್ನು ಸಂಗ್ರಹಿಸಿ ಮೇಲೆ ಕಾಣಿಸಿದ ಹೊತ್ತಗೆಯಲ್ಲಿ ಕೊಡಲಾಗಿದೆ. ಮೊದಲನೆಯ ಪದ್ಯದ "ನಮ್ಮ ಮಹಾತ್ಮನ್ ಮುಕ್ತಿದ್ವಾರ?" ಎಂಬ ಕಲೆಬರಹದಿಂದಲೆ ಇದು ಎಂಥ ಹೊತ್ತಗೆ ತೆಗೆ ಕೆಲಸ ಮೇಲೋ ಗರ ಎಂದು ಹೇಳಿ ಬಿಡಬಹುದು. ಇದರಲ್ಲಿ ೭ ಕವನಗಳು ಮತ್ತು ೧ ಪದ್ಯ ಮಧ್ಯಗಳ ಗದ್ಯ ಇವೆ. ಗದ್ಯವೊಂದು ಭಾಷಣ, ಅದು ಸ್ಫೂರ್ತಿದಾಯಕವಾಗಿದೆ. ಕವನಗಳು ವಿಶಿಷ್ಟವಾದ ಹೊಸ ಮೈಸೂರು ಶೈಲಿಯಲ್ಲಿ ಬರೆದ ಓದುಗಬ್ಬಗಳಾಗಿವೆ. ಕೆಲವು ಮಾತುಗಳು ರಸವತ್ತಾಗಿವೆ.

ಸೃಷ್ಟಿ ಸಂಯುಕ್ತೆ (ಚಿಕ್ಕ ನಾಟಕ)

ಲೇಖಕರು. ಎಂ. ಗೋವಿಂದರೆಡ್ಡಿ, ಮುದ್ರಕರು, ವಿ. ರಾಮಕೃಷ್ಣ ಅಂಡ ಕೋ. ನಂ. ೨೪೪. ಚಿಕ್ಕ ರೋಡ, ವಿಶ್ವೇಶ್ವರಪುರ, ಬೆಂಗಳೂರು ನಗರ ಪುಟಗಳು ೬೪. ಬೆಲೆ ೧ ರೂ.

ಐತಿಹಾಸಿಕ ಪ್ರಸಂಗವನ್ನು ಬಳಸಿ ಬರೆದ ಚಿಕ್ಕ ನಾಟಕ ಇದು. ಇತ್ತೀಚಿನ ಜಾತೀಯ ಜ್ವಾಲೆಯೇ ಇದನ್ನು ಬರೆಯಲು ಕಾರಣವಾಯಿತೆಂದು ಲೇಖಕರು ಹೇಳಿದ್ದಾರೆ. ಇದನ್ನು ಜನಸಾಮಾನ್ಯರೆಲ್ಲರೂ ರಂಗಭೂಮಿಯ ಮೇಲೆ ನೋಡಿ ಸರಿಯಾದ ಹಾದಿಗೆ ಬರಬೇಕೆಂದು ಬರೆಹಗಾರರು ಉದ್ದೇಶಿಸಿದ್ದರೆ ಈ ಪುಸ್ತಕದಲ್ಲಿ ಬಳಸಿದ ಭಾಷೆಯು ಜನಗಳ ನಡಿಗೆಯಲ್ಲಿ ಪಾಕ್ಷ ಹಾಕಿದ್ದು ಸರಿಯಲ್ಲವೆಂದು ಹೇಳದಿರಲಾರೆವು. ಅಲ್ಲದೆ ಶೈಲಿ ಇಂಥ ಬಹಳ ಶಿಥಿಲವಾಗಿ ನಿರೂಪಣೆಯು ಬಲವೇ ಉಡುಗಿ ಹೋಗಿದೆ. ಒಟ್ಟಿನ ಮೇಲೆ ಮಾತಿನ ಉದ್ದುದ್ದವಾಗಿದ್ದ ಸಂದರ್ಭಗಳೇ ಹೆಚ್ಚು. ಇಷ್ಟು ಚಿಕ್ಕ ಪುಸ್ತಕಕ್ಕೆ ಮೂರು ಪುಟಗಳ ತಿದ್ದುಪಡಿಯೂ ಬಹಳ ವಾಯ್ತು.

ವಸ್ತ್ರ ಸ್ವಾವಲಂಬನ ಕೈಪಿಡಿ

ಅನುವಾದಕರು, ಶ್ರೀ ರಾ. ಸಾಹುಕಾರ ಪ್ರಕಾಶಕರು, ಶ್ರೀ ರಾಮಚಂದ್ರ ವಡವಿ, ಕರ್ನಾಟಕ ಚರಖಾ ಸಂಘ ಕಚೇರಿ, ಹುಬ್ಬಳ್ಳಿ, ಪುಟಗಳು ೧೦೨. ಕೈಕಾಗದ. ಬೆಲೆ ೧ ರೂ ೪ ಆ.

ಕಳೆದ ೨೮ ವರ್ಷಗಳಿಂದ ಖಾದಿಯು ನಮ್ಮ ದೇಶದ ರಾಷ್ಟ್ರೀಯ ಜೀವನದಲ್ಲಿ ಬಹು ದೊಡ್ಡ ಪಾತ್ರ ವಹಿಸಿದೆ. ಈ ಪುಸ್ತಕದಲ್ಲಿ ಪ್ರಶ್ನೋತ್ತರ ರೂಪವಾಗಿ ಅನೇಕ ಮಾತುಗಳನ್ನು ತಿಳಿಯಾಗಿ ತಿಳಿಸಿ ಕೊಡಲಾಗಿದೆ. ಹತ್ತಿಯು ನಯವಾಗಿ ನೂಲಾಗಿ ವಸ್ತ್ರವಾಗಿ ಹೊರ ಬರುವ ವರೆಗಿನ ಎಲ್ಲ ಹೆಜ್ಜೆಗಳನ್ನೂ ನಿರೂಪಿಸಿ ಬರೆಹಗಾರರು ವಸ್ತ್ರ ಸ್ವಾವಲಂಬನದ ಹಾದಿಯನ್ನು ಸುಗಮಗೊಳಿಸಿದ್ದಾರೆ. ಸರ್ವ ಸಂಗ್ರಾಹ್ಯ ಹಾಗೂ ಈ ಬಗ್ಗೆ ವಿಶೇಷ ಆಸಕ್ತಿ ಇದ್ದವರೆಲ್ಲರೂ ಓದಿ ವಿಷಯವನ್ನು ಗ್ರಹಿಸಬೇಕಾದ ಪುಸ್ತಕವಿದು.

ವಸ್ತ್ರ ಸ್ವಾವಲಂಬನ ಮಾರ್ಗದರ್ಶಿಕೆ

ಅನುವಾದಕರು, ಶ್ರೀ ಶ್ರೀ. ರಾ. ಸಾಹುಕಾರ, ಪ್ರಕಾಶಕರು, ಶ್ರೀ ವಡವಿ ರಾಮಚಂದ್ರ, ಮಂತ್ರಿ ಕರ್ನಾಟಕ ಚರಖಾ ಸಂಘ ಕಚೇರಿ, ಹುಬ್ಬಳ್ಳಿ. ಪುಟಗಳು ೬೦ ಬೆಲೆ ೧೦ ಆಣೆ.

ಈ ಪುಸ್ತಕದ ಮುಖ್ಯ ವಿಷಯ ನಿರೂಪಣೆಯು ಮೊದಲು ಶ್ರೀ ಕ. ಜ. ಭಾಗವತರ ಹಿನ್ನೆಲೆಯಿದೆ. ಇದರಲ್ಲಿ ವಿವಿಧ ದೃಷ್ಟಿಕೋನದಿಂದ ಸ್ವಾವಲಂಬನವನ್ನು ಪರಿಶೀಲಿಸಿ, ಗ್ರಾಮ ಪ್ರಧಾನ ರಾಷ್ಟ್ರ ಹಾಗು ಉದ್ಯೋಗ ಪ್ರಧಾನ ಗ್ರಾಮ, ಗ್ರಾಮೋದ್ಯೋಗಗಳಲ್ಲಿ ಖಾದಿಯ ಸ್ಥಾನ, ಜೀವನ ಹಾಗೂ ಸಂಸ್ಕೃತಿ ಎಂಬ ವಿಷಯಗಳ ಬಗ್ಗೆ ಉಪಯುಕ್ತವಾದ ಸಾಲ್ಯ ಮಾತುಗಳನ್ನು ಹೇಳಲಾಗಿದೆ. ಬಗೆಬಗೆಯ ಕೋಷ್ಟಕಗಳ ಮತ್ತು ಅಂಕಿ ಸಂಖ್ಯೆಗಳ ನೆರವಿನಿಂದ ಹೇಳುವ ವಿಷಯವನ್ನು ಒಳ್ಳೆ ಪರಿಣಾಮಕಾರಿಯಾಗಿ ಮುಂದಿಸಿದೆ. ಹಳ್ಳಿಗರು ಮೊದಲ್ಗೊಂಡು ಈ ದಿಸೆಯಲ್ಲಿ ವಿಚಾರಿಸುವ ಹಾಗೂ ಕೆಲಸ ಮಾಡುವ ಎಲ್ಲರಿಗೂ ಉಪಯುಕ್ತವಾದ ಪುಸ್ತಕವಿದು.

Two Commonwealths:

by K. E. Holme. Publishers: George G. Harrap & Co. Ltd., London. Price Rs. 6/9/-

"The Soviets and Our-selves" ಎಂಬ ಗ್ರಂಥ ಮಾಲೆಯಲ್ಲಿ ಪ್ರಕಟವಾದ ಈ ಪುಸ್ತಕ ಬ್ರಿಟಿಶ ಕಾಮನ್‌ವೆಲ್ತ ಮತ್ತು ಸೋವಿಯಟ್ ರಶಿಯಾಗಳ ಸಾಮ್ಯ-ವೈಷಮ್ಯಗಳನ್ನು ಚರ್ಚಿಸುತ್ತದೆ. ಸೋವಿಯಟ್ ರಾಜ್ಯವನ್ನು ಬ್ರಿಟಿಶ ಜನತೆಗೆ ಪರಿಚಯ ಮಾಡಿಕೊಡುವ ಉದ್ದೇಶದಿಂದ ಇದು ಬರೆಯಲ್ಪಟ್ಟಿದ್ದರೂ ಭಾರತೀಯ ವಾಚಕರಿಗೆ ಅದರ ಉಪಯುಕ್ತತೆಯೇನು ಕಡಿಮೆಯೆನ್ನಬಾರದು. ರಶಿಯನ್ ನಡೆವಳಿಯಲ್ಲಿ ತೋರಿಬರುವ ವೈಚಿತ್ರ್ಯಗಳಿಗೆ ಬೇಗನೆ ಅಳಿಸಲು ಬಾರದ ಐತಿಹಾಸಿಕ ಹಿನ್ನೆಲೆಯ ಕಾರಣ ಬ್ರಿಟಿಶ ರಾಜಕೀಯ ಬೆಳವಣಿಗೆಗೂ ರಶಿಯನ್ ಬೆಳವಣಿಗೆಗೂ ಇರುವ ಭೇದವೇನು ಮತ್ತು ಕ್ರಾಂತಿಯ ನಂತರ ರಶಿಯನ್ನರು ಸಾಧಿಸಿದ ಮಹಾಕಾರ್ಯಗಳಾವವು ಇತ್ಯಾದಿ ವಿಷಯಗಳನ್ನು ಮನೋರಂಜಕವಾಗಿಯೂ ಮನವರಿಕೆಯಾಗುವಂತೆಯೂ ಬಣ್ಣಿಸಲಾಗಿದೆ. ಅಸಂತೋಷಕ್ಕೆ ಕಾರಣವಾಗಬಹುದಾದ ಚಿಲ್ಲರೆ ವಿಷಯಗಳಿಗೆ ಪ್ರಾಶಸ್ತ್ಯ ಕೊಡದೆ ಸೋವಿಯಟ್ ರಾಜ್ಯದ ವಿಶಾಲ ರೂಪರೇಷೆಯನ್ನು ಕೊಡುವದರಲ್ಲಿ ಇದು ಯಶಸ್ವಿಯಾಗಿದ್ದು ಬ್ರಿಟಿಶ ಸೋವಿಯಟ್ ಜೀವನಗಳಿಗೆ ಸಂಬಂಧಿಸಿದ ಅನೇಕ ಚಿತ್ರಗಳೂ ನಕ್ಷೆ—ನಕಾಶೆಗಳೂ ಪುಸ್ತಕದ ಉಪಯುಕ್ತತೆಯನ್ನು ಬಹಳ ಹೆಚ್ಚಿಸಿವೆ. ಇಂದಿನ ಕಲುಷಿತ ವಾತಾವರಣ ಕಾಲಿಡುವ ಮೊದಲೇ (೧೯೪೫) ಪ್ರಕಟವಾದ ಈ ಪುಸ್ತಕ ಪ್ರತಿಯೊಬ್ಬ ಜಿಜ್ಞಾಸುವಿಗೆ ಸಂಗ್ರಾಹ್ಯವಾಗಿದೆ. ಹಿಂದುಸ್ತಾನದಲ್ಲಿ ಈ ಪುಸ್ತಕವನ್ನು ಮುಂಬಯಿಯ ನ್ಯೂ ಬುಕ್ ಕಂಪನಿ ಲಿ. ಇವರಿಂದ ಪಡೆಯಬಹುದು.

The Future of the Colonies:

by Julian Huxley and Phillis Deane The Pilot Press Limited, Price: Rs. 4/-

ಯುರೋಪಿಯನ್ನರೂ ಅವರನ್ನು ಈಚೆಗೆ ಅನುಸರಿಸಿದ ಜಪಾನೀಯರೂ ಕಳೆದ ೫ ಶತಕಗಳಿಂದ ಜಗತ್ತಿನ ವಿವಿಧ ಭಾಗಗಳಲ್ಲಿ ಔದ್ಯೋಗಿಕ ವಿಷಯದಲ್ಲಿ ಹಿಂದುಳಿದ ದೇಶಗಳನ್ನು ಗೆದ್ದು, ಹಲವೊಗ್ಗಿದಲ್ಲಿ ಮೂಲನಿವಾಸಿಗಳನ್ನು ನಿರ್ನಾಮ ಮಾಡಿ ತಾವೇ ನೆಲಸಿ ಇತರ ಭಾಗಗಳಲ್ಲಿ ಶೋಷಣೆ ನಡೆಸಿದುದೇ ಇಂದು ಕೆಲ ಮಟ್ಟಿಗೆ ಬಿಡಿಸಲ್ಪಟ್ಟಿದ್ದರೂ ಇನ್ನೂ ಉಳಿದಿರುವ ವಸಾಹತು ಅಥವಾ ಸಾಮ್ರಾಜ್ಯ ಸಮಸ್ಯೆಯ ಮೂಲ. ಪ್ರಸ್ತುತ ಪುಸ್ತಕದಲ್ಲಿ ಪ್ರಸಿದ್ಧ ಲೇಖಕರಾದ ಜೂಲಿಯನ್ ಹಕ್ಸ್ಲೆ ಮತ್ತು ಫಿಲಿಸ್ ಡೀನ್ ಇವರು ಈ ಸಮಸ್ಯೆಯ ಅದ್ಯಂತವನ್ನು ವಿವೇಚಿಸಿ ಸಾಮ್ರಾಜ್ಯ ಸಮಸ್ಯೆಗೆ ಪರಿಹಾರೋಪಾಯಗಳನ್ನು ಸೂಚಿಸಿದ್ದಾರೆ. ಸಾಮ್ರಾಜ್ಯ ವಿಸ್ತರಣೆಯಲ್ಲಿ ಮೊದಲಿಗರಾದ ಬ್ರಿಟಿಶರು ಕೆಲ ಮಟ್ಟಿಗೆ ಯುದ್ಧಾನಂತರ ಅವನ್ನು ಬಿಡಿಸಲು ಯತ್ನಿಸಿದ್ದರೂ ಉಗ್ರ ಸಾಮ್ರಾಜ್ಯವಾದಿ ರಾಷ್ಟ್ರಗಳು ಹಳೆಯ ದಾರಿಯನ್ನೇ ಹಿಡಿದಿರುವದು ಹಕ್ಸ್ಲೆಯವರು ಈ ಪುಸ್ತಕದಲ್ಲಿ ಮುಂನೋಡಿದ (೧೯೪೪ ರಲ್ಲಿ) "ಭವಿತವ್ಯ" ವನ್ನು ಬಹಳ ಮಟ್ಟಿಗೆ ಸುಳ್ಳಾಗಿಸಿದೆ. ಆದರೆ ಅನೇಕ ಚಿತ್ರ ನಕಾಶೆಗಳಿಂದ ಕೂಡಿದ ಈ ಹೊತ್ತಿಗೆ ಈ ಸಮಸ್ಯೆಯನ್ನು ಅರಿತುಕೊಳ್ಳಬಯಸುವವರಿಗೆ ಸಹಾಯಕವಾಗದಿರದು. ಮುಂಬಯಿಯ ನ್ಯೂ ಬುಕ್ ಕಂಪನಿಯವರಿಂದ ಈ ಪುಸ್ತಕವನ್ನು ಪಡೆಯಬಹುದು.

ಶತ್ರ ಜೀವಿ

ಬರೆದವರು, ಶ್ರೀ ಎಸ್. ಸೂರಪ್ಪ. ಪ್ರಕಾಶಕರು, ಉಷಾ ಸಾಹಿತ್ಯಮಾಲೆ, ಮೈಸೂರು. ಪುಟ ೧೨೪, ಬೆಲೆ ೧॥ ರೂ.

ಇದು ಶ್ರೀ ಸೂರಪ್ಪನವರ ಪ್ರಥಮ ಕಾದಂಬರಿ. ಅವರು ಸಣ್ಣ ಕತೆಗಳನ್ನು ಬರೆದು ಹೆಸರಾದವರು. ಶತ್ರ ಜೀವಿಯೂದ ಶ್ಯಾಮಸುಂದರರಾವ ನಾಯಕ ಅವನೊಬ್ಬ ಶತ್ರ ಮಾರ್ಗಗಾಮಿ, ವಿವೇಕಿ, ಜಗತ್ತಿನ ನಾನಾ ಅನುಭವಗಳಿಂದ ಹಣ್ಣಾದ ಸಾತ್ವಿಕ ಜೀವ. ಅವನ ಪಾತ್ರ ಚೆನ್ನಾಗಿ ಪರಿಪೋಷಿಸಲ್ಪಟ್ಟಿದೆ. ಕಥೆಯಲ್ಲಿ ಎಲ್ಲಿಯೂ ಸ್ವಾರಸ್ಯ ಕೆಡುವುದಿಲ್ಲ. ಶ್ರೀ ಸೂರಪ್ಪನವರ ಈ ಪ್ರಯತ್ನ ಸ್ವಾಗತಾರ್ಹವಿದೆ.

ಸಾದರ ಸ್ವೀಕಾರ

ಭೀಮಸೇನ ಬೇಬಿ (ಸಾಮಾಜಿಕ ದೃಶ್ಯ)

ಲೇಖಕರು, ಟಿ. ಸದಾಶಿವಯ್ಯ. ಪ್ರಕಾಶಕರು, ಬಿ. ಶ್ರೀನಿವಾಸಯ್ಯಂಗಾರ. ಅರಳೀ ಪೇಟೆ, ಬೆಂಗಳೂರು ನಗರ. ಪುಟಗಳು ೨೬. ಬೆಲೆ ೫ ಆಣೆ.

ಸಂಘಟನೆಯ ಗುಟ್ಟು

ಲೇಖಕರು, ಡಾ. ನಾ. ಸು. ಹರ್ಡೀಕರ ಪ್ರಕಾಶಕರು, ಶಂ. ಬಾ. ಮುನಗೋಳಿ, ಮ. ನಂ. ೧೦೫೨೬, ದಾಜೀಬಾ ಪೇಟೆ, ಹುಬ್ಬಳ್ಳಿ. ಪುಟಗಳು ೬೨. ಬೆಲೆ ೧೨ ಆಣೆ

ಕರ್ಮಯೋಗಿ (ನಾಟಕ)

ಬರೆದವರು, ತಿರುಕ. ಪ್ರಕಾಶಕರು, ಅನಾಥ ಸೇವಾಶ್ರಮ, ಮಲ್ಲಾಡಿಹಳ್ಳಿ ಪೋಸ್ಟ. ಹೊಳಲ್ಕೆರೆ ತಾಲೂಕು. ಪುಟಗಳು ೧೩೭. ಬೆಲೆ ೧ ರೂ ೮ ಆ.

SANJEEVAN (New Leaf)

A Monthly Magazine Hon. Editor, Prof. J. C. DARUVALA Published by The Provincial Prohibition Board, Government of Bombay. Pages 42, Single Copy 8 Ans. Annual Subscription. Rs 6/-

ಸೀಸೆಯಲ್ಲಿ ಸಿಕ್ಕದ ಸಿದ್ಧೌಷಧಿಗಳು

(೧೫ನೆಯ ಪುಟದಿಂದ)

ಐಹಿಕ, ಆಮುಷ್ಮಿಕ ರೋಗಗಳೆಲ್ಲ ಮಾಯವಾಗುವುವೆಂದು ಅನೇಕ ಗ್ರಂಥಗಳಲ್ಲಿ ಕೂಗಿ ಹೇಳಲಾಗಿದೆ. ಇದನ್ನು ಆಧುನಿಕರು 'ನಾರಾಯಣೋಪೆಥಿ' ಎಂದು ಕರೆಯುತ್ತಾರೆ.

ದಾಸವರ್ಯರು ಈ ಪದ್ಧತಿಗೆ ಅಮೂಲಾಗ್ರ ಬೆಂಬಲಕೊಟ್ಟರು. ಅವರ —

" ರಾಮನಾಮ ಪಾಯಸಕ್ಕೆ
ಕೃಷ್ಣನಾಮ ಸಕ್ಕರೆ
ವಿಠಲನಾಮ ತುಪ್ಪಹಾಕಿ
ಬಾಯಿ ಚಪ್ಪರಿಸಿರೋ "

" ನೀನ್ಯಾಕೋ ನಿನ್ನ ಹಂಗ್ಯಾಕೋ
ನಿನ್ನ ನಾಮದಬಲವೊಂದಿದ್ದರೆ ಸಾಕೋ "

" ಕಲ್ಲುಸಕ್ಕರೆ ಕೊಳ್ಳಿರೊ......
ಫುಲ್ಲಲೋಚನ ಶ್ರೀ ಕೃಷ್ಣನಾಮವೆಂಬ "

ಮುಂತಾದ ಹಾಡುಗಳು ನಾಮಾಮೃತವನ್ನೂ ಶರಣರ ವಚನಗಳಲ್ಲಿ ವಚನಾಮೃತವನ್ನೂ ಪೇಟೆಂಟ್ ಮಾಡಿ ಕೊಳ್ಳಲಾಗಿದೆ. ಧಾರಣೆ ಏರಿದ ಈ ಕಾಲದಲ್ಲಿ ಖರ್ಚಿಲ್ಲದ ಇಂಥ ಪಾಯಸಗಳು ಯಾರಿಗೆ ಬೇಡ! ಇವು ನಾರಾಯಣೋಪೆಥಿಗಿಂತಲೂ ಮುಂದುವರಿದ 'ನಾಮೋಪೆಥಿ'. ಒಂದುಸಲ ದೇವರ ಹೆಸರು ಹೇಳಿದರೆ ಅಜಾಮಿಳನಿಗೆ ಎಲ್ಲ ರೋಗಗಳಿಗೂ ಮೂಲವಾದ ಭವರೋಗ ನಿವಾರಣವಾದಂತೆ ಸರ್ವ ರೋಗಿಗಳಿಗೂ ಸರ್ವರೋಗನಿವಾರಣವಾಗುವುದೆಂದು ಸಾರಲಾಗಿದೆ. ಈ ಸಿದ್ಧಾಂತಕ್ಕೆ ಅಧುನಿಕ ಪುರಸ್ಕರ್ತರೆಂದರೆ ಮಹಾತ್ಮಾ ಗಾಂಧಿಯವರು. ಅವರು ರಾಮನಾಮದ ಜಪದಿಂದ ದರಿದ್ರರು ದಾರಿದ್ರ್ಯರೋಗಾದಿಗಳನ್ನೂ ಕಷ್ಟದಲ್ಲಿ ಸಿಕ್ಕಿದ ಹೆಂಗಸರು ತಮ್ಮ ಶೀಲವನ್ನೂ ರಕ್ಷಿಸಿಕೊಳ್ಳಬಹುದೆಂದು ಜಗತ್ತಿಗೇ ಸಂದೇಶ ಕೊಟ್ಟಿದ್ದಾರೆ. ರಾಮನಾಮವು ತಾರಕವೆಂದು ಹೊಗಳಿದ ಭಕ್ತರನ್ನು ಲೆಕ್ಕಿಸಲು ಸಾಧ್ಯವಿಲ್ಲ. ಅದರ ಉಚ್ಚಾರಣ ಸೌಲಭ್ಯವು ಒಮ್ಮೆ ರಾಂ ಎಂದು ಉಚ್ಚರಿಸಿದರೆ ತಿಳಿದು ಬರುತ್ತದೆ. ಇದರ ಮೇಲೆ ಮತ್ತೊಬ್ಬರು ರಾಮನಾಮದ ಸಾಮರ್ಥ್ಯಕ್ಕೆ ವೈಜ್ಞಾನಿಕ ಅನುಕೂಲ ತರ್ಕವನ್ನು ಹೇಳಿದ್ದಾರೆ. ರಾಮನಾಮವನ್ನು ಜಪಿಸುವುದರಿಂದ ಹೊಟ್ಟೆಯಲ್ಲಿ ಕೆಲವು ಸ್ನಾಯುಗಳಿಗೆ ವಿಶಿಷ್ಟವಾಗಿ ಅವುಗಳು ಚಲಿಸತೊಡಗಿ, ಅಗ್ನಿಮಾಂದ್ಯಾದಿ ಜಠರ ಕೋಶದ ರೋಗಗಳು ನಿವಾರಣೆಯಾಗುವವು ಎಂದು ಬರೆದಿದ್ದಾರೆ!

ಮುನಿಗಳು, ಭಕ್ತರು, ದಾಸರು, ಶರಣರು ತತ್ವಜ್ಞರು ಮುಂತಾದವರು ಭಾರತದ ಎಂ. ಡಿ. ಗಳೆಂದರೆ ಅತಿಶಯೋಕ್ತಿಯಾಗಲಾರದು. ಈ ಸಾಲಿಗೆ ಕವಿಗಳನ್ನು ಸೇರಿಸಬಹುದು. ಅಮರು ಎಂಬ ಸಂಸ್ಕೃತ ಕವಿ ಅಮರುಶತಕವೆಂಬ ಶೃಂಗಾರ ಕಾವ್ಯವನ್ನು ಬರೆದು ಸೂರ್ಯನಿಗರ್ಪಿಸಿ ಕುಷ್ಠ ರೋಗದಿಂದ ಮುಕ್ತನಾದನೆಂದು ಇತಿಹಾಸ ಹೇಳುತ್ತದೆ. ಈ ಪಂಥಕ್ಕೆ ಸೇರಿದ ಅತ್ಯಾಧುನಿಕ ಕನ್ನಡ ಕವಿಗಳೊಬ್ಬರು ಮೊನ್ನೆ ಒಂದು ಕವನದಲ್ಲಿ ತಮ್ಮ ಪೇಟೆಂಟೆಂದು "ಸುಪ್ರೇಮಸುಧೆ" ಎಂಬುದರ ಜಾಹೀರಾತನ್ನು ಪ್ರಕಾಶನಕ್ಕಾಗಿ ಕಳುಹಿದ್ದಾರೆ ಅದು ಹೀಗಿದೆ:—

"ಬಾಳಬಟ್ಟಲಿನಲ್ಲಿ
ತುಂಬಿ ಸುಪ್ರೇಮಸುಧೆ
ಕುಡಿಯೊ ನೀಗುವದಿಂದೆ
ಜನ್ಮ ಜನ್ಮದ ಬಾಧೆ

೨

ನಿನ್ನ ಬಗೆ ಹಿಗ್ಗುವದು
ನಿನ್ನರಿವು ಅರಳುವದು
ನೀ ಪರಮನಾಗುವಿಯೊ
ಮೇಲು—ಕೀಳುಗಳಳಿದು

೩

ವಿಶ್ವವನು ಸುಡುತಿರುವ
ಸಂಶೋಧಗಳು ಸಾಕು!
ಜಗಕೆ ಸಗ್ಗವ ಬರಿಸೆ
ಪ್ರೇಮವೊಂದೇ ಬೇಕು!"

ಇದು ಯಾರಿಗಾದರೂ ಈ ವರೆಗೆ ಗೊತ್ತಿತ್ತೆ? ಯಾರಾದರೂ ಈ ವರೆಗೆ ಈ "ಸುಪ್ರೇಮಸುಧೆ" ಯನ್ನು ತಯಾರಿಸಿದ್ದುಂಟೇ? ಈ ಕವಿಗಳಲ್ಲಿ ಇದು ಸಿಗುತ್ತದೆಂದು ಗುಂಡೋದರರು ತಿಳಿಸುತ್ತಾರೆ. ಮಾನವನು ಮತ್ತೇನನ್ನೂ ಹಡುಕತಕ್ಕದ್ದು ಅವಶ್ಯವಿಲ್ಲ, ಸಂಶೋಧನ ಮಾಡತಕ್ಕದ್ದೇ ಇಲ್ಲ. ಇಲ್ಲಿ ಸಿದ್ಧೌಷಧ ಕಾದಿದೆ ಎಂಬುದನ್ನು ತಿಳಿಸಲು ಸಂತೋಷವಾಗುತ್ತದೆ. ಈ ಔಷಧ ಮಾನವರೆಲ್ಲರ ಕಪಾಟಿನಲ್ಲಿ ಇಲ್ಲದ್ದರಿಂದ ಅವರು ಅನೇಕ ಸಂಶೋಧನಗಳಲ್ಲಿ ತೊಡಗಿ ಬಳಲುತ್ತಿದ್ದಾರೆ. ಅಂಥ ಕತ್ತಲಲ್ಲಿ ತಡಹುವ ಮಂದಿ ಇತ್ತ ಲಕ್ಷ್ಯವಿತ್ತು ಈ ಕವಿಗಳ ಕಾರಖಾನೆಯಿಂದ ಉಕ್ತ ಔಷಧವನ್ನು ತರಿಸಿಕೊಳ್ಳುವದು ಸರ್ವ ಸುಲಭವಲ್ಲವೆ? ಏಕೆಂದರೆ, ಇದು ಹಿಂದೆ ಹೇಳಿದ ಪುರಂದರದಾಸರ "ಫುಲ್ಲಲೋಚನ ಶ್ರೀಕೃಷ್ಣನಾಮವೆಂಬ ಕಲ್ಲುಸಕ್ಕರೆ"ಯಂತೆ ಎತ್ತ ಹೋದರೂ ಬಾಡಿಗೆ ಸುಂಕ ಬೆಲೆಗಳಿಲ್ಲದ ಉತ್ತಮ ಸರಕೆಂದೇ ನಂಬಬಹುದಾಗಿದೆ. ಅಮೇರಿಕದಲ್ಲಿ ಉತ್ಪಾದನದ ಖರ್ಚಿನ ೧೬ ಪಟ್ಟು ಮಾರುವ ಬೆಲೆಯನ್ನು ಪ್ರತಿಯೊಂದು ಔಷಧಕ್ಕೂ ಹಚ್ಚುವರಂತೆ. ಅಂತಹ ಭಯ ಇದರ ಬಗ್ಗೆ ಇಟ್ಟುಕೊಳ್ಳಬೇಕಾಗಿಲ್ಲ. ಇದರ ಬೆಲೆ ಸೊನ್ನೆ ಇರುವುದರಿಂದ ಸೊನ್ನೆಗೆ ಎಷ್ಟರಿಂದ ಗುಣಿಸಿದರೂ ಸೊನ್ನೆಯೇ ಲಬ್ಧವಾಗುವುದು ಎಂಬ ಗಣಿತಶಾಸ್ತ್ರದ ಆಧಾರ ಬೆಂಬಲಕ್ಕಿದೆ.

ಇಷ್ಟೆಲ್ಲ ಹೇಳಿದ ಮೇಲೆ ಒಂದು ಎಚ್ಚರಿಕೆಯನ್ನು ಕೊಡದಿದ್ದರೆ ಸುಲಭ ಚಿಕಿತ್ಸೆಯ ಬಗೆ ಹಲವರು ತಪ್ಪು ತಿಳವಳಿಕೆಯನ್ನು ತಾಳುವ ಸಂಭವವಿದೆ. ಅದೆಂದರೆ, ಅದರ ಬೆಲೆ ಸೊನ್ನೆ ಎಂದು ಸಾರಿದಾಕ್ಷಣ 'Nothing comes out of nothing-ಸೊನ್ನೆಯಿಂದ ಸೊನ್ನೆಯೇ ಲಭ್ಯ' ಎಂಬ ಆಸುರೀ ತರ್ಕವನ್ನು ಈ ದೈವೀ ಚಿಕಿತ್ಸಾ ಪದ್ಧತಿಗೆ ಹಚ್ಚಲು ಹೋಗದಂತೆ ರೋಗಿಗಳು ಮನಸ್ಸಿನ ಮೇಲೆ ನಿಯಂತ್ರಣ ಹೇರಬೇಕು. ಇಲ್ಲದಿದ್ದರೆ ಅನಾಹುತ ಸಂಭವಿಸುವುದು ಖಂಡಿತ!

ದಿ ನೂತನ ಆಯುರ್ವೇದ ಕಾರ್ಯಾಲಯ ಲಿ. ವಿಜಾಪುರ

ಪರಮಾರೋಗದ ಮೇಲೆ
(Gonorrhoea)
ಪೂಯಮೇಹಾರಿ

ತಟ್ಟಿಸಿ-ನೋವಾಗಿ ಉರಿಮೂತ್ರ ಮೂತ್ರದಲ್ಲಿ ಕೀವು, ಸಂಧಿವಾತ ಬಿಳೀಸೆರಗು, ಧಾತುಕ್ಷೀಣತೆಗಳನ್ನು ಗುಣಪಡಿಸುತ್ತದೆ.

ಹುಬ್ಬಳ್ಳಿ ಶಾಖೆ:- ಕೊಪ್ಪೀಕರ ರೋಡ, ಹುಬ್ಬಳ್ಳಿ

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪುರೋಹಿತರವರಿಂದ ಮುದ್ರಿಸಿ ಪ್ರಕಟಿಸಲಾಯಿತು.